ಗೌಡ ಸಾರಸ್ವತರ ಮೂಲ ಮತ್ತು ಪ್ರಸರಣ

ಆಂಗ್ಲ ಮೂಲ

ಡಾ| ಸೂರ್ಯನಾಥ್ ಕಾಮತ್, M.A., Phd

ಕನ್ನಡ ಅನುವಾದ:

ಬಿ. ಶಾಂತಾರಾಮ ಬಾಳಿಗಾ

ಸಂಪಾದಕರು, 'ಪಂಚ್ಕಾದಾಯಿ',

ಕೊಂಕಣಿ ಮಾಸಪತ್ರಿಕೆ



ಪ್ರಕಾಶಕರು

ಬಿ. ರಾಧಾಕೃಷ್ಣ ಬಾಳಿಗಾ

ಕೃಷ್ಣ ವಿಟ್ಠಲ ಪ್ರಕಾಶನ

ಮಂಗಳೂರು

2003

ಗೌಡ ಸಾರಸ್ವತರ ಮೂಲ ಮತ್ತು ಪ್ರಸರಣ

ಆಂಗ್ಲ ಮೂಲ

ಡಾ| ಸೂರ್ಯನಾಥ್ ಕಾಮತ್, M.A., Phd

ಕನ್ನಡ ಅನುವಾದ:

ಬಿ. ಶಾಂತಾರಾಮ ಬಾಳಿಗಾ

ಸಂಪಾದಕರು, 'ಪಂಚ್ಕಾದಾಯಿ',

ಕೊಂಕಣಿ ಮಾಸಪತ್ರಿಕೆ



ಪ್ರಕಾಶಕರು

ಬಿ. ರಾಧಾಕೃಷ್ಣ ಬಾಳಿಗಾ

ಕೃಷ್ಣ ವಿಟ್ಠಲ ಪ್ರಕಾಶನ

ಮಂಗಳೂರು

2003

ಗೌಡ ಸಾರಸ್ವತರ ಮೂಲ ಮತ್ತು ಪ್ರಸರಣ

(ಕನ್ನಡ ಅನುವಾದ)

ಮೂಲ	:	The Origin and spread of Gouda Saraswats by Dr. Suryanath Kamath
ಕನ್ನಡ ಅನುವಾದ	:	ಬಿ. ಶಾಂತಾರಾಮ ಬಾಳಿಗಾ, ಸಂಪಾದಕರು 'ಪಂಚ್ಕಾದಾಯಿ' ಕೊಂಕಣಿ ಮಾಸಪತ್ರಿಕೆ
ಪ್ರಕಾಶಕರು	:	ಬಿ. ರಾಧಾಕೃಷ್ಣ ಬಾಳಿಗಾ ಕೃಷ್ಣವಿಟ್ಠಲ ಪ್ರಕಾಶನ, ಮಂಗಳೂರು ಇವರಿಂದ ಪ್ರಕಾಶಿತ Ph. 2441447
ಮುದ್ರಣ	:	ಮನೋರಮಾ ಪ್ರಿಂಟರ್ಸ್ Ph. : 2222683
ಕನ್ನಡ ಪ್ರತಿಯ ಮುದ್ರಣ	:	2003
ಪುಟಗಳು	:	42+4
ಬೆಲೆ	:	ರೂ.15/-
ಪ್ರತಿಗಳು ಲಭ್ಯವಿರುವ ಸ್ಥಳ	:	

1. ಬಿ. ಮಂಜುನಾಥ ಬಾಳಿಗಾ,
   ಶ್ರೀ ವೆಂಕಟ್ರಮಣ ದೇವಳದ ಆಶ್ರಯದಲ್ಲಿ,
   ರಥಬೀದಿ, ಮಂಗಳೂರು.
2. ಸ್ಕೂಲ್ ಬುಕ್ ಕಂಪನಿ,
   ರಥಬೀದಿ, ಮಂಗಳೂರು.
3. ವಿಜಯಾ ಬುಕ್ ಹೌಸ್,
   ರಥಬೀದಿ, ಮಂಗಳೂರು.
4. ಸಾಹಿತ್ಯ ಕೇಂದ್ರ, ಮಂಗಳೂರು.

ಮುನ್ನುಡಿ

'ಗೌಡ ಸಾರಸ್ವತರ ಮೂಲ ಮತ್ತು ಪ್ರಸರಣ' ಈ ಕನ್ನಡ ಕಿರು ಹೊತ್ತಗೆಯನ್ನು ಕನ್ನಡಕ್ಕೆ ಅನುವಾದಿಸಿದವರು ಶ್ರೀ ಬಿ. ಶಾಂತಾರಾಮ ಬಾಳಿಗಾರವರು. ಕೊಂಕಣಿ ಮಾಸಪತ್ರಿಕೆಯಾದ 'ಪಂಚ್ಕಾದಾಯಿ'ಯ ಸಿಹಿ ಹಂಚಿದವರು. ಮೂಲ ಆಂಗ್ಲ ಪುಸ್ತಕ ಬರೆದವರು ಚರಿತ್ರಾರ್ಹ ವ್ಯಕ್ತಿ. ಚರಿತ್ರೆಯ ಪ್ರಾಧ್ಯಾಪಕ ಬಹು ಪುಸ್ತಕಗಳ ವಿಮರ್ಶಕ, ಲೇಖಕ ಹಾಗೂ ಪರಿಶೋಧಕ ತಜ್ಞರಾದ ಡಾಕ್ಟರ್ ಸೂರ್ಯನಾಥ ಕಾಮತರು. ಶ್ರೀ ಕಾಮತರೇ ಅಂದಂತೆ ಮೂಲ ಪುಸ್ತಕಕ್ಕೆ ಅವರಿಗೆ ಗೋಕರ್ಣ ಮಠಾಧೀಶರಾದ ಶ್ರೀಮಾನ್ಯ ವಿದ್ಯಾಧಿರಾಜ ತೀರ್ಥರೇ ಪ್ರೇರಣೆ ಹಾಗೂ ಶ್ರೀಶ್ರೀಗಳವರ ಆಶೀರ್ವಾದವೇ ಸ್ಫೂರ್ತಿ ಎಂದು ತಿಳಿಯುತ್ತದೆ.

ಮೂಲ ಆಂಗ್ಲ ಪುಸ್ತಕ ಎರಡನೇ ಆವೃತ್ತಿ ಕಂಡದ್ದು ಈ ವಿಚಾರಗಳಲ್ಲಿ ಜನರಿಗೆ ಮೂಡಿರುವ ಅಭಿರುಚಿಯನ್ನು ತೋರಿಸುತ್ತದೆ. ಆದರೆ ಈ ಪುಸ್ತಕ ಕನ್ನಡದಲ್ಲಿ ಭಾಷಾನುವಾದ ಹೊಂದಿದ್ದರೆ ಇನ್ನೂ ಹೆಚ್ಚಿನ ಜನರಿಗೆ ನಮ್ಮ 'ಗೌಡ ಸಾರಸ್ವತರ ಮೂಲ ಮತ್ತು ಪ್ರಸರಣ' ಪ್ರಸಾರವಾಗಬಹುದು ಎಂಬ ಇಚ್ಛೆಯನ್ನಿಟ್ಟು ಈ ಕನ್ನಡ ಪುಸ್ತಕವನ್ನು ಬಿಡುಗಡೆ ಮಾಡುವ ಸತ್ಕಾರ್ಯವನ್ನು ಕೃಷ್ಣ ವಿಟ್ಠಲ ಪ್ರಕಾಶನ ಮಂಗಳೂರುನವರು ಕೈಗೊಂಡದ್ದು ಬಹಳ ಶ್ಲಾಘನೀಯ ವಿಚಾರ ಎಂದು ನನಗೆನಿಸುತ್ತದೆ.

ಈ ಚರಿತ್ರೆಯ ಬೃಹತ್ ಕಥೆಯನ್ನು ಡಾ. ಕಾಮತರು ಹಲವು ಗ್ರಂಥಗಳಿಂದ ಭಟ್ಟಿ ಇಳಿಸಿ ನಮಗೆ ಕೊಟ್ಟಿದ್ದಾರೆ. ಅವುಗಳ ಪಟ್ಟಿಯನ್ನೂ ಸಹ ಅವರು ಕೊನೆಯಲ್ಲಿ ಪ್ರಸ್ತಾವಿಸಿದ್ದಾರೆ. ನಾವು ಗೌಡ ಸಾರಸ್ವತ ಬ್ರಾಹ್ಮಣರು ನಮ್ಮ ಮೂಲವನ್ನು ಶೋಧಿಸಿ ಅದು ಜಗತ್ತಿನಲ್ಲಿಡೀ, ಪ್ರಾಮುಖ್ಯವಾಗಿ ನಮ್ಮ ಈ ಭಾರತ ದೇಶದಲ್ಲಿ ರೂಪುಗೊಂಡ ಪ್ರಸರಣ ವಿವರಣೆಗಳನ್ನು ಬಹಳ ವಿಶದವಾಗಿ ವರ್ಣಿಸಿದ್ದಾರೆ.

ಶ್ರೀಯುತ ಕಾಮತರು ನನ್ನ ಹಳೆಯ ಮಿತ್ರರು ಮಾತ್ರವಲ್ಲ ಅವರ ನೆರೆಮನೆಯಲ್ಲೇ ಎರಡು ವರ್ಷ ಬೆಂಗಳೂರಿನಲ್ಲಿ ನೆಲೆ ನಿಂತಿದ್ದೆ. ಅವರ ಅಗಾಧ ವ್ಯಕ್ತಿತ್ವದ ಪರಿಚಯ ಭಾಗ್ಯ ನನಗೆ ಬೇಕಷ್ಟಾಗಿದೆ. ಈ ಮುನ್ನುಡಿ ಬರೆಯಲು ನನಗೆ ಅವಕಾಶ ಕೊಟ್ಟ ಕೃಷ್ಣ ವಿಠ್ಠಲ ಪ್ರಕಾಶನ, ಮಂಗಳೂರು ಅವರಿಗೆ ನನ್ನ ಕೃತಜ್ಞತೆಗಳು. ಡಾ। ಸೂರ್ಯನಾಥ ಕಾಮತರಿಗೆ ನನ್ನ ಸವಿನಯ ವಂದನೆಗಳು. ಮುದ್ದಾಗಿ ಭಾಷಾಂತರ ಮಾಡಿದ ಶ್ರೀ ಶಾಂತಾರಾಮ ಬಾಳಿಗಾರವರಿಗೆ ಸಪ್ರೇಮ ನಮಸ್ಕಾರಗಳು.

ಈ ಕಿರು ಪುಸ್ತಕ ಓದುಗರಿಗೆ, ಸಮಾಜ ಬಾಂಧವರಿಗೆ ಸ್ಫೂರ್ತಿ ನೀಡಿ ನಮ್ಮ ಗೌಡ ಸಾರಸ್ವತ ಸಮಾಜ ಇನ್ನೂ ಹೆಚ್ಚಿನ ಯಶಕೀರ್ತಿ ಸ್ಥಾನಮಾನಗಳನ್ನು ಈ ಜಗತ್ತಿನಲ್ಲಿ ಸಂಪಾದಿಸುವಂತಾಗಲಿ ಎಂದು ಆಶಿಸುತ್ತೇನೆ.

ಎಸ್. ರಾಮಚಂದ್ರ ಮಲ್ಯ,

ಚಿನ್ಮಯ-ಲತಾ

ಫ್ಲಾಟ್ ನಂ. 9, ಎವರ್‌ಗ್ರೀನ್ ಅಪಾರ್ಟ್‌ಮೆಂಟ್ಸ್,

ಬ್ಲಾಕ್ A, ಕೊಯಿಲೋ ಲೇನ್

ಫಳ್ನೀರ್, ಮಂಗಳೂರು - 575 001

ಪ್ರಕಾಶಕರ ಮಾತು

ಹಿರಿಯ ಇತಿಹಾಸತಜ್ಞ ಡಾ. ಶ್ರೀ ಸೂರ್ಯನಾಥ. ಉಪೇಂದ್ರ ಕಾಮತರು 1992ರಲ್ಲಿ ಬರೆದ The Origin and Spread of Gowda Saraswats ಎಂಬ ಲೇಖನದ ಕನ್ನಡ ಭಾಷಾಂತರ 'ಗೌಡ ಸಾರಸ್ವತರ ಮೂಲ ಮತ್ತು ಪ್ರಸರಣ'ವನ್ನು ಪ್ರಕಟಿಸಲು ನಮಗೆ ತುಂಬಾ ಸಂತೋಷವಾಗುತ್ತಿದೆ.

ದಶವಿಧ ಬ್ರಾಹ್ಮಣರು ಎಂದರೆ ವಿಂಧ್ಯದ ಉತ್ತರದ ಐದು ಗೌಡ ಹಾಗೂ ದಕ್ಷಿಣದ ಐದು ದ್ರಾವಿಡ ಬ್ರಾಹ್ಮಣರು. ಗೌಡ ಎಂದರೆ ಉತ್ತರ ದೇಶ. ದ್ರಾವಿಡ ಎಂದರೆ ದಕ್ಷಿಣ ಎಂದರ್ಥ ಎನ್ನುತ್ತಾರೆ.

ಇದನ್ನು ಪ್ರಕಟೀಕರಿಸಲು ಅನುಮತಿ ಇತ್ತ ಮೂಲ ಲೇಖಕ ಡಾ। ಶ್ರೀ ಸೂರ್ಯನಾಥ ಕಾಮತರಿಗೆ ತುಂಬು ಹೃದಯದ ಅನಂತಾನಂದ ವಂದನೆಗಳು.

ಭಾಷಾಂತರ ಕಾರ್ಯವನ್ನು ಕಡಿಮೆ ಸಮಯದಲ್ಲಿ ಮಾಡಿಕೊಟ್ಟ 'ಪಂಚ್ಕಾದಾಯಿ' - ಕೊಂಕಣಿ ಮಾಸಪತ್ರಿಕೆಯ ಸಂಪಾದಕರಾದ ಶ್ರೀ ಬಿ. ಶಾಂತಾರಾಮ ಬಾಳಿಗಾರಿಗೆ ನಾವು ತುಂಬಾ ಆಭಾರಿಗಳು.

ದಿವಂಗತ ಪದ್ಮಶ್ರೀ ಡಾ. ವಾಕಣಕರ್ ಎಂಬ ವಿದ್ವಾಂಸರು ಉಪಗ್ರಹ ಒದಗಿಸಿದ್ದ ಚಿತ್ರದ ನೆರವಿನಿಂದ ಒಂದು ತಿಂಗಳ ಕಾಲ ಕ್ರಮಿಸಿ ಸರಸ್ವತಿ ನದಿ ಪಾತ್ರವನ್ನು ಗುರುತಿಸಿದ್ದರು. ಉಪಗ್ರಹ ಚಿತ್ರದ ಆಧಾರದಿಂದ ಇದನ್ನು ಗುರುತಿಸಿ ಭಾರತದ ನಕಾಶೆಯಲ್ಲಿ ಈ ನದಿ ಎಲ್ಲಿತ್ತೆಂಬ ಬಗ್ಗೆ ನಕಾಶೆಯನ್ನು ಇಸ್ರೊ ಸಂಸ್ಥೆಯ 'ಸ್ಪೇಸ್ ಇಂಡಿಯಾ' ತ್ರೈಮಾಸಿಕವು 2002ರ ಜನವರಿ - ಮಾರ್ಚ್ ಅಂಕದಲ್ಲಿ ಪ್ರಕಟಿಸಿದೆ.

ವೀಣಾ ಪುಸ್ತಕಧಾರಿಣಿಯಾಗಿ ಸಂಗೀತ ಸಾಹಿತ್ಯದ ಅಭಿಮಾನಿ ದೇವತೆಯಾದ ಶ್ರೀ ಸರಸ್ವತಿಯು ಗೋರೂಪದಿಂದ (ಗೌ) ಶಿವನ ಡಮರು (ಡ) ವಿಗೆ ಸಂಸ್ಕೃತ ವ್ಯಾಕರಣ ಕಲಿಸಿದ ಸ್ಥಳಕ್ಕೆ ಗೌಡ ಎನ್ನುತ್ತಾರೆಂಬ ಐತಿಹ್ಯವಿದೆ. ಹಾಗೂ ಹೆಚ್ಚಿನ ಸಾರಸ್ವತರಿಗೆ ಶಿವನೇ ಕುಲದೇವರು.

ಈ ಲೇಖನಕ್ಕೆ ಮುನ್ನುಡಿ ಬರೆದುಕೊಟ್ಟ ಶ್ರೀ ಎಸ್. ರಾಮಚಂದ್ರ ಮಲ್ಯರಿಗೆ ನಮ್ಮ ಅನಂತ ಕೃತಜ್ಞತೆಗಳು.

ವಿಶಾಲ ಗೌಡ ಸಾರಸ್ವತ ಸಮಾಜಕ್ಕೆ ಇದು ನಮ್ಮ ಕಿರು ಕಾಣಿಕೆ.

ನಮ್ಮ ಸಮಾಜ ಬಾಂಧವರು ಇದರ ಪ್ರಯೋಜನ ಪಡೆಯಲಿ, ಸಂಘಟಿತರಾಗಲಿ ಎಂಬುದು ನಮ್ಮ ಇಚ್ಛೆ.

ಇತಿ

ಕೃಷ್ಣ ವಿಟ್ಠಲ ಪ್ರಕಾಶನದ

ಪರವಾಗಿ,

ಬಿ. ರಾಧಾಕೃಷ್ಣ ಬಾಳಿಗಾ

ಪ್ರಸ್ತಾವನೆ

"ನಾನು ಇಸವಿ 1992ರಲ್ಲಿ ಪರ್ತಗಾಳಿಯಲ್ಲಿ ಗೋಕರ್ಣ ಮಠಾಧೀಶ ಶ್ರೀ ಮದ್ವಿದ್ಯಾಧಿರಾಜ ತೀರ್ಥ ಶ್ರೀಪಾದ ವಡೇರ್ ಸ್ವಾಮೀಜಿಯವರ ಸನ್ಯಾಸಗ್ರಹಣದ ರಜತ ಮಹೋತ್ಸವದ ಸಂದರ್ಭ ಪ್ರಸ್ತುತಪಡಿಸಿದ ಉಪನ್ಯಾಸವನ್ನು ಸಭಾಸದರೆಲ್ಲರೂ ಪ್ರಶಂಸಾಸಹಿತ ಸ್ವೀಕರಿಸಿದರು. ಅದರ ಲಿಖಿತ ಪ್ರತಿ ಬೇಕೆಂದು ಅವರು ಇಚ್ಛಿಸಿದರು. ಗೋವಾ ಸಾರಸ್ವತ ಸಮಾಜವು ಹೊಸದಾಗಿ ಪ್ರಾರಂಭಿಸಿದ ತ್ರೈಮಾಸಿಕ 'ಸಾರಸ್ವತ' ಪತ್ರಿಕೆಯ ಪ್ರಥಮ ಅಂಕದಲ್ಲೇ ಅವರು ಆ ಭಾಷಣವನ್ನು ಮುದ್ರಿಸಿ ಪ್ರಕಟಿಸಿದರು. ಆದರೂ ಬಹುತೇಕ ಜನರನ್ನು ಅದು ತಲುಪಲಿಲ್ಲ. ಆ ಕಾರಣದಿಂದ ಅದನ್ನೊಂದು ಪುಸ್ತಿಕೆಯ ರೂಪದಲ್ಲಿ ಪ್ರಕಟಿಸಬೇಕೆಂದು ನನ್ನ ಮಿತ್ರರು ವಿನಂತಿಸಿದರು. ಅರ್ಚನಾ ಪ್ರಕಾಶನದವರು ಅದನ್ನು ಪುನರ್ಮುದ್ರಿಸಲು ಮುಂದೆ ಬಂದರು. ನನ್ನ ಚಿಂತನೆ ಮತ್ತು ನಿಶ್ಕರ್ಷಿತ ವಿಚಾರಗಳನ್ನು ಈ ರೀತಿಯಾಗಿ ಪ್ರಸ್ತುತಗೊಳಿಸಲು ಆಗ್ರಹಿಸಿದ ಪರ್ತಗಾಳಿ ಮಠದವರಿಗೂ ಮತ್ತು ಶ್ರೀ ಮದ್ವಿದ್ಯಾಧಿರಾಜತೀರ್ಥ ಶ್ರೀಪಾದಂಗಳವರಿಗೂ ನಾನು ವಿಶೇಷ ಆಭಾರಿಯಾಗಿರುವೆನು. ಈ ವಿಷಯದಲ್ಲಿ ಯಾವುದೇ ಸಲಹೆ, ಸೂಚನೆಗಳಿದ್ದರೆ ಅಥವಾ ತಪ್ಪುಗಳೋ, ನನ್ನ ನಿಶ್ಕರ್ಷೆಗಳಲ್ಲಿ ಪ್ರತಿವಾದಗಳೋ ಇದ್ದು ನನ್ನ ಕೃತಿಯಲ್ಲಿ ಸಂಶುದ್ಧಿಯ ಆವಶ್ಯಕತೆ ಇದ್ದರೆ ಅಂಥವುಗಳನ್ನು ಮಿತ್ರರು ನನಗೆ ತಿಳಿಸಿದರೆ ಒಳಿತಾಗಬಹುದು. ಬೆಂಗಳೂರು ಜಿ.ಎಸ್.ಬಿ. ಸಮಾಜ, ದ್ವಾರಕಾನಾಥ ಭವನ ಇದು ಪ್ರಕಾಶಿತವಾಗಲು ಕಾರಣಭೂತರಾಗಿದ್ದಾರೆ. ಇದರಲ್ಲಿ ಮೂಲೋಪಕರಣ ತುಲ್ಯ ಸಹಾಯಕ ಶ್ರೀ ಸುಧಾಕರ ಶೆಣ್ಯೆಯವರಿಗೆ ನಾನು ಕೃತಜ್ಞನಿದ್ದೇನೆ."

'ಪಾದ ಶತಮಾನದ ಹಿಂದೆ 'ನೀನು ಕೀರ್ತಿಮಾನ್ ಆಗು' ಎಂದು ಗುರುವರ್ಯ ಮತ್ತು ಕಾಶೀ ಮಠಾಧೀಶ ಶ್ರೀಮತ್ಸುಧೀಂದ್ರ ತೀರ್ಥ ಶ್ರೀಪಾದಂಗಳವರು ಮಾಡಿದ ಪ್ರೋತ್ಸಾಹಕ ಆಶೀರ್ವಾದಗಳನ್ನು, ನಾನು ನಿರಂತರ ನನ್ನ ಸ್ಮರಣೆಯಲ್ಲಿರಿಸಿಕೊಳ್ಳುವೆನು"

-ಸೂರ್ಯನಾಥ ಕಾಮತ್

798, ಕೀರ್ತಿ, 11ನೇ ಮುಖ್ಯ ರಸ್ತೆ,
6ನೇ ಕ್ರಾಸ್, ಹನುಮಂತನಗರ,
ಬೆಂಗಳೂರು–560 019

ಸ್ಕಂದ ಪುರಾಣಾಂತರ್ಗತವಾಗಿ ವರ್ಣಿತ ಪಂಚಗೌಡ ಮತ್ತು ಪಂಚದ್ರಾವಿಡ ವರ್ಗೀಕರಣ: -

ಮಹಾರಾಷ್ಟ್ರಾಂಧ್ರ ದ್ರವಿಡಾಃ
ಕರ್ಣಾಟಾಶ್ಚೈವ ಗೂರ್ಜರಾಃ
ದ್ರಾವಿಡಾಃ ಪಂಚಧಾಪ್ರೋಕ್ತಾ
ವಿಂಧ್ಯ ದಕ್ಷಿಣ ವಾಸಿನಃ
ಸಾರಸ್ವತಾಃ ಕಾನ್ಯಕುಬ್ಜಾ
ಗೌಡೋತ್ಕಲ ಮೈಥಿಲಾ
ಗೌಡಾಃ ಪಂಚವಿಧಾಪ್ರೋಕ್ತಾ
ವಿಂಧ್ಯೋತ್ತರ ವಾಸಿನಃ
-ಸ್ಕಂದ ಪುರಾಣ, ಸಹ್ಯಾದ್ರಿ ಖಂಡ
ಅಧ್ಯಾಯ 1, ಶ್ಲೋಕ 1-2

ಮಹಾರಾಷ್ಟ್ರೀಯರು, ಆಂಧ್ರರು (ತೆಲುಗು) ದ್ರಾವಿಡರು (ತಮಿಳರು) ಕರ್ನಾಟಕರು ಹಾಗೂ ಗುರ್ಜರರೆಂದು ವಿಂಧ್ಯದ ದಕ್ಷಿಣದಲ್ಲಿ ವಾಸವಾಗಿರುವವರು ಮತ್ತು ಸಾರಸ್ವತ, ಕಾನ್ಯಕುಬ್ಜ (ಕನೋಜಿ) ಗೌಡ (ಬಂಗಾಳಿ) ಉತ್ಕಲ (ಒರಿಯಾ) ತಥಾ ಮೈಥಿಲ (ಮಿಥಿಲೆಯವರು) ರೆಂದು ವಿಂಧ್ಯಾವಳಿಯ ಉತ್ತರದಲ್ಲೂ ವಾಸವಾಗಿರುವವರು ಪಂಚಗೌಡ ವರ್ಗದವರೆನಿಸಿಕೊಳ್ಳುತ್ತಾರೆ.

ಪ್ರಥಮ ಭಾಗ

ಈ ಪುಸ್ತಕವನ್ನು ಬರೆಯುವ ಸಾಹಸಕ್ಕೆ ಶ್ರೀ ಗೋಕರ್ಣ ಪರ್ತಗಾಳಿ ಮಠವು ಇತ್ತ ಸಹೃದಯಿ ಆಹ್ವಾನ ಕಾರಣವಾಗಿ ಪ್ರೀತಿಯ ಶ್ರಮವೆಂದು ನಾನು ಉದ್ಯುಕ್ತನಾದೆ. ಇತರ ಬ್ರಾಹ್ಮಣರಿಗಿಂತ ನಾವು ಶ್ರೇಷ್ಠ ಬ್ರಾಹ್ಮಣರೆಂದಾಗಲಿ ನಮ್ಮ ಸಮಾಜದಲ್ಲಿ ಮಿಥ್ಯಾಭಿಮಾನವನ್ನುಂಟು ಮಾಡುವುದಕ್ಕಾಗಿ ಇದನ್ನು ಬರೆದಿರುವುದಿಲ್ಲ. ಆಧುನಿಕ ಜಗತ್ತಿನಲ್ಲಿ ಅಂತಹ ಮನೋಭಾವನೆಯು ಅರ್ಥಹೀನವೂ ಆಗಿದೆ. ಮಾನವ ಸಮುದಾಯದ ವಿಕಾಸ ಸ್ಥಿತಿಯಲ್ಲಿ ನಾವು ಎಲ್ಲಿರುವೆವು ಎಂಬುದನ್ನು ತಿಳಿಯಲು ಸಹಾಯಕವಾಗಿ ಮತ್ತು ಪುರೋಗಮನ ಮಾಡುತ್ತಲಿರುವೆವೋ ಎಂಬುದರ ಮಾಪನದ ಉದ್ದೇಶಕ್ಕಾಗಿ ಇತಿಹಾಸದ ರಚನೆಯಾಗುತ್ತದೆ. ನಮ್ಮನ್ನು ನಾವು ತಿಳಿದುಕೊಳ್ಳುವ ಸಲುವಾಗಿ. ನಮ್ಮ ಸುತ್ತಲಿನ ಪರಿಸರದ ಜ್ಞಾನವು ನಮಗಾಗಲು, ನಮ್ಮ ಸಾಮಾಜಿಕ, ಧಾರ್ಮಿಕ ನಮ್ಮ ಸಾಮುದಾಯಿಕ ಸಂಸ್ಥೆಗಳು ತುಲನೀಯವಾಗಿ ಉತ್ತಮವಾಗಿವೆಯೇ ಎಂಬುದರ ನಿರೀಕ್ಷೆಗಾಗಿ ಇದು ಆವಶ್ಯಕವಾಗುತ್ತದೆ. ಕೆಲವೊಮ್ಮೆ ನಮಗೆ ನಮ್ಮ ಗತೇತಿಹಾಸದಿಂದ ಉಚ್ಚಾಭಿಲಾಷೆ ಹೊಂದಲು ಪ್ರೇರಣೆಯೂ ದೊರಕುತ್ತದೆ.

ಸ್ವಸಮುದಾಯಕ್ಕೆ, ಸಮಾಜಕ್ಕೆ, ದೇಶಕ್ಕೆ ಹೆಚ್ಚು ಉಪಯೋಗಕರವಾಗಿ, ಅಧಿಕ ಉತ್ತಮ ಜೀವನ ಹೊಂದಲು ಇತಿಹಾಸವು ಉತ್ತೇಜಕವಾಗಬಹುದು. ಒಂದೊಮ್ಮೆ ನಮ್ಮ ಪೂರ್ವಜರಿಗಿಂತ ನಮ್ಮ ಜೀವನವು ನ್ಯೂನತರವೆಂದು ಕಂಡರೆ ನಾವು ಅದನ್ನರಿತು ಸುಧಾರಿಸಿ ಉತ್ತಮಗೊಳಿಸಬಹುದೆಂಬುದರ ಅರಿವನ್ನುಂಟು ಮಾಡಲೂ ಇತಿಹಾಸವು ಸಹಾಯಕವಾಗಬಹುದು. ಒಂದು ಕ್ಷಣವಾದರೂ ನಾವು ನಮ್ಮ ಗತೇತಿಹಾಸದ ಬಗ್ಗೆ ಮಿಥ್ಯಾಭಿಮಾನ ತಳೆದು ಪತನದ ಕೃತ್ರಿಮ (ಭ್ರಾಮಕ) ದಾರಿಯಲ್ಲಿ ಸಾಗುವುದು ಅನವಶ್ಯಕವಾದುದರಿಂದ ಅದು ತ್ಯಾಜ್ಯ. ಮಿಥ್ಯಾಭಿಮಾನವು ಮಾನಸಿಕ ಅನಾರೋಗ್ಯದ ಕುರುಹು. ನಾವು ಆ ರೋಗಕ್ಕೆ ಬಲಿಯಾಗುವುದು ಬೇಡ.

ಈ ವಿಷಯದಲ್ಲಿನ ನನ್ನ ಆಸಕ್ತಿಯು 30 ವರ್ಷಗಳಷ್ಟು ಹಳೆಯದು. ಸಾರಸ್ವತ ಬ್ರಾಹ್ಮಣರ ಇತಿಹಾಸದ ಬಗೆಗಿನ ಮಾಹಿತಿ ಸಂಗ್ರಹಿಸಬೇಕೆಂದು, ಸಾರಸ್ವತ ಬ್ರಾಹ್ಮಣ ವರ್ಗದಿಂದ ಮತಾಂತರಿತ ಪೂರ್ವಜರ ವಂಶ ಜಾತ ತಾನೆಂದು ಪ್ರತಿಪಾದಿಸುತ್ತಿದ್ದ, ನಾನು ಮುಂಬೈಯಲ್ಲಿ ವಿದ್ಯಾರ್ಥಿಯಾದಾಗಿನ ನನ್ನ ಇತಿಹಾಸದ ಕ್ರಿಶ್ಚಿಯನ್ ಪ್ರೊಫೆಸರರೊಬ್ಬರು ಆಪೇಕ್ಷಿಸಿದರು. ಅವರ ಕುತೂಹಲಕ್ಕೆ ಯಾವುದೇ ಕಾರಣವು ಮೂಲವಿದ್ದಿರಬಹುದಾದರೂ ಆ ವಿಷಯದಲ್ಲಿ ತೀವ್ರ ಅಧ್ಯಯನಕ್ಕೆ ಆಲೋಚನೆ ಹರಿಸಲು ನನಗದು ಸಹಾಯಕವಾಯಿತು. ಗೌಡದೇಶ ಅಥವಾ ಬಂಗಾಳಕ್ಕೆ ಮತ್ತು ಗೌಡ ಸಾರಸ್ವತರಿಗೆ ಲವಲೇಶ ಸಂಬಂಧವೂ ಇಲ್ಲವೆಂಬುದನ್ನು ಮಾತ್ರ ಆ ಕ್ಷೇತ್ರದಲ್ಲಿನ ನನ್ನ ಅಧ್ಯಯನದಿಂದ ನಾನು ನಿರ್ಣಯಕ್ಕೆ ಬಂದು ತಲುಪಿರುತ್ತೇನೆ. ಆಧುನಿಕ ಬಿಹಾರದ ತ್ರಿಹೋತ್ರದಿಂದ ಗೌಡದೇಶಕ್ಕೆ ಮುಂದೆ ಗೋವಾವನ್ನು ನಮ್ಮ ಪೂರ್ವಜರು ತಲುಪಿದರೆಂದು ವಿವಿಧ ಸಾಂಪ್ರದಾಯಿಕ ಆಧಾರಗಳ ಮೇಲಿಂದ ಅನೇಕರು ವಾದಿಸುತ್ತಾರೆ. ಬಂಗಾಳಿ ಜನರ ಸ್ವಂತ ವೈಶಿಷ್ಟ್ಯವಾಗಿರುವ ಧಾರ್ಮಿಕ, ಸಾಮಾಜಿಕ, ಆಚಾರ, ವಿಚಾರ ಮತ್ತು

ವ್ಯವಹಾರಗಳು ಹಾಗೂ ನಮ್ಮ ಆಚಾರ, ವಿಚಾರ, ವ್ಯವಹಾರಗಳಲ್ಲಿ ಯಾವುದೇ ಸಾಮ್ಯ, ಸಂಬಂಧಗಳಿಲ್ಲವೆಂಬುದು ಮುಂಬೈಯ ನಾಯ್‌ಗಾಂವ್‌ನ ಬಂಗಾಳಿ ಪ್ರೌಢಶಾಲಾ ಮುಖ್ಯೋಪಾಧ್ಯಾಯ, ಬಂಗಾಳಿ ವಿದ್ವಾಂಸ ಡಾ। ಪೈನ್ ಎಂಬವರೊಡನೆ ನಾನು ನಡೆಸಿದ ದೀರ್ಘ ವಿಚಾರ ವಿನಿಮಯ ಮತ್ತು ಚರ್ಚೆಗಳಿಂದ ಸುವ್ಯಕ್ತವಾಗಿದೆ. ಬಂಗಾಳಿಗಳಲ್ಲಿರುವ ಮತ್ಸ್ಯಾಹಾರ ಪ್ರಥೆಯೂ ನಮ್ಮ ಸಮಾಜದಲ್ಲಿ ಅಲ್ಲಿಲ್ಲಿ ಕಂಡುಬರುವ ಮತ್ಸ್ಯಾಹಾರ ಸ್ವೀಕಾರ ನಿದರ್ಶನಗಳೂ ಕೇವಲ ಕಾಕತಾಳೀಯವಷ್ಟೆ. ಶಾಕ್ತದೇವದೇವಿಯರನ್ನು ಕುಲದೇವತೆಗಳೆಂದು ಆರಾಧಿಸುತ್ತಿರುವುದರಲ್ಲಿ ನಮ್ಮ ಪೂರ್ವಜರು ತೊಡಗಿದ್ದುದು ಬಂಗಾಳ ಮತ್ತು ನಮಗಿರುವ ಸಂಬಂಧವನ್ನು ಪ್ರಮಾಣೀಕರಿಸಲು ಸಾಲದು. ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ ಪಂಚಾಯತನ ಪೂಜಾ ಪದ್ಧತಿಯ ಒಂದಂಗವಾಗಿದೆ ಶಕ್ತಿಪೂಜನ.

ಶಕ್ತಿಪೂಜನವು ಶಂಕರಾಚಾರ್ಯರಿಂದ ಮಾತ್ರ ಸ್ಥಾಪಿತವಾದುದಲ್ಲ ಅಥವಾ ಬಂಗಾಳಕ್ಕೆ ಮಾತ್ರ ಸೀಮಿತವಾದುದೂ ಆಗಿರಲಿಲ್ಲ. ಗೋವಾ ಮೂಲದ ಸಂಸ್ಕೃತ ವಿದ್ವಾಂಸ ಪಂಡಿತ ಮಹಾದೇವ ಶಾಸ್ತ್ರಿಯವರು ನನ್ನ ನಿಶ್ಕರ್ಷವನ್ನು ಪುಷ್ಟೀಕರಿಸಿರುವರು ಮಾತ್ರವಲ್ಲ ಬಂಗಾಳ ಮೂಲದ ಸಿದ್ಧಾಂತವನ್ನು ತಿರಸ್ಕರಿಸಿಯೂ ಇರುತ್ತಾರೆ. ಶ್ರೀ ವಿ.ಎನ್. ಕುಡ್ವಾರವರು ಬರೆದ ಪುಸ್ತಕವನ್ನು 1972ರಲ್ಲಿ ಓದಿ ಅದರಲ್ಲಿ ಅವರೂ ಈ ಬಂಗಾಳ ಮೂಲದ ಸಿದ್ಧಾಂತವನ್ನು ತಿರಸ್ಕರಿಸಿರುವುದನ್ನು ಕಂಡು ನನಗೆ ಸಂತೋಷವೆನಿಸಿತು. (78 ನೇ ಪುಟ) ಹಾಗಿದ್ದರೆ ನಮ್ಮ ಸಮಾಜದ ಹೆಸರಲ್ಲಿ ಈ 'ಗೌಡ' ಉಪಾಧಿಯ ಪ್ರವೇಶದ ಬಗೆಯೆಂತು? ಬ್ರಾಹ್ಮಣರು ಸ್ಥೂಲವಾಗಿ ಎರಡು ವರ್ಗಗಳಲ್ಲಿ ವಿಭಜಿಸಲ್ಪಟ್ಟಿರುವರು. ಸ್ಕಂದ ಪುರಾಣ (ಸಹ್ಯಾದ್ರಿಖಂಡ ಉತ್ತರಾರ್ಧ 1-2) ಪ್ರಕಾರ ವಿಂಧ್ಯದ ಉತ್ತರದಲ್ಲಿದ್ದವರು ಗೌಡ ಬ್ರಾಹ್ಮಣರು ಹಾಗೂ ದಕ್ಷಿಣದಲ್ಲಿದ್ದವರು ದ್ರಾವಿಡ ಬ್ರಾಹ್ಮಣರು. ಅವರು ವಾಸ್ತವ್ಯವಿದ್ದ ಪ್ರದೇಶಗಳಿಗನುಸಾರವಾಗಿ ಪ್ರತಿ ವಿಭಾಗದಲ್ಲೂ ಐದೈದು ವರ್ಗಗಳನ್ನು ಮಾಡಿದ್ದಾರೆ. ಐದು ಗೌಡ ಬ್ರಾಹ್ಮಣ ವರ್ಗಗಳು ಅಂದರೆ ಸಾರಸ್ವತರು (ಸರಸ್ವತೀ ನದೀ ತೀರದಲ್ಲಿದ್ದವರು), ಕಾನ್ಯಕುಬ್ಜರು (ಕನೌಜದವರು), ಗೌಡರು (ಬಂಗಾಳಿಗಳು), ಉತ್ಕಲರು (ಒರಿಸ್ಸದವರು), ಮತ್ತು ಮೈಥಿಲಿಗಳು (ಬಿಹಾರದ ಮಿಥಿಲೆಯವರು) ಐದು ದ್ರಾವಿಡ ಬ್ರಾಹ್ಮಣ ವರ್ಗಗಳೆಂದರೆ ಮಹಾರಾಷ್ಟ್ರಿಯರು, ಆಂಧ್ರದವರು, ದ್ರಾವಿಡರು, (ತಮಿಳುನಾಡಿನವರು), ಕರ್ನಾಟರು (ಕರ್ನಾಟಕದವರು), ಮತ್ತು ಗುರ್ಜರರು (ಗುಜರಾತದವರು). ದಕ್ಷಿಣಕ್ಕೆ ಬಂದ ಬ್ರಾಹ್ಮಣರು ಬಹು ಪ್ರಾಚೀನಕಾಲದಲ್ಲಿಯೇ ಬಂದು ಸ್ಥಾಯಿಯಾಗಿದ್ದರು. ಅನಂತರ ಬಂದ ಸಾರಸ್ವತರನ್ನು ಸ್ಥಳೀಯವಾಗಿದ್ದ ಬ್ರಾಹ್ಮಣರು 'ಗೌಡ' ಎಂಬ ಸಂಜ್ಞೆಯನ್ನಿತ್ತು ಕರೆದರು. ಅವರು ಸರಸ್ವತೀ ನದೀ ತೀರದವರಿದ್ದು ಸಾರಸ್ವತ ಪ್ರದೇಶದಿಂದ ಬಂದವರಿದ್ದರು. ಇದನ್ನು ನಾವು ಆ ಮೇಲೆ ಪರಿಶೀಲಿಸೋಣ.

ಬ್ರಾಹ್ಮಣರೆಂದರೆ ಯಾರು ಎಂಬುದನ್ನು ಒಂದು ಕ್ಷಣ ಆಲೋಚಿಸೋಣ. ಷಟ್ಕರ್ಮ ನಿರತ ವ್ಯವಸಾಯಿಗಳು ಬ್ರಾಹ್ಮಣರಾಗಿದ್ದಾರೆ. (1) ಯಜನ ಅರ್ಥಾತ್ ಪುರೋಹಿತನಾಗಿ ಯಜ್ಞ ಮಾಡುವುದು. (2) ಯಾಜನ ಅಥವಾ ಯಜಮಾನನಾಗಿ ಯಜ್ಞ ಮಾಡಿಸುವುದು (3) ಅಧ್ಯಯನ- ಅಂದರೆ ವಿದ್ಯಾ ಪ್ರಾಪ್ತಿನಿರತರಾಗಿರುವುದು (4) ಅಧ್ಯಾಪನ - ಅಂದರೆ ವಿದ್ಯಾದಾನ (5) ದಾನ

- ಸಂಪತ್ತು, ಗಳಿಕೆಯಲ್ಲಿ ಇತರರಿಗೆ ಕೊಡುವುದು (6) ಪ್ರತೀಗ್ರಹ - ಯಾರಾದರೂ ದಾನ ಮಾಡಿದುದನ್ನು ಸ್ವೀಕರಿಸುವುದು. ದಾನ ಕೊಟ್ಟದು ಅದೆಷ್ಟೇ ನಗಣ್ಯವಾದುದಿರಲಿ ಅದನ್ನು ನಮ್ರತಾಪೂರ್ವಕ ತೆಗೆದುಕೊಳ್ಳಬೇಕು. (ಮರಾಠಿಯಲ್ಲಿ ಅರ್ಚಕ ಯಾ ಪುರೋಹಿತ ವೃತ್ತಿಗೆ 'ಭಿಕ್ಷುಕಿ'ಯೆಂಬ ಪರ್ಯಾಯ ಪದವೂ ಇದೆ)

ಪ್ರಾಚೀನ ಕಾಲದಲ್ಲಿ ಬ್ರಾಹ್ಮಣರು ತಮ್ಮ ಷಟ್ಕರ್ಮಗಳನ್ನು ಪಾಲಿಸಿ ಯೋಗ್ಯ ರೀತಿಯಿಂದ ಅವರು ಜೀವನ ನಿರ್ವಹಿಸಿಕೊಂಡಿರಲು 'ಅಗ್ರಹಾರ' ವಸತಿಗಳನ್ನು ನಿರ್ಮಿಸಿಕೊಳ್ಳಲು ಅವರಿಗೆ ಭೂಮಿಯನ್ನು ದಾನವಾಗಿತ್ತು ಅನುಕೂಲ ಕಲ್ಪಿಸುತ್ತಿದ್ದರು. ಆಯಾ ಗ್ರಾಮ, ಪಟ್ಟಣಗಳಲ್ಲಿ ಈ ರೀತಿ ಅಗ್ರಹಾರಗಳ ನಿರ್ಮಾಣವಾಗಿ ಬ್ರಾಹ್ಮಣ ವಸತಿಗಳಿರುತ್ತಿದ್ದವು ಮತ್ತು ಅವುಗಳನ್ನು ಬ್ರಹ್ಮಪುರಿಯೆಂದು ಕರೆಯಲಾಗುತ್ತಿತ್ತು. ಅಂತಹ ಅಗ್ರಹಾರಗಳು ದೇಶಾದ್ಯಂತ ವ್ಯಾಪ್ತವಿದ್ದು ಹಾಗೆ ದಾನವಿತ್ತ ಭೂಮಿಯನ್ನು 'ಸರ್ವಮಾನ್ಯ' ಅರ್ಥಾತ್ ಭೂಕಂದಾಯ ವಿರಹಿತ ಭೂಮಿ, ಬಾಡಿಗೆ ವಿರಹಿತ ಮನೆಗಳು ಅಥವಾ ಕನಿಷ್ಠ ಭೂಕಂದಾಯ ತೆರಬೇಕಾದ ಸ್ಥಳವೆಂದು ಮಾನ್ಯ ಮಾಡಲಾಗುತ್ತಿತ್ತು. ಇಂತಹ ಭೂಮಿಗಳಲ್ಲಿ ಬ್ರಾಹ್ಮಣರೇ ಸ್ವಯಂ ಕೃಷಿಕಾರ್ಯ ಮಾಡುವುದು, ವ್ಯವಸಾಯದಿಂದ ಉತ್ಪನ್ನಗಳನ್ನು ಪಡೆಯುವುದಿರದಿದ್ದರೂ ಉತ್ಪನ್ನಗಳಲ್ಲೊಂದು ಪಾಲು ಅವರಿಗೆ ದೊರೆತು ಜೀವನ ಸಾಗುತ್ತಿತ್ತು. ಗೋವಾದಲ್ಲಿಯೂ ಅಂತಹ ಅನೇಕ ಅಗ್ರಹಾರಗಳಿದ್ದುವು. ಅಂತಹ ಅನುದಾನ ಲಭಿಸುವ ಬ್ರಾಹ್ಮಣರು ಮಹಾಜನರೆನಿಸಿಕೊಳ್ಳುತ್ತಿದ್ದರು. ಸಾಲಗಾಂವ್ ಅಂತಹ ಒಂದು ಅಗ್ರಹಾರವಾಗಿತ್ತು. ಶಾಲಾಗ್ರಾಮ ಎಂಬುದು ಸಾಲಗಾಂವ ಆಗಿದೆ. ಮಾರಸೆಲ್ಲಾ ಅಥವಾ ಮಾಶೆಲ್ಲಾ ಇನ್ನೊಂದು ಅಗ್ರಹಾರವಾಗಿದ್ದು ಮೂಲ ಹೆಸರು ಮಹಾಶಾಲಾ ಆಗಿದೆ. ಮಠಗ್ರಾಮವಾಗಿದ್ದ ಮಡಗಾಂವ್ ಒಂದು ಅಗ್ರಹಾರವಾಗಿದ್ದು ಶಿಕ್ಷಕರು ಮತ್ತು ಶಿಕ್ಷಣಾರ್ಥಿಗಳು ಒಂದೇ ಕಡೆ ವಾಸವಿರಲು ಅನುಕೂಲವಿರುವ ಮಠವಿರುವ ಊರಾಗಿತ್ತು. ಅಗಾರ್‌ವಾಡಾ, ಕರ್ಮಲಿ ಗ್ರಾಮ (ಕರ್ಮಲಿ ಬರ್ಮಕ ಎಂಬ ಇನ್ನೊಂದು ಪ್ರತ್ಯೇಕ ಊರು ಹತ್ತಿರವೇ ಇದೆ), ಮೈಸಾಳ್ (ಮಹಾಶಾಲಾ) ಒಡ್ಶೆಲ್ (ಹೊಡಿಶಾಲಾ) ಸಾಲಾವಳಿ, ಸಾಲೇಲಿ, ಸಾಲ್ ಇಂತಹ ಊರುಗಳಿದ್ದು ಈ ಹೆಸರುಗಳ ಮೇಲಿಂದ ಇವುಗಳೆಲ್ಲ ಅಗ್ರಹಾರಗಳಾಗಿದ್ದವು ಎಂಬುದು ಸೂಚಿತವಾಗುತ್ತದೆ, ಮತ್ತು ಈ ಊರುಗಳು ವಿದ್ಯಾಕೇಂದ್ರಗಳಾಗಿದ್ದವು ಎಂಬುದು ತಿಳಿಯುತ್ತದೆ. ಇವುಗಳಿಗೆ ಸಂಬಂಧಿಸಿದ ಶಿಲಾಲೇಖಗಳೆಲ್ಲವೂ ದೇವಸ್ಥಾನಗಳ ಮುಂದಿರುತ್ತಿದ್ದವು ಮತ್ತು ಬಹುಸಂಖ್ಯೆಯ ದೇವಸ್ಥಾನಗಳ ನಾಶದೊಂದಿಗೆ ಅಂತಹ ಶಿಲಾಲೇಖಗಳೂ ನಷ್ಟವಾಗಿ ಹೋಗಿವೆ.

ಈ ವಿದ್ವಾಂಸರಾದ ಬ್ರಾಹ್ಮಣರನ್ನು ಇಂತಹ ಅಗ್ರಹಾರಗಳಿಗೆ ಬಂದು ವಸತಿ ಹೂಡಿರಲು ಆಮಂತ್ರಿಸಲಾಗುತ್ತಿತ್ತು ಮತ್ತು ಅಂಥವರು ಚತುರ್ವೇದ ಸಹಿತ ಹದಿನಾಲ್ಕು ವಿದ್ಯೆಗಳಲ್ಲಿ ಪರಿಣತರಿರಬೇಕಿತ್ತು. ರಾಜರು, ರಾಣಿಯರು, ಸೇನಾಧಿಕಾರಿಗಳು ಮತ್ತು ಶ್ರೀಮಂತರುಗಳಿಂದ ಸ್ಥಾಪಿತವಾಗುತ್ತಿದ್ದ ಇಂತಹ ಅಗ್ರಹಾರಗಳಿಗೆ ದೂರದೂರದ ಬ್ರಾಹ್ಮಣರನ್ನು ವಸತಿ ಹೂಡಲು ಸ್ವಾಗತ ಮಾಡುತ್ತಿದ್ದರು. ಒಂದು ದೇವಸ್ಥಾನವನ್ನು ನಿರ್ಮಿಸುವದು, ಒಂದು ಕೆರೆಯನ್ನು ಕಟ್ಟಿಸುವುದು ಅಂತೆಯೇ ಒಂದು ಅಗ್ರಹಾರವನ್ನು ಸ್ಥಾಪಿಸುವುದೂ ಅಷ್ಟೇ ಪುಣ್ಯ ಕಾರ್ಯವೆಂದು ತಿಳಿಯಲಾಗುತ್ತಿತ್ತು.

20ನೇ ಶತಮಾನದಲ್ಲಿಯೂ ಮೈಸೂರಿನಲ್ಲಿ ರಾಜಮನೆತನದವರ ಸ್ಮರಣಾರ್ಥವಾಗಿ ಅಗ್ರಹಾರಗಳ ನಿರ್ಮಾಣ ಮಾಡಿರುವುದರ ಅನೇಕ ಉದಾರಹಣೆಗಳು ಕಾಣಸಿಗುತ್ತವೆ ಮತ್ತು ರಮಾವಿಲಾಸ ಅಗ್ರಹಾರವು ಮೈಸೂರು ರಾಣಿಯೊಬ್ಬರ ಸ್ಮರಣಾರ್ಥ ನಿರ್ಮಿತವಾಗಿ ಮೈಸೂರು ನಗರದಲ್ಲಿದೆ.

ಆಧುನಿಕ ಯುಗದ ವಿಶ್ವವಿದ್ಯಾಲಯ ಅಥವಾ ಕಾಲೇಜಿನಂತೆ ಅಗ್ರಹಾರವು ವಿದ್ಯಾಕೇಂದ್ರವಾಗಿ ಪ್ರಯೋಜನಕಾರಿಯಾಗಿತ್ತು. ಅಗ್ರಹಾರಗಳು ಧಾರ್ಮಿಕ ಕಾರ್ಯಗಳಷ್ಟೇ ಅಲ್ಲ, ಶಿಕ್ಷಣ, ಸಮಾಜಕ್ಕೆ ಮಾರ್ಗದರ್ಶಿಯಾಗಿ ಕೃಷಿ, ಫಲಪುಷ್ಪಗಳು, ತರಕಾರಿಗಳು, ಪಶು ಸಂವರ್ಧನೇತ್ಯಾದಿಗಳಿಗೆ ಸಹಾಯಕವಾಗುತ್ತಿದ್ದವು. ಅಲ್ಲದೆ ಕಾಷ್ಠಶಿಲ್ಪ, ಕಮ್ಮಾರವೃತ್ತಿಯಂತಹ ಜೀವನೋಪಯೋಗಿ ವಿದ್ಯೆಯನ್ನೂ ನೀಡುತ್ತಿದ್ದವು. ಅಗ್ರಹಾರದಲ್ಲಿರುತ್ತಿದ್ದ 'ಮಹಾಜನ"ರು ಆಯುರ್ವೇದ, ಪಶುವೈದ್ಯ ವಿದ್ಯೆ, ಗಜಶಾಸ್ತ್ರ, ಅಶ್ವಶಾಸ್ತ್ರ, ಖಗೋಲಶಾಸ್ತ್ರ, ಜ್ಯೋತಿಷ್ಯ, ಲೋಹಶಾಸ್ತ್ರ, ಸಸ್ಯಶಾಸ್ತ್ರ ಇಂತಹ ಜ್ಞಾನಶಾಖೆಗಳ ಪರಿಣಿತರಿರುತ್ತಿದ್ದರು. ವರ್ತಮಾನ ಕಾಲದಲ್ಲೂ ಕೃಷಿಕರು ಬ್ರಾಹ್ಮಣರೊಡನೆ ಮಳೆಯ ನಕ್ಷತ್ರಗಳ ವಿಷಯವಾಗಿ ಕೇಳಿ ತಿಳಿದುಕೊಳ್ಳುತ್ತಾರೆ. ಪುರಾತನ ಕಾಲದಲ್ಲಿ ಬ್ರಾಹ್ಮಣರು ಸರ್ವ ಕ್ಷೇತ್ರಗಳ ಸರ್ವ ಉದ್ಯೋಗಿಗಳಿಗೂ ಮಾರ್ಗದರ್ಶನ ಮಾಡುತ್ತಿದ್ದರು. ಒಂದೊಂದು ಹಳ್ಳಿಗಳ ಸಮೂಹಕ್ಕೆ ಒಂದೊಂದು ಅಗ್ರಹಾರವಿದ್ದು ಆ ಗ್ರಾಮಗಳ ಸಮೂಹಕ್ಕೆ ಆ ಅಗ್ರಹಾರವು ಪ್ರಕಾಶವೀಯುವಂತಹದಾಗಿರುತ್ತಿತ್ತು. ಈ ಕಾರಣದಿಂದ ಬೇರೆ ಬೇರೆ ರಾಜರುಗಳು, ಶಾತವಾಹನರಿಂದ ಮೊದಲ್ಗೊಂಡು ಗೋವೆಯ ಕದಂಬರು, ವಿಜಯನಗರ ಚಕ್ರವರ್ತಿಗಳು ಮತ್ತು ಅವರ ಸಾಮಂತರು ಇವರೆಲ್ಲರೂ ಸಾರಸ್ವತ ಬ್ರಾಹ್ಮಣರನ್ನು ವಸತಿ ಹೂಡಲು ತಮ್ಮಲ್ಲಿ ಆಮಂತ್ರಿಸಿದ್ದರು. ಬಹು ಪುರಾತನ ಕಾಲದಲ್ಲಿ ದತ್ತಿಯಾಗಿ ದೊರೆತ ಭೂಮಿಯು ವಿಜಯನಗರ ಆಧಿಪತ್ಯದ ವೇಳೆ ವಿಶೇಷವಾಗಿ ಸಂಖ್ಯಾಭಿವೃದ್ಧಿಯಾಗಿದ್ದ ಈ ವಸತಿಕಾರರಿಗೆ ಅಪರ್ಯಾಪ್ತವಾಗಿದ್ದಿರಬಹುದಾದುದರಿಂದ ಬ್ರಾಹ್ಮಣ ಯುವಕರು ಸರಕಾರೀ ಉದ್ಯೋಗ, ವ್ಯಾಪಾರ ಇಂತಹ ವೃತ್ತಿಗಳನ್ನು ಅನುಸರಿಸಲು ಪ್ರಾರಂಭಿಸಿದರು. ಗೋವೆಯಲ್ಲಿ ಭೂಮಿಯು ಬಹು ಮಿತವಿತ್ತು ಮತ್ತು ಫಲವತ್ತಾದುದಾಗಿರಲಿಲ್ಲ. ಗೋವಾ ಮತ್ತು ಕೊಂಕಣ ಕರಾವಳಿಯಲ್ಲಿದ್ದವರೊಂದಿಗೆ ಅರಬ, ಪಾರ್ಸಿ, ಚೀನಿ, ಫಿನೀಶಿಯನ್ ಮತ್ತು ಅನಂತರ ಯುರೋಪಿಯನ್ನರಿಗೂ ಕರಾವಳಿಯಲ್ಲಿದ್ದ ಜನರು ಬುದ್ಧಿವಂತರೂ, ವಿದೇಶಿ ಭಾಷೆಗಳನ್ನು ಕಲಿಯುವುದರಲ್ಲಿ ಪರಿಣತರಿದ್ದುದರಿಂದ ಅವರೊಡನೆ ವ್ಯಾಪಾರೀ ಸಂಪರ್ಕವು ಸುಲಭವಾಗಿತ್ತು. ಈ ಜನರು ಈ ಕಾರಣದಿಂದಾಗಿ ಕಾಲಾಂತರದಲ್ಲಿ ಕರಣಿಕರು, ಗುಮಾಸ್ತರು, ದ್ವಿಭಾಷಿಗಳು ಮಾತ್ರವಲ್ಲದೆ ದೇಸಾಯಿಗಳು, ಮಂತ್ರಿಗಳು, ಕಾರ್ಯಭಾರಿಗಳು ಇಂತಹ ಉನ್ನತ ಪದವಿಗಳಿಗೆ ಅವರ ಅಕ್ಷರ ವಿದ್ಯೆಯ ಕಾರಣದಿಂದ ನಿಯುಕ್ತರಾದರು. ಧಾರ್ಮಿಕ ಹಾಗೂ ವೇದ ವಿದ್ಯೆಯು ಎಲ್ಲರಿಗೂ ಜೀವನೋಪಾಯದ ದಾರಿಯಾಗುವುದು ಅಶಕ್ಯವೆನಿಸಿತು. ಸಹಜವಾಗಿ ಅಗ್ರಹಾರಗಳಲ್ಲಿ ಪದವಿ ಗಳಿಸಿದವರ ಸಂಖ್ಯೆಯು ಆವಶ್ಯಕತೆಗಿಂತ ಹೆಚ್ಚಾಗಿದ್ದಿರಬೇಕು ಮತ್ತು ಅವರಿಗೆ ಇಂಗ್ಲೀಷ್‌ನ ಮೂರು R ಅಥವಾ ಅದಕ್ಕಿಂತಲೂ ಸ್ವಲ್ಪ ಹೆಚ್ಚಿನ ಶಿಕ್ಷಣಗಳಿಸಿ ಆ ಮೂಲಕ ತರುಣ ವಯಸ್ಸಿನಲ್ಲಿಯೇ ವ್ಯಾಪಾರ ವ್ಯವಹಾರ ಮಾಡುವ ಅಥವಾ ಎಲ್ಲಾದರೂ ಗುಮಾಸ್ತಗಿರಿ ಮಾಡುವುದು ಸುಲಭ ಹಾಗೂ ಅನುಕೂಲವಾಗಿರಬೇಕು (ಮೂರು Rಗಳು - R - Reading ಓದುವುದು, (w)riting - ಬರೆಯುವುದು, (a)rithmatic - ಗಣಿತ) ಬ್ರಾಹ್ಮೀ ಮುಹೂರ್ತದಲ್ಲೆದ್ದು, ತಣ್ಣೀರಸ್ನಾನಗೈದು, ಅಸಂಖ್ಯ ವಿಷಯಗಳನ್ನು ಕಂಠಸ್ಥ ಮಾಡಿ ಕಲಿತು

ಜೀವನದ ಅಮೂಲ್ಯ, ಸುದೀರ್ಘ ಅವಧಿಯನ್ನು ಕಠಿಣ ನಿಯಮಬದ್ಧವಾಗಿ ವ್ಯತೀತ ಮಾಡುವುದು ಯಾರಿಗೆ ಬೇಕಿತ್ತು?

ಹೇಗೂ ಇರಲಿ ಗೋವೆಯು ಇಂತಹ ಅಗ್ರಹಾರಗಳಿಂದ ತುಂಬಿತ್ತು ಮತ್ತು ಆ ಪ್ರದೇಶದಲ್ಲಿ ಸಾರಸ್ವತರು ಅನೇಕ ಶತಮಾನ ಕಾಲ ಶೈಕ್ಷಣಿಕ ವ್ಯವಸಾಯದಲ್ಲಿ ಶ್ರಮಶೀಲರಾಗಿದ್ದರು ಎಂದು ಹೇಳಬಹುದು.

ಸಾರಸ್ವತರು ಸರಸ್ವತೀ ನದೀ ತಟದವರಾಗಿರುವರು. ಇದೊಂದು ಪ್ರಸಿದ್ಧ ವೈದಿಕ ನದಿ. ವೇದದಲ್ಲಿ ಗಂಗಾ ಸ್ತುತಿ ಪರ ಆರು ಶ್ಲೋಕಗಳಿದ್ದರೆ ಸರಸ್ವತಿ ನದಿಯ ಉಲ್ಲೇಖವು ಋಗ್ವೇದದಲ್ಲಿ 30 ಕಡೆ ದೊರೆಯುತ್ತದೆ. ಗಂಗಾ ಸಹಿತ 'ಇತರೆಲ್ಲ ನದಿಗಳಿಗಿಂತ ಸರಸ್ವತಿಯು ವೈದಿಕ ಕಾಲದಲ್ಲಿ ಹೆಚ್ಚಿನ ಪ್ರಮುಖ ನದಿಯಾಗಿತ್ತು. ವೇದ ರಚನೆಯು ಈ ನದಿಯ ತೀರದಲ್ಲಾಯಿತು. ಅದು ನದಿಗಳಲ್ಲೇ ದೊಡ್ಡದು (ನದೀತಮೇ) ಎಂದು ವರ್ಣಿತವಾಗಿದೆ. ವೇದಗಳಲ್ಲಿ ಸರಸ್ವತೀ ನದಿಯು ಅಸೀಮ, ಅವಿಚಲಿತ, ಸುಪ್ರಕಾಶಿತ ಮತ್ತು ವೇಗಶಾಲಿ ಎಂದು ವರ್ಣಿತವಾಗಿದೆ. ಆದರೆ ಈಗ ಆ ನದಿಯು ಅದೃಶ್ಯವಾಗಿದೆ. ನದಿಗಳ ವಂದನೆಯಲ್ಲಿ ವೇದಗಳು ಪೂರ್ವದಿಂದ ಪಶ್ಚಿಮಕ್ಕೆ ಗಂಗಾಯಮುನಾ, ಸರಸ್ವತೀ, ಶುತುದ್ರಿ (ಸಟ್ಲೆಜ್) ಪರುಷ್ಣಾ, ಈ ರೀತಿ ಮುಂದುವರಿಯುತ್ತವೆ. ಈ ರೀತಿ ಸರಸ್ವತಿಯು ಯಮುನಾ ಮತ್ತು ಶುತುದ್ರಿ ನದಿಗಳ ನಡುವೆ ಇತ್ತು. ಉಪಗ್ರಹಗಳ ಮೂಲಕ ಗೃಹೀತ ಚಿತ್ರಗಳಿಂದ ಇತ್ತೀಚೆಗೆ ವಿಜ್ಞಾನಿಗಳು ಸರಸ್ವತೀ ನದಿಯ ಪಥ ಶೋಧನೆಗೈದಿದ್ದಾರೆ. ಜೋಧಪುರದ ಕೇಂದ್ರೀಯ ಶುಷ್ಕ ಕ್ಷೇತ್ರ ಸಂಶೋಧನ ಸಂಸ್ಥೆಯು (Central Arid Lane Research Institute) ಸರಸ್ವತೀ ನದಿಯ ಪಥದ ವಿವರಣೆಯನ್ನಿತ್ತು ಅದು ಅನೇಕ ಶತಮಾನಗಳ ಹಿಂದೆಯೇ ಒಣಗಿ ಹೋಯಿತೆಂದಿದೆ. ಹಿಮಾಲಯದಲ್ಲಿ ಉದ್ಗಮಿಸಿ, ಹರ್ಯಾಣ, ರಾಜಸ್ಥಾನ ಮಾರ್ಗವಾಗಿ ಗುಜರಾತದ ಕಚ್‌ನಲ್ಲಿ ಪಶ್ಚಿಮ ಸಮುದ್ರಕ್ಕೆ ಸೇರುವಂತೆ ಅದು ಹರಿಯುತ್ತಿತ್ತು. ದಿವಂಗತ ಪದ್ಮಶ್ರೀ ಡಾ। ವಾಕಣ್‌ಕರ್ ಎಂಬ ವಿದ್ವಾಂಸರು ಉಪಗ್ರಹ ಒದಗಿಸಿದ ಚಿತ್ರದ ನೆರವಿನಿಂದ ಒಂದು ತಿಂಗಳ ಕಾಲ ಕ್ರಮಿಸಿ ಈ ನದೀ ಪಾತ್ರವನ್ನು ಗುರುತಿಸಿದ್ದರು.

ಉಪಗ್ರಹ ಚಿತ್ರದ ಆಧಾರದಿಂದ ಇದನ್ನು ಗುರುತಿಸಿ ಭಾರತದ ನಕಾಶೆಯಲ್ಲಿ ಈ ನದಿ ಎಲ್ಲಿತ್ತೆಂಬ ಬಗ್ಗೆ ನಕಾಶೆಯನ್ನು 'ಇಸ್ರೊ' ಸಂಸ್ಥೆಯು 'ಸ್ಪೇಸ್ ಇಂಡಿಯಾ' ತ್ರೈಮಾಸಿಕವು 2002ರ ಜನವರಿ - ಮಾರ್ಚ್ ಅಂಕದಲ್ಲಿ ಪ್ರಕಟಿಸಿದೆ. ಈ ಮಹಾಶಕ್ತಿಶಾಲೀ ನದಿಯು ಘಗ್ಗರ ಎಂಬ ಸಣ್ಣ ನದಿಯಾಯಿತು ಮತ್ತು ಸರಸ್ವತಿಯ ಉಪನದಿ ಸಟ್ಲೆಜ್ ಸಿಂಧೂನದಿಯ ಉಪನದಿಯಾಯಿತು. ಮಹಾಭಾರತ ಮತ್ತು ಶ್ರೌತ ಸೂತ್ರಗಳು ಈ ಪವಿತ್ರ ಮತ್ತು ಬೃಹತ್ತಾದ ನದಿಯು ಅಂತರ್ಧಾನವಾದ ಬಗೆಯನ್ನು ವರ್ಣಿಸುತ್ತವೆ. 'ಸರಸ್ವತಿಯ ತಟದಲ್ಲಿ ಪ್ರಾಚೀನ ಋಷಿಗಳು ಯಜ್ಞಯಾಗಾದಿಗಳನ್ನು ನಡೆಸುತ್ತಿದ್ದರು. ಅವರೊಂದಾಗಿ ಸೇರಿ ವೈದಿಕ ಮಂತ್ರಗಳನ್ನು ಪಠಿಸುತ್ತಿದ್ದರು. ವಿವಿಧ ಕಥೆಗಳು, ಗಾಥೆಗಳು ಹಾಗೂ ಋಚೆಗಳನ್ನು ಸಂಗ್ರಹಿಸುತ್ತಿದ್ದರು'' - ಎಂದು ಮುಂಬೈ ನೆಹರೂ ಕೇಂದ್ರದ ಮೃಣಾಲಿನಿ ಸರಪೋತದಾರ್ ಹೇಳುತ್ತಾರೆ.

ನದಿಗಳು ಬತ್ತಿದವು, ಕ್ಷಾಮಗಳು ತೊಡಗಿದವು, ವೈದಿಕ ಬ್ರಾಹ್ಮಣರು ಪಶ್ಚಿಮಕ್ಕೆ (ಸಿಂಧ್) ಉತ್ತರಕ್ಕೆ (ಕಾಶ್ಮೀರ) ಪೂರ್ವಕ್ಕೆ (ಉತ್ತರ ಪ್ರದೇಶ). ದಕ್ಷಿಣಕ್ಕೆ (ಗುಜರಾತ್ ಮತ್ತು ಕೊಂಕಣ) ದೇಶಾಂತರ ಹೋಗುವುದು ಅನಿವಾರ್ಯವಾಯಿತು. ವರ್ತಮಾನ ಕಾಲದಲ್ಲಿ ಸಿಂಧದ ಕೃಪಾಲಾನಿ, ಹರ್ಯಾನದ ಡಾ। ರಘುನಾಥ ಐರಿ ಮತ್ತು ಕಾಶ್ಮೀರೀ ಪಂಡಿತರು ಸಾರಸ್ವತ ಬ್ರಾಹ್ಮಣ ವರ್ಗದವರೆಂದೇ ಮಾನ್ಯರಾಗುತ್ತಾರೆ. 'ಕಚ್'ನ ಸೋಮಯ ಮತ್ತು ರಾಜಸ್ಥಾನದ ರಾವಲ್ ಇವೂ ಸಾರಸ್ವತರ ಉಪನಾಮ (ಕುಲನಾಮ)ಗಳೆಂದು ತಿಳಿಯಲ್ಪಟ್ಟಿವೆ.

ಮೇಲೆ ಹೇಳಿದ ಉಜ್ಜಯಿನಿ ವಿಶ್ವವಿದ್ಯಾಲಯದ ಪದ್ಮಶ್ರೀ ಡಾ। ವಾಕಣ್‌ಕರ್ ಅವರು ಹರಪ್ಪ ಅಥವಾ ಸಿಂಧೂ ನಾಗರಿಕತೆಯೆಂದರೆ 'ಸಾರಸ್ವತ ನಾಗರಿಕತೆ'ಯೆಂದು ಹೇಳಿರುತ್ತಾರೆ. ತಥಾಕಥಿತ ಹರಪ್ಪನ್ ಸಂಸ್ಕೃತಿಗೆ ಸಂಬಂಧಿಸಿದ ಒಂದು ವಸತಿ ಸ್ಥಳವು ಪೂರ್ವಕಾಲದ ಸರಸ್ವತಿ ಅಂದರೆ ಈಗಿನ ಘಾಗ್ಗರ್ ತೀರದ ಕಾಲಿ ಬಂಗನ್ ಎಂಬಲ್ಲಿ ಪತ್ತೆಯಾಗಿದೆ. ಹರಪ್ಪನ್ ಸಂಸ್ಕೃತಿಯು ಪ್ರತ್ಯೇಕವಾದ ಒಂದು ಸ್ಥಿತಿಯಾಗಿರದೆ ಮೊಹೆಂಜೊದಾರೊ, ಹರಪ್ಪ, ಲೋಥಾಲ್, ಧೋಲ್ವಿರಾನ್ ಇತ್ಯಾದಿಗಳು ವೈದಿಕ ಸಂಸ್ಕೃತಿಯೇ ಆಗಿವೆ ಎಂಬ ನಿಷ್ಕರ್ಷೆಗೆ ಈಗೀಗ ವಿದ್ವಾಂಸರು ಬಂದಿರುತ್ತಾರೆ. ಮೇಲೆ ಹೇಳಿದ ವೈದಿಕ ಕಾಲಘಟ್ಟವು ಹರಪ್ಪ ಕಾಲಘಟ್ಟದ ಅನಂತರದ್ದೆಂದಾದರೆ ಈಗ ಪತ್ತೆಯಾದ 'ಹರಪ್ಪ' ಸಂಸ್ಕೃತಿಯ 2600 ಹಿರಿಕಿರಿ ಪ್ರಾಚೀನ ನಿವೇಶನಗಳ ಪೈಕಿ 1600 ಈಗ ಗುರುತಿಸಲಾದ ಸರಸ್ವತಿಯ ದಂಡೆಯಲ್ಲಿ ಇದ್ದವುಗಳೆಂದು ಲೆಕ್ಕ ಹಾಕಲಾಗಿದೆ. ವೈದಿಕ ಕಾಲಘಟ್ಟವು ಹರಪ್ಪ ಕಾಲಘಟ್ಟದ ಅನಂತರದ್ದೆಂದಾದರೆ ವೈದಿಕ ಜನರು ಪೂರ್ಣತಯಾ ಬರೆಯುವುದನ್ನೇ ನಿಲ್ಲಿಸಿದರು ಅಥವಾ ಬರೆಹವನ್ನೇ ಮರೆತರು ಎನ್ನಲಾಗುವುದಿಲ್ಲ. ಮುಖ್ಯ ಅಂಶವೆಂದರೆ ಸರಸ್ವತಿ ಮಂಡಲದ ಬ್ರಾಹ್ಮಣರು ಇತರ ಭೂಭಾಗಗಳಿಗೆ ವಲಸೆ ಹೋದರೆಂಬುದೇ ಆಗಿದೆ. ನದಿಯು ಬತ್ತಿಹೋದುದರಿಂದ ತಮ್ಮ ಜೀವರಕ್ಷಣೆಗಾಗಿ ಅವರು ಪ್ರಥಮವಾಗಿ ದೇಶಾಂತರಗೈದರು. ಬಹುಶಃ ಇದು 4000 ವರ್ಷಗಳ ಮೊದಲು ಘಟಿಸಿತು. ಅನಂತರದ ಕಾಲದಲ್ಲಿ ಶಾತವಾಹನರ ಕಾಲದಲ್ಲಿ (2000 ವರ್ಷಗಳ ಮೊದಲು) ಅವರನ್ನು ಕೊಂಕಣ ಮತ್ತು ಗೋವಾದ ಅಗ್ರಹಾರಗಳಿಗೆ ಬಂದು ವಸತಿ ಹೂಡಲು ಆಮಂತ್ರಿಸಲಾಯಿತು. ಮತ್ತೆ ಪುನಃ ಕೊಂಕಣದ ಮೌರ್ಯರು, ಕಲಚೂರಿ, ಭೋಜರು, ಬನವಾಸಿಯ ಕದಂಬರು, ರಾಷ್ಟ್ರಕೂಟರು, ದೇವಗಿರಿಯ ಯಾದವರು, ಕೊಂಕಣದ ಶಿಲಾಹಾರರು ಗೋವೆಯ ಕದಂಬರೂ ಅವರನ್ನು ಆಮಂತ್ರಿಸಿದರು.

ಬರೋಡಾ ರಾಜ್ಯ ಗೆಝೆಟಿಯರಿನಲ್ಲಿನ (1923) ಉಲ್ಲೇಖದ ಆಧಾರದಲ್ಲಿ ಹೇಳುವುದಿದ್ದರೆ ಗುಜರಾತ್ ಸಾರಸ್ವತ ಬ್ರಾಹ್ಮಣರು ಜೀವಂತವಿರಿಸಿರುವ ಸಂಪ್ರದಾಯಗಳನ್ನು ಈ ರೀತಿ ಹೇಳಬಹುದು. ಸಾರಸ್ವತರೆಂದರೆ 'ಒಂದಾನೊಂದು ಕಾಲದಲ್ಲಿ ಸರಸ್ವತಿ ನದಿಯ ನೀರಿನಿಂದ ಆವೃತವಾಗಿದ್ದು, ದಿಲ್ಲಿಯ ಹೊರಗಿನ ಕಡೆಯಿಂದ ಭಾರತದ ವಾಯುವ್ಯ ಭೂಪ್ರದೇಶದಲ್ಲಿ ಈಗಲೂ ವಾಸವಾಗಿರುವ ಅತಿ ಪುರಾತನ ಬ್ರಾಹ್ಮಣ ವರ್ಗದವರಾಗಿದ್ದಾರೆ.". ಅವರು ಗುಜರಾತಿಗೆ ಸಿಂಧ್ ಮತ್ತು ಕಛ್ ಮಾರ್ಗವಾಗಿ ಪಂಜಾಬದಿಂದ ತಮ್ಮ ಯಜಮಾನ ಪೋಷಕ ಲುಹಾನ, ಭನ್ಸಾಲಿ, ಭಾಟಿಯಾ ಆದಿಯವರ ಸಂಗಡ ವಲಸೆ ಬಂದರು. ಅವರು ಶೈವ ಮತಸ್ಥರಿದ್ದು

ಸರಸ್ವತಿಯ ಆರಾಧನೆಯನ್ನು ಮಾಡುತ್ತಾರೆ.'' ಸ್ಕಂದ ಪುರಾಣದಲ್ಲಿ ವರ್ಣಿಸಿದಂತೆ ಅವರು ವಿದೇಹದ ತ್ರಿಹೋತ್ರದಿಂದ ಬಂದವರಲ್ಲ. ದಕ್ಷಿಣಕ್ಕೆ ಬಹುತೇಕ ಸಮುದ್ರಮಾರ್ಗವಾಗಿ ಪಸರಿಸಿದರು ಎಂಬುದು ಗಮನಾರ್ಹ. ಪರಶುರಾಮನು ಪಂಚಗೌಡ ಬ್ರಾಹ್ಮಣರನ್ನು ತ್ರಿಹೋತ್ರ (ತಿರಹೂತ್)ದಿಂದ ಕರೆತಂದು ಗೋವಾ ಕುಶಸ್ಥಲಿಯ ಪಂಚಕ್ರೋಶದಲ್ಲಿ ಇರಗೊಳಿಸಿದನು ಎಂಬುದಾಗಿ ಸ್ಕಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿ ಉಕ್ತವಾಗಿದೆ. ಕೊಂಕಣ ಕರ್ನಾಟಕ ಕರಾವಳಿ ತಥಾ ಕೇರಳದಲ್ಲಿ ವಾಸ್ತವ್ಯವಾಗಿರುವ ಬ್ರಾಹ್ಮಣರ ವಿಷಯವಾಗಿಯೂ ಈ ತರದ ಕಥೆಗಳು ಪ್ರಚಲಿತವಾಗಿವೆ. ಪರಶುರಾಮನು ಚಾರಿತ್ರಿಕ ಪುರುಷನೆಂದಾದಲ್ಲಿ ಆತ ಸಾರಸ್ವತರ ದೇಶಾಂತರದ ಬಹು ಹಿಂದಿನ ಕಾಲದವನಿರಬೇಕು ಮತ್ತು ಇಂತಹ ಆಖ್ಯಾನಗಳನ್ನು ಬಹು ಗಂಭೀರವಾಗಿ ಗಮನಿಸಲಾಗುವುದಿಲ್ಲ. ಅದೇ ಗ್ರಂಥದಲ್ಲಿ ಮಾಂಗಿರೀಶ, ಮಹಾದೇವ, ಮಹಾಲಕ್ಷ್ಮಿ, ಮಹಾಲಸಾ, ಶಾಂತದುರ್ಗಾ, ನಾಗೇಶ, ಸಪ್ತಕೋಟೀಶ್ವರ ಆದಿದೇವಸ್ಥಾನಗಳನ್ನೂ ಪರಶುರಾಮನೇ ಸ್ಥಾಪಿಸಿದನೆಂದಿದೆ. ಭಾರತೀಯ ಸಂಸ್ಕೃತಿ ಕೋಶದಲ್ಲಿ (ಮರಾಠಿ ಗ್ರಂಥ ಭಾಗ 1 x ಪೃಷ್ಠ 753) ಬಿ.ಡಿ. ಸಾತೋಸ್ಕರ್ ಅವರು ಗೋವೆಗೆ ಬಂದ ಪ್ರಥಮ ಸಾರಸ್ವತ ಸಮೂಹವು ಷಷ್ಠಿಕಾರವೆಂದು ಪರಿಚಿತರಾದರು ಕಾರಣ ಅವರು ಷಷ್ಠಿ ತಾಲೂಕಿನ ಎಂಟು ಹಳ್ಳಿಗಳಲ್ಲಿ ವಾಸಮಾಡಲು ಪ್ರಾರಂಭಿಸಿದರು. ಮತ್ತು ಷಷ್ಠಿಕಾರರೆಂದರೆ ಆರು ಊರುಗಳವರೆಂದರ್ಥವೆನ್ನುತ್ತಾರೆ. ಅನಂತರ ಬಂದವರು ಕೆಲೋಶಿ ಮತ್ತು ಕುಡಾಲಗಳಲ್ಲಿ ನೆಲೆನಿಂತರು ಮತ್ತು ಆ ಊರುಗಳ ಹೆಸರಿನಿಂದ ಪರಿಚಿತರಾದರು. ಈ ಎರಡು ಪಂಗಡಗಳವರು ಕೆಲೋಶಿಕಾರ್ ಮತ್ತು ಕುಡಾಲ್ಕಾರ್ ಎಂಬುದಾಗಿ ಕರೆಯಲ್ಪಟ್ಟರು. ಇಲ್ಲಿಂದ ಅವರು ಇತರ ಊರುಗಳಿಗೆ ಪಸರಿಸಿದರು. ಹೊಸ ಅಗ್ರಹಾರಗಳು ಹುಟ್ಟಿಕೊಂಡವು ಮತ್ತು ಹೊಸ ವಸತಿಕಾರರೂ ವಲಸೆ ಬಂದರು. ಸರ್ವ ವೇದ ವಿದ್ವಾಂಸರಿಗೂ ಅನೇಕ ಪೀಳಿಗೆಗಳು ಸಂದ ಬಳಿಕ ಲಾಭಕಾರಕ ಉಪಜೀವಿಕೆಯು ಲಭಿಸದ ಕಾರಣ ಅವರು ಸಹಜವಾಗಿ ಕೃಷಿವ್ಯವಸಾಯ, ವಾಣಿಜ್ಯ ವ್ಯವಹಾರ ಮತ್ತಿತರ ಉದ್ಯೋಗಗಳು ಮುಖ್ಯವಾಗಿ ಸರಕಾರೀ ನೌಕರಿಗಳನ್ನು ಅವಲಂಬಿಸುವಂತಾಯಿತು.

ಕಾಲಾಂತರದಲ್ಲಿ ಅವರು ಶೆಣ್ವಿಗಳೆಂದು ಪರಿಚಿತರಾದರು. ಶೆಣ್ವಿ ಎಂಬುದು ಅನೇಕ ವಿಧವಾಗಿ ಅರ್ಥವಿಸಲ್ಪಟ್ಟಿದೆ. ಆದರೆ ಬಹು ಸಂಖ್ಯೆಯ ಸಾರಸ್ವತರು ಗ್ರಾಮಕರಣಿಕರು ಅಥವಾ ಗುಮಾಸ್ತರಿದ್ದುದರಿಂದ ಶೆಣೈ ಎಂಬ ಉಪನಾಮವು ಅಂಟಿಕೊಂಡಿತು. ಇದು ಸಂಸ್ಕೃತದ 'ಶಾನಭೋಗ' ಎಂಬುದರಿಂದ ಉಂಟಾಗಿದೆ ಮತ್ತು ಕೆಲವೆಡೆ ಹಾಗೆಯೇ ಪ್ರಚಲಿತವಿದ್ದು ಶಾನ್‌ಭಾಗ್, ಶಾನುಭೋಗ, ಶೆಣೈ, ಶೆಣ್ವಿ ಆದಿ ರೂಪಗಳಿಂದ ಕೂಡ ಜ್ಞಾತವಾಗಿದೆ. ಬ್ರಿಟಿಷರ ಸಮಯದಲ್ಲಿ ದಕ್ಷಿಣ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸರ್ವಸಾಮಾನ್ಯವಾಗಿ ಎಲ್ಲ ಗ್ರಾಮಗಳಲ್ಲೂ ಗ್ರಾಮಕರಣಿಕರಾಗಿ ನಿಯುಕ್ತರಾದ ಚಿತ್ರಾಪುರ ಸಾರಸ್ವತರು 'ಶೆಣೈಪಣಾಚೆ' (ಕರಣಿಕ ವೃತ್ತಿಯವರು) ಅಥವಾ 'ಶೆಣಾಪಂಚೆ' ಎಂದೇ ಪರಿಚಿತರಾದರು. ಪ್ರಖ್ಯಾತ ವಿದ್ವಾಂಸ ಗುಂಜೀಕರರ ಅಭಿಮತದಂತೆ ಶೆಣ್ವಿ ಎಂಬುದು ಶರ್ಮನ್ ಶಬ್ದದಿಂದ ಉತ್ಪತ್ತಿಯಾಗಿದೆ. ರಾವ್ ಬಹದ್ದೂರ್ ತಾಲಮಕ್ಕಿ ಮತ್ತು ಪ್ರೊ| ಮಾಳಶೆ ಅದರ ಮೂಲವನ್ನು 'ಶಾಣೆ' ಎಂದು ವಾದಿಸುತ್ತಾರೆ. 'ಶಾಣೆ ಎಂದರೆ ಬುದ್ಧಿವಂತ. ರಾಜವಾಡೆ, ಭಂಡಾರ್‌ಕರ್, ಶೆಣೈ ಗೊಂಯಬಾಬ್ ಆದಿ ಮಹನೀಯರು. ಅದು 'ಸೇನಾಪತಿ' ಅಥವಾ 'ಶ್ರೇಣಿಪತಿ' ಶಬ್ದಜನ್ಯ ಎಂದು ಊಹಿಸುತ್ತಾರೆ. ಗಣೇಶ ಶರ್ಮಾ ಅವರ ಅಭಿಪ್ರಾಯಾನುಸಾರ ಅದು 96 ಗ್ರಾಮಗಳುಳ್ಳ 'ಶಾಣ್ಣವಿ' ಗ್ರಾಮಗಳಿಗೆ ಸಂಬಂಧಿಸಿದ್ದು,

ತೀಸವಾಡಿ (30 ವಾಡಿಗಳು) ಸೇರಿದ ಷಷ್ಟಿ (ಸಾಷಷ್ಟಿ ಅರ್ಥಾತ್ 66) ಗ್ರಾಮಗಳು ಉಳ್ಳ ಎಂದು. ಆದರೆ ಇತರ ಕಡೆ ಇರುವ ಬ್ರಾಹ್ಮಣರು ತಮ್ಮ ಹೆಸರುಗಳಿಗೆ ಸೇರಿಸಿಕೊಂಡಂತೆ ಶಾನಭಾಗ ಅಥವಾ ಶೆಣೈ ಎಂಬುದರಿಂದಲೇ ಇದು ಹುಟ್ಟಿಕೊಂಡಿರುವುದಿದ್ದು, ಅಕ್ಷರಶಃ ಇದು ಬರವಣಿಗೆಗಾರ, ಅಧ್ಯಾಪಕ ಅಥವಾ ವಿದ್ವಾನ್ ಎಂಬರ್ಥವನ್ನಿದು ನಿಶ್ಚಯವಾಗಿಯೂ ಸೂಚಿಸುತ್ತದೆ. ಸಾತೋಸ್ಕರರು ವ್ಯಕ್ತಗೊಳಿಸಿದ ಅಭಿಪ್ರಾಯವನ್ನು ನಾನು ಸ್ವೀಕರಿಸುತ್ತೇನೆ. (ಭಾರತೀಯ ಸಂಸ್ಕೃತಿ ಕೋಶ ಪೃಷ್ಠ 735) ಶಾನಭಾಗ ಶಬ್ದಕ್ಕೆ ಇನ್ನೊಂದು ಶಬ್ದವನ್ನು ಪರ್ಯಾಯವಾಗಿ ಉಪಯೋಗಿಸುತ್ತಿದ್ದರು. ಅದೇಂದರೆ 'ಕರಣ' ಅಥವಾ 'ಕರಣಿ' ಎಂದು ಮತ್ತು 'ನಾಡಕರ್ಣಿ' ಎಂದು ಸಾರಸ್ವತದಲ್ಲಿ ಕಂಡು ಬರುತ್ತಿರುವ 'ನಾಡು' ಅಥವಾ 'ದೇಶ' (ಗ್ರಾಮ ಸಮೂಹ) ಇದರ ಕರಣಿಕ (ಆಯವ್ಯಯ ಲೆಕ್ಕವನ್ನಿಡುವವರು accountant) ಪುತ್ತು ದೇಶಪಾಂಡೆ ಎಂಬುದೂ ಅಂತಹದೇ ಶಬ್ದವಾಗಿರುತ್ತದೆ.

ಇಲ್ಲಿ ಉಲ್ಲೇಖನೀಯವೆಂದರೆ ಸರ್ವ ಸಾರಸ್ವತರೂ ಋಗ್ವೇದಿಗಳಿದ್ದು ಆಶ್ವಲಾಯನ ಸೂತ್ರವನ್ನು ಅನುಸರಿಸುತ್ತಾರಲ್ಲದೆ ಶಾಕಲ ಶಾಖೆಯವರಿದ್ದಾರೆ. ಮೂಲತಃ ಅವರು ಸ್ಮಾರ್ತರಿದ್ದು ಭಾಗವತ ಸಂಪ್ರದಾಯವನ್ನು ಅನುಸರಿಸುತ್ತಿದ್ದರು. ವಲಸೆ ಬರುತ್ತಿರುವಾಗ ಆದಿಶಂಕರಾಚಾರ್ಯ ದ್ವಾರಾ ಪುಷ್ಟೀಕೃತ ಸ್ಮಾರ್ತ ಸಂಪ್ರದಾಯಾನುಯಾಯಿಗಳಿದ್ದರು. ಈ ಪದ್ಧತಿಯಲ್ಲಿ ಹೇಳಿದ ಶಿವ, ವಿಷ್ಣು ಗಣಪತಿ, ಸೂರ್ಯನಾರಾಯಣ ಮತ್ತು ಶಕ್ತಿ ಎಂಬ ಪಂಚಾಯತನವನ್ನು ಆರಾಧಿಸುವವರಾಗಿದ್ದರು. ಇಡೀ ಸಮಾಜಕ್ಕೆ ಕುಠ್ಠಾಳಿ ಅಥವಾ ಕುಶಸ್ಥಳಿ ಎಂಬಲ್ಲಿನ ಮೂಲತಃ ಸ್ಥಾಪಿತವಾದ ಕವಳೇ ಮಠವೇ ಅವರ ಮಠವಾಗಿತ್ತು. ಕಾಶ್ಮೀರದ ಗೌಡಪಾದ ಪರಂಪರೆಯ ಸ್ವಾಮೀ ವಿವರಣಾನಂದರು ಈ ಮಠವನ್ನು ಸ್ಥಾಪಿಸಿದರು. ಎಂದು ಅಭಿಪ್ರಾಯಪಡಲಾಗುತ್ತಿದೆ. ಗೌಡಪಾದಾಚಾರ್ಯರು ಗೋವಿಂದ ಭಗವತ್ಪಾದರ ಗುರುಗಳಿದ್ದು ಗೋವಿಂದ ಭಗವತ್ಪಾದರು ಶಂಕರಾಚಾರ್ಯರಿಗೆ ಸನ್ಯಾಸ ದೀಕ್ಷೆಯನ್ನಿತ್ತವರಾಗಿದ್ದರು.

ಸಾಧಾರಣ ಇಸವಿ 740ರಲ್ಲಿ ಮಠವು ಕುಟ್ಟಲಿ ಅಥವ ಕುಶಸ್ಥಳಿಯಲ್ಲಿ ಸ್ಥಾಪಿತವಾಗಿ ಅನಂತರ ಕವಳೆಗೆ ಸ್ಥಾನಾಂತರಿತವಾಯಿತು. 13ನೇ ಶತಮಾನದಲ್ಲಿ ಆಚಾರ್ಯ ಮಧ್ವ ಪ್ರಣೀತ ದ್ವೈತ ವೈಷ್ಣವ ಮತಾನುಯಾಯಿಗಳಾಗಿ ಅವರು ಪರಿವರ್ತನೆಗೊಂಡ ಮೇಲೆ ಅವರು ಪಂಚಾಯತನ ಪದ್ಧತಿಯನ್ನವರು ತ್ಯಜಿಸಲಿಲ್ಲ ಅಥವಾ ಶಿವಪೂಜೆಯನ್ನು ಅವರು ಬಿಡಲಿಲ್ಲ. ಅವರ ಬಹುತೇಕ ಕುಲದವರೆಲ್ಲ ಶೈವ (ನಾಗೇಶ, ರಾಮನಾಥ) ಮತ್ತು ಶಕ್ತಿಗೆ ಸಂಬಂಧಪಟ್ಟವರಾಗಿದ್ದಾರೆ. (ಶಾಂತೇರಿ ಕಾಮಾಕ್ಷಿ, ಮಹಾಲಸಾ). ಮೂಲತಃ ಉಡುಪಿ ಮತ್ತು ಕುಂಭಕೋಣ ಮಠಗಳಿಗೆ ವಿಧೇಯರಾಗಿ ಜೀವಿಸುತ್ತಿದ್ದ ಅವರು ಬಳಿಕ ಮತ್ತೆರಡು ಮಠಗಳಾದ ಗೋಕರ್ಣ ಪರ್ತಗಾಳಿ ಮಠ ಮತ್ತು ಕಾಶೀಮಠಗಳನ್ನು ಸ್ಥಾಪಿಸಿಕೊಂಡರು. 18ನೇ ಶತಮಾನದಲ್ಲಿ ಕೆಲವು ಸ್ಮಾರ್ತರು ಕೆನರಾ ಪ್ರದೇಶದ ಶಿರಾಲಿಯ ಚಿತ್ರಾಪುರದಲ್ಲಿ ಒಂದು ಮಠವನ್ನು ಸ್ಥಾಪಿಸಿದರು ಮತ್ತು ಇತರ ಕೆಲವರು ವೆಂಗುರ್ಲಾ ಬಳಿಯ ದಾಭೋಲಿಯಲ್ಲೊಂದು ಮಠವನ್ನು ಸ್ಥಾಪಿಸಿದರು (ಸಿಂಧುದುರ್ಗ ಜಿಲ್ಲೆ) ಪ್ರತೀಯೊಂದು ಮಠದ ಇತಿಹಾಸವನ್ನು ಸಂಕ್ಷಿಪ್ತವಾಗಿ ಮತ್ತು ಪ್ರತ್ಯೇಕವಾಗಿ ಅನಂತರ ನೋಡೋಣ. ಈಗ ವಿಭಿನ್ನ ಕ್ಷೇತ್ರಗಳಲ್ಲಿ ಸಾರಸ್ವತರ ಯಶಸ್ವೀ ಸಾಧನೆಗಳನ್ನವಲೋಕಿಸೋಣ.

ತಮ್ಮ ಉದ್ಯಮಶೀಲತೆ, ಸೂಕ್ಷ್ಮಬುದ್ಧಿ ಮತ್ತು ಶೈಕ್ಷಣಿಕ ಪ್ರಗತಿಯ ಕಾರಣದಿಂದ ಸಾರಸ್ವತರು ವಿದ್ವಾಂಸರಾಗಿ, ಕಾರ್ಯಭಾರಿಗಳಾಗಿ, ವಾಣಿಜ್ಯ ಕ್ಷೇತ್ರದಲ್ಲೂ ಪ್ರಸಿದ್ಧರಾಗಿ ಅಭಿವೃದ್ಧಿ ಹೊಂದಿದರು. ದೂರ ಕೇರಳದ ಕೊಚ್ಚಿಯಂತಹ ದೂರದೂರುಗಳಿಗೆ ಹೋದರೂ ಅವರು ತಮ್ಮ ಕೊಂಕಣಿ ಭಾಷೆಯನ್ನು ಬಿಡಲಿಲ್ಲ. 14ನೇ ಶತಮಾನದಲ್ಲೇ ಅವರು ಅಲ್ಲಿಗೆ ತಲುಪಿಸಬೇಕು. ಮುಸ್ಲಿಮರು ಗೋವೆಯನ್ನು ಎರಡು ಬಾರಿ ಆಕ್ರಮಿಸಿದ್ದರು. 1328ರಲ್ಲಿ ದಿಲ್ಲಿಯ ತುಘಲಕ್ ಸುಲ್ತಾನರು ಕದಂಬರ ರಾಜಧಾನಿ ಚಂದ್ರಪುರ (ಚಂದೋರ್ ಅಥವಾ ಚಂದರ್‌ಗಾಂವ್)ವನ್ನು ವಶಪಡಿಸಿಕೊಂಡರು. ಪುನಃ 1472ರಲ್ಲಿ ಗುಲ್ಬರ್ಗದ ಬಹಮನಿ ಸುಲ್ತಾನರು ಗೋವೆಯನ್ನು ಗೆದ್ದುಕೊಂಡರು. ಈ ಅವಧಿಯಲ್ಲಾದ ಅನಾಹುತಗಳ ಕಾರಣದಿಂದ ಬಹಳಷ್ಟು ಜನರು ಗೋವೆಯನ್ನು ತೊರೆದು ಕರ್ನಾಟಕದ ಕರಾವಳಿ ಮತ್ತು ಕೇರಳ ಪ್ರದೇಶಗಳಿಗೆ ವಲಸೆ ಹೋದರು. 'ದಿ ಕೇರಳ ಡಿಸ್ಟ್ರಿಕ್ಟ್ ಗೆಝೆಟಿಯರ್ (ಎರ್ನಾಕುಲಂ 1965) ಹೇಳುವಂತೆ. 'ಸ್ಥಳೀಯವಾಗಿ ಕೊಂಕಣಿಗರು ಎಂದು ಕರೆಸಿಕೊಳ್ಳುವ ಗೌಡ ಸಾರಸ್ವತರು ಕೊಂಕಣದ ಅತಿ ದಕ್ಷಿಣ ಭಾಗವಾದ ಗೋವೆಯವರು. ಅವರು ಸಾಷಷ್ಟಿಕಾರರೆಂದೂ ಪರಿಚಿತರಿದ್ದು ಗೋವೆಯ ಸಾಷಷ್ಟಿ (ಈಗಿನ ಸಾಲ್ಸೆಟ್)ಯವರು. ಗೆಝೆಟಿಯರ್ ಮುಂದುವರಿದು 'ಈಗಲೂ ಮೂಲತಃ ಗೋವೆಯವರೆಂಬುದನ್ನು ಸ್ಮರಣೆಯಲ್ಲಿರಿಸಿಕೊಳ್ಳಲು ಮಟ್ಟಾಂಚೇರಿಯಲ್ಲಿ ಸಾಸಟಿ ಪರಂಬು ಎಂದು ಒಂದು ಸ್ಥಳವನ್ನು ಹೆಸರಿಸಿರುವುದನ್ನು ಕಾಣಬಹುದು (240-40)" ಎನ್ನುತ್ತದೆ. ಆದರೆ ಶ್ರೀ ಪಿ. ಪುರುಷೋತ್ತಮ ಮಲ್ಯರು ಹೇಳುತ್ತಾರೆ 'ಇದು ಅವರು 13ನೇ ಶತಮಾನದ ಆದಿಯಿಂದಲೇ ವಲಸೆ ಬಂದು ಇಲ್ಲಿದ್ದರೆಂಬುದಕ್ಕೆ ಕಾಕತಾಳೀಯವಾದ ಸಾಕ್ಷಿ" ಎಂದು. ಕೊಂಕಣಿ ಜನರು 1294ರಲ್ಲೇ ನಿರ್ವಸಿತರಾಗಿ ಬಂದರು ಎಂದು ಕೊಚ್ಚಿಯ ದಿವಾನರು ಬ್ರಿಟಿಷ್ ರೆಸಿಡೆಂಟರಿಗೆ ಪತ್ರ ಬರೆದ ಉಲ್ಲೇಖವನ್ನು ಶ್ರೀ ಮಲ್ಯರು ಮುಂದಿಡುತ್ತಾರೆ. 14ನೇ ಶತಮಾನದಲ್ಲಿ ತದನಂತರ ಪೋರ್ಚುಗೀಸರು ಗೋವೆಗೆ ಬಂದು ಧಾರ್ಮಿಕ ಹಸ್ತಕ್ಷೇಪ ಪ್ರಾರಂಭಿಸಿ, ಧರ್ಮಾಂತರದ ತೀವ್ರ ಅಕ್ರಮಗಳನ್ನು ಪ್ರಾರಂಭಿಸಿದಾಗ ಅಂದರೆ 16ನೇ ಶತಮಾನದಲ್ಲಿ ಅಧಿಕಾಧಿಕ ನಿರ್ವಸಿತರು ಈ ಭಾಗಗಳಿಗೆ ವಲಸೆ ಬಂದರು. ಮಧ್ವವಿಜಯ ಗ್ರಂಥದಲ್ಲಿ ಆಚಾರ್ಯ ಮಧ್ವರು ಮಂಜೇಶ್ವರದ ಅನಂತೇಶ್ವರ ದೇವಸ್ಥಾನಕ್ಕೆ ಸಂದರ್ಶನವಿತ್ತ ಹಾಗೂ ಆ ದೇವಾಲಯವು ಸಾರಸ್ವತರ ಅಂಕಿತದಲ್ಲಿದ್ದುದರ ಉಲ್ಲೇಖವಿದೆ. ಹೀಗೆ 13 ಮತ್ತು 14ನೇ ಶತಮಾನಗಳಲ್ಲಿಯೇ ಸಾರಸ್ವತರು ದೇಶಾಂತರವಾಸಿಗಳಾಗಿ ಗೋವಾದ ಹೊರಗೆ ಹೋಗುತ್ತಲೇ ಇದ್ದರು, ಹಾಗೂ ಪೋರ್ಚುಗೀಸರ ಪ್ರವೇಶವಾದ ಮೇಲೆ ಈ ವಲಸೆ ಹೋಗುವವರ ಸಂಖ್ಯೆಯು ಬಹಳ ಹೆಚ್ಚಾಯಿತು. 'ಸ್ವಧರ್ಮೇನಿಧನಂ ಶ್ರೇಯಃ' ಎಂಬುದೊಂದೇ ಅವರ ಧ್ಯೇಯವಾಗಿತ್ತು. ಅವರಲ್ಲಿ ಕೆಲವರು ಕಾಳೀ ನದಿಯನ್ನು ದಾಟಿ ದಕ್ಷಿಣಕ್ಕೆ ಹೋದರು ಮತ್ತು ಅನೇಕರು ಸಮುದ್ರ ಪ್ರಯಾಣಗೈದು ತೆರಳಿದರು.

ಅವರು ಪಶ್ಚಿಮ ಕರಾವಳಿಯ ಜೈನ ವರ್ತಕರೊಡನೆ ಸ್ಪರ್ಧಿಸಿ ಯಶಸ್ವಿಯಾದರು. ಮುಸ್ಲಿಂ ಮಾಪ್ಲಾ ಮತ್ತು ನವಾಯತ್ ವರ್ತಕರೊಂದಿಗೂ ವಿದೇಶ ವ್ಯವಹಾರಗಳಲ್ಲಿ ಸ್ಪರ್ಧಿಸಿದರು. ಡಚ್ ಮತ್ತು ಪೋರ್ಚುಗೀಸರು ವಾಣಿಜ್ಯಿಕ ವ್ಯವಹಾರಗಳಲ್ಲಿ ಸಾರಸ್ವತರೊಡನೆ ಹೆಚ್ಚಿನ ಸಂಪರ್ಕ

ಹೊಂದಿದರು. ಅವರ ಪ್ರತಿಸ್ಪರ್ಧಿಗಳಾಗಿದ್ದು ವಿರೋಧಿಗಳಂತಿದ್ದ ಅರಬರೊಂದಿಗೆ ಮುಸ್ಲಿಂ ವರ್ತಕರಿಗೆ ಹೆಚ್ಚಿನ ಸಂಪರ್ಕವಿದ್ದುದರಿಂದ ಅವರು ಮುಸ್ಲಿಂ ವರ್ತಕರನ್ನು ದೂರವಿಟ್ಟರು. ಸಾರಸ್ವತರಿಗೆ ತಮ್ಮ ಹೊಸ ವಸತಿಗಳಲ್ಲಿ ಅನೇಕ ದುಃಖ ಸಂಕಷ್ಟಗಳನ್ನು ಸಹಿಸಬೇಕಾಯಿತು. ಈ ವ್ಯವಹಾರವು ಭಾರೀ ಸ್ಪರ್ಧಾ ಮತ್ಸರಯುಕ್ತವಾಗಿತ್ತು.

ಕೊಚ್ಚಿಯಲ್ಲಿ ಬಂಡಸಾಲೆಗಳನ್ನು ಸ್ಥಾಪಿಸಿದ ಡಚ್ಚರು ಕಾಳುಮೆಣಸು, ಅಕ್ಕಿ ಮತ್ತು ಇತರ ಕಾಡುತ್ಪತ್ತಿಯ ಖರೀದಿಗಾಗಿ ಸಾರಸ್ವತರನ್ನು ಅವಲಂಬಿಸಿರಬೇಕಿತ್ತು. ಕೊಚ್ಚಿಯ ಪತ್ರಾಗಾರಗಳಲ್ಲಿನ ಗ್ರಂಥಾವರಿ ದಾಖಲೆಗಳ ಪ್ರಕಾರ ಡಚ್ ಈಸ್ಟ್ ಇಂಡಿಯಾ ಕಂಪೆನಿಯು ಕೊಚ್ಚಿ ಸಂಸ್ಥಾನದಲ್ಲಿ ಕೊಂಕಣಿ ಮತ್ತು ಕ್ರಿಶ್ಚಿಯನ್ನರ ಸಲುವಾಗಿ 1663ರಲ್ಲಿ 'ಅತಿರಿಕ್ತ ಪ್ರಾಂತೀಯತಾ ಅನುಮತಿ'ಯನ್ನು (extra territoriality) ಪಡೆದುಕೊಂಡಿತ್ತು. ಇದರ ಪ್ರಕಾರ ಕೊಚ್ಚಿ ಸಂಸ್ಥಾನದ ಕೊಂಕಣಿ ಮತ್ತು ಕ್ರಿಶ್ಚಿಯನ್ ನಾಗರಿಕರು ಡಚ್ಚರ ಕಂಪೆನಿ ನ್ಯಾಯಾಲಯಗಳಲ್ಲಿ ಮಾತ್ರ ದಾವೆ ಹೂಡಲು ಅವಕಾಶವಿತ್ತು. ಇದರಿಂದಾಗಿ ಕೊಂಕಣಿ ವ್ಯಾಪಾರಿಗಳಿಗೆ ತುಂಬ ಅನುಕೂಲವಾಗಿತ್ತು. ಡಚ್ಚರ ವ್ಯಾಪಾರ ವಹಿವಾಟುಗಳಿಗೆ ಸಾರಸ್ವತರು ತುಂಬಾ ಸಹಕಾರ ನೀಡುತ್ತಿದ್ದರು ಮತ್ತು ಕ್ರಿಶ್ಚಿಯನ್ನರಂತು ಡಚ್ಚರಿಗೆ ಸಮಾನ ಧರ್ಮೀಯರಿದ್ದರು. ಈ ಕಾರಣದಿಂದ ಅವರಿಗೆ ಈ ವಿಶೇಷ ಅನುಮತಿಯು ದೊರಕಿತ್ತು. ದಾಖಲೆಗಳನ್ನಾಧರಿಸಿ ಶ್ರೀ ಪುರುಷೋತ್ತಮ ಮಲ್ಯರು ಅನೇಕ ಮುಖ್ಯ ವಿವರಗಳನ್ನು ಸಂಗ್ರಹಿಸಿದ್ದಾರೆ. 1599ರಲ್ಲಿ ಮಟ್ಟಾಂಚೇರಿಯಲ್ಲಿ ತಿರುಮಲ ದೇವಸ್ಥಾನವನ್ನು ನಿರ್ಮಿಸಲು ಬಾಡಿಗೆ ವಿರಹಿತವಾಗಿ ಸ್ಥಳವನ್ನು ಕೊಚ್ಚಿಯ ರಾಜನು ಕೊಟ್ಟನು. ಅವರ ವಸತಿಗಳೊಳಗಿನ ಭೂ ಸಂಬಂಧ ನ್ಯಾಯ ವ್ಯವಹರಣೆಗಳಿಗೆ ಮತ್ತು ಪಾತಕಗಳ ವಿಚಾರಣೆಯ ಅಧಿಕಾರವನ್ನೂ ಸಾರಸ್ವತರಿಗೆ ಸಂಸ್ಥಾನದ ರಾಜರು ಕೊಟ್ಟರು. ಉತ್ತರ ಮಲಬಾರಿನ ಅರಸನು ತನ್ನ ವಾಣಿಜ್ಯಿಕ ಹಿತಾಸಕ್ತಿ ರಕ್ಷಣೆಗೆ ಬಾಬಣಿ ಶೆಣ್ಯೆ ಎಂಬ ಸಾರಸ್ವತ ವ್ಯಕ್ತಿಯ ಸಹಾಯವನ್ನು ಪಡೆದು ಪ್ರತಿಫಲವಾಗಿ ಕಣ್ಣಾನೂರಿನಲ್ಲಿ 'ಪಂಡಿಶಾಲಾ' ಪ್ರಾರಂಭಿಸಲು ಅವರಿಗೆ ವಿಶಾಲ ಸ್ಥಳವನ್ನು ಬಹುಮಾನವಾಗಿ ಕೊಟ್ಟುದು ಹದಿನೇಳನೆಯ ಶತಮಾನದ ಇತಿಹಾಸವಾಗಿದೆ.

ಕನ್ನಡ ಜಿಲ್ಲೆಯ ಜೈನ ರಾಜರಾದ ಭೈರರಸರು ಅಥವಾ ಸಾಂತರರು ಮೂಲ್ಕಿಯ ಸಾವಂತರು ಮತ್ತು ಬಿಳಗಿ (ಉತ್ತರ ಕನ್ನಡ)ಯವರು ಕೊಂಕಣಿ ವಣಿಕರನ್ನು ಕರೆಸಿ ಅವರಿಗೆ ಭೂಮಿಯನ್ನಿತ್ತು, ಕಾರ್ಕಳ, ಮೂಲ್ಕಿಗಳಲ್ಲಿ ದೇವಸ್ಥಾನಗಳನ್ನು ಕಟ್ಟಿಸಲು ಸಹಾಯವಿತ್ತು ಪ್ರೋತ್ಸಾಹಿಸಿದರು. ಬಿಳಗಿ ರಾಜರಿಗೆ ಮಡಗಾಂವಕರ್ ಶೆಣ್ಯೆ ರಾಜವೈದ್ಯರಾಗಿದ್ದರು. ಸೋಂದೆಯ ರಾಜರಿಗೆ ಗೌಡ ಸಾರಸ್ವತ ಸಮಾಜದ ಸದಸ್ಯರು ಮಂತ್ರಿಗಳಾಗಿದ್ದರು. (ಈ ಕುಲನಾಮ (ಉಪನಾಮ)ವಾಗಿರುವ ಕುಟುಂಬದವರು ಈಗಲೂ ಯಲ್ಲಾಪುರದಲ್ಲಿ ವಾಸವಾಗಿದ್ದಾರೆ) ಕೆಳದಿರಾಜರಿಗೆ ಮಂತ್ರಿಗಳಾಗಿ, ರಾಯಭಾರಿಗಳಾಗಿ, ಅಧಿಕಾರಿಗಳಾಗಿ ಈ ಸಮಾಜದವರು ಸೇವೆ ಸಲ್ಲಿಸಿರುತ್ತಾರೆ.

ವಿಜಯನಗರ ಸಾಮ್ರಾಜ್ಯದ ಸಮಯದಲ್ಲಿ ಕೊಚ್ಚಿ, ಕಣ್ಣಾನೂರು, ತಲಚೇರಿ, ಕುಂಬಳೆ, ಉಳ್ಳಾಲ, ಮಂಗಳೂರು, ಮೂಲ್ಕಿ, ಮಲ್ಪೆ (ಉಡುಪಿ), ಬಸ್ರೂರು, ಗಂಗೊಳ್ಳಿ, ಭಟ್ಕಳ, ತದಡಿ, ಮಿರ್ಜಾನ, ಕುಮಟಾ, ಹೊನ್ನಾವರ, ಅಂಕೋಲಾ ಇತ್ಯಾದಿ ಪಶ್ಚಿಮ ತೀರದ ಸರ್ವ ಮುಖ್ಯ ಬಂದರುಗಳಲ್ಲಿ ವಿದೇಶ ವ್ಯವಹಾರದಲ್ಲಿ ಗೌಡ ಸಾರಸ್ವತರ ಪ್ರಮುಖ ಪಾತ್ರವಿದ್ದು ಅವರಿಗೆ

ಗಣನೀಯ ಪಾಲು ಇದ್ದಿತ್ತು. ಸಾರಸ್ವತರ ಸಫಲತೆಯ ಉಲ್ಲೇಖಗಳು, ದಾಖಲೆಗಳಲ್ಲಿ, ಶಿಲಾಲೇಖಗಳಲ್ಲಿ ಮತ್ತು ವಿದೇಶೀ ಪರ್ಯಟಕರ ಲೇಖನಗಳ ದ್ವಾರಾ ಪ್ರಮಾಣರೂಪವಾಗಿ ಬಹಳಷ್ಟು ಲಭ್ಯವಿದೆ.

ವಿಜಯನಗರ ಸಾಮ್ರಾಜ್ಯದ ಸಮಯದಲ್ಲಿ ಭಟ್ಕಳವು ಒಂದು ಪ್ರಮುಖ ಬಂದರಾಗಿತ್ತು. ಶತಮಾನಗಳಿಂದ ವಾಣಿಜ್ಯಿಕ ವ್ಯವಹಾರಗಳಲ್ಲಿ ಮುಖ್ಯರಾಗಿದ್ದ ನವಾಯತರ ಗಣನೀಯ ಸಂಖ್ಯೆ ಇಲ್ಲಿದೆ. ಇಂತಹ ಕಡೆಯು ಸಾರಸ್ವತರಿಗೆ ಅವರದೇ ಆದ ಗೌರವಾನ್ವಿತ ಸ್ಥಾನವಿತ್ತು. ವಿಜಯನಗರದ ಸಾಳುವರ ಸಾಮಂತರಾಗಿದ್ದ ಜೈನ ಅರಸರೊಬ್ಬರು ಹಾಡುವಳ್ಳಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಭಟ್ಕಳವನ್ನು ಆಳುತ್ತಿದ್ದರು. ಭಟಕಳದ ಆಧಿಪತ್ಯ ಮಾಡುತ್ತಿದ್ದ ರಾಣಿ ಚೆನ್ನಾದೇವಿಯ ಮೇಲಿನ ಸಿಟ್ಟಿನಿಂದ ಪೋರ್ಚುಗೀಸ್ ಗವರ್ನರ್ ಡಿ'ಸೋಜಾ 1542ರಲ್ಲಿ ಭಟ್ಕಳವನ್ನು ಆಕ್ರಮಿಸಿ ತುಂಬ ರಕ್ತಪಾತ ನಡೆಸಿದ. ಆದರೆ ಬಹುಕ್ಷಿಪ್ರವಾಗಿ ಮೂಡುಭಟ್ಕಳ ವಿಸ್ತರಣೆಯು ನಿರ್ಮಿತವಾಯಿತು. ಅಷ್ಟರಲ್ಲಿ ಸಾರಸ್ವತರೂ ಅಲ್ಲಿ ಭದ್ರವಾಗಿ ವಾಸ್ತವ್ಯಕ್ಕೆ ತೊಡಗಿದ್ದರು. ಗೋವಾ ಕುಡತಿರಿಯ ಖೇತಪ್ಪಯ್ಯ (ಖೇತ್ ಪೈ) ಎಂಬವರು 1545-46ರಲ್ಲಿ ಖೇತಪ್ಪಯ್ಯ ನಾರಾಯಣ ದೇವಸ್ಥಾನವನ್ನು ಬಹು ಸುಂದರವಾಗಿ ಕಟ್ಟಿಸಿದ್ದರು. 1548ರಲ್ಲಿ ಚೆನ್ನಾದೇವಿರಾಣಿಯು ಈ ದೇವಾಲಯಕ್ಕೆ ದತ್ತಿಯನ್ನು ಕೊಟ್ಟಿದ್ದಳು. ಇದೊಂದು ಸುಂದರ ಶಿಲಾಮಯ, ವಿಜಯನಗರ ಶೈಲಿಯಲ್ಲಿ ನಿರ್ಮಿತವಾದ ದೇವಾಲಯವಾಗಿದ್ದು ಅಧಿಷ್ಠಾನ ಸ್ಥಳದಲ್ಲಿ ರಾಮಾಯಣದ ದೃಶ್ಯಗಳು, ಪೌಳಿಯ ಜಗತಿಯ ಎಲ್ಲ ಕಡೆಗಳಲ್ಲಿಯೂ ಇದ್ದು ಪ್ರಾಕಾರವು ಇತರ ವಿಶಿಷ್ಟ ಶಿಲ್ಪಕಲಾಕೃತಿಗಳಿಂದ ಸಂಪನ್ನವಾಗಿದೆ. ದೇವಾಲಯದ ಧ್ವಜ ಸ್ತಂಭದ ಕೆಳಭಾಗದಲ್ಲಿ ವಿಜಯನಗರ ಸಾಮ್ರಾಜ್ಯದ ಸಮಯದಲ್ಲಿ ಪ್ರಚಲಿತವಿದ್ದ ಪದ್ಧತಿಯ ಪ್ರಕಾರ (ದಾನಿಗಳ ಚಿತ್ರವನ್ನು ಕೊರೆಯುವುದು) ಖೇತ ಪೈ ದಂಪತಿಗಳ, ಅವರ ಐವರು ಪುತ್ರರ ಮತ್ತು ಸೊಸೆಯಂದಿರ ನಮಸ್ಕರಿಸುವ ಭಂಗಿಯ ಚಿತ್ರಗಳನ್ನು ಕೊರೆದಿರುವುದು ಕಂಡು ಬರುತ್ತದೆ. ದೇವಸ್ಥಾನದಲ್ಲಿ ಖೇತ ಪೈಯವರ ಐವರು ಮಗಂದಿರು ವಿವಿಧ ಸೇವೆಗಳ ಸಲುವಾಗಿ ದಾನ, ದತ್ತಿಗಳನ್ನಿತ್ತುದರ ನಾಲ್ಕು ದಾಖಲೆಗಳು ದೊರಕುತ್ತವೆ ಮತ್ತು ಆ ಪುತ್ರರು ದಾಮಪ್ಪಯ್ಯ, ತಿಮ್ಮಪ್ಪಯ್ಯ, ನಾರಣಪ್ಪಯ್ಯ, ವಾಮನಪ್ಪಯ್ಯ ಮತ್ತು ಕೃಷ್ಣಪ್ಪಯ್ಯ ದತ್ತಿಯನ್ನು ಕೊಟ್ಟಿರುವುದು 1554 ಮತ್ತು 1567ರ ಅವಧಿಯಲ್ಲಿ ಎಂಬುದು ತಿಳಿಯುತ್ತದೆ. ಅಪ್ಪಯ್ಯ ಎಂಬ ಉಪಸರ್ಗವು ಪೈ ಎಂಬುದರದೇ ರೂಪವೆಂದು ದಾಖಲೆಗಳ ಪರಿಶೀಲನೆಯಿಂದ ತಿಳಿಯುತ್ತದೆ.

'ಪತಿ' ಎಂಬ ಶಬ್ದದ ಕೊಂಕಣಿ ಅಥವಾ ಪ್ರಾಕೃತ ರೂಪವಾಗಿದೆ ಈ 'ಪೈ' ಪತಿ ಎಂಬುದು ಅಧಿಕಾರಿ ಎಂಬುದಕ್ಕೆ ಪರ್ಯಾಯ ವಾಚಿಯಾಗಿ ಉಪಯೋಗಿತವಾಗಿದೆ. ರಾಷ್ಟ್ರಕೂಟರ ಶಿಲಾಲೇಖದಲ್ಲಿ 'ಗ್ರಾಮಪತಿ' (ಎಂದರೆ ಹಳ್ಳಿಯ ಮುಖ್ಯಸ್ಥ) 'ವಿಷಯಪತಿ' (ಎಂದರೆ ಜಿಲ್ಲಾ ಮುಖ್ಯಸ್ಥ) 'ರಾಷ್ಟ್ರಪತಿ' (ಎಂದರೆ ಪ್ರಾಂತ್ಯದ ಮುಖ್ಯಸ್ಥ) ಈ ವಿಧವಾಗಿ ಉಲ್ಲೇಖಗಳಿವೆ. ಇದೇ ದೇವಾಲಯಕ್ಕೆ 1568ರಲ್ಲಿ ಗಣಪತಿ ಪಡಿಯಾರ್ ಎಂಬವರು (ವಿಟ್ಠಲ ಪಡಿಯಾರ್ ಅವರ ಮಗ) ದತ್ತಿಯನ್ನು ಕೊಟ್ಟುದು ತಿಳಿದು ಬರುತ್ತದೆ. (ಪ್ರತೀಹಾರ ಎಂಬುದು ಪಡಿಯಾರ ಆಗಿದೆ ಮತ್ತು ಪ್ರತೀಹಾರ ಎಂದರೆ ಅರಮನೆಯ ದ್ವಾರ ರಕ್ಷಕ). ಭಟ್ಕಳದಲ್ಲಿ ಪ್ರಗತಿಶೀಲರಾಗಿದ್ದ ಸಾರಸ್ವತ

ಕುಟುಂಬದವರು ಕಟ್ಟಿಸಿದ ಸಣ್ಣ, ಸುಂದರ ದೇವಾಲಯವಿದಾಗಿದೆ. ಈ ದೇವಾಲಯದ ವಿಚಾರವಾಗಿ ಆರು ಶಿಲಾಲೇಖಗಳಿವೆ. ಇಲ್ಲಿ ಸಾರಸ್ವತರು ಕಟ್ಟಿಸಿದ ಇದರ ದೇವಾಲಯಗಳೂ ಇವೆ.

ಮೂಡ ಭಟ್ಕಳದಲ್ಲಿ ಕಡಿಮೆಯೆಂದರೆ ಹನ್ನೆರಡರಷ್ಟು ದೇವಾಲಯಗಳಿವೆ. ಸ್ಥಳೀಯ ಜನರ ಅಭಿಪ್ರಾಯದಂತೆ ಹತ್ತಿರದಲ್ಲೇ ಇರುವ ಜೋಶಿ ಶಂಕರನಾರಾಯಣ ದೇವಾಲಯವೂ ಇನ್ನೊಬ್ಬ ಸಾರಸ್ವತರು ಕಟ್ಟಿಸಿರುವುದಾಗಿದೆ. ಖೇತ ಪೈಯ ಭಾವ ಸಾಂತಪ್ಪ ನಾಯಕ್ ಎಂಬವರು ಕಟ್ಟಿಸಿದುದೆಂದು ಪ್ರತೀತವಾದ ಸಾಂತಪ್ಪನಾಯಕ ತಿರುಮಲ ದೇವಸ್ಥಾನವೂ ಇಲ್ಲಿದೆ. ಜೀವನ ನಾಯಕ ಎಂಬವರು ಕಟ್ಟಿಸಿದ ಅಡಿಕೆ ನಾರಾಯಣ ದೇವಾಲಯವೂ ಇದೆ. ಇವರು ಅಡಿಕೆ ವ್ಯಾಪಾರಿಗಳಿದ್ದಿರಬೇಕು ಮತ್ತು ಅವರು 1565ರಲ್ಲಿ ವಿರೂಪಾಕ್ಷ ನಾರಾಯಣ ದೇವಾಲಯವನ್ನು ಕಟ್ಟಿಸಿದರು. ನರಸ ಕಿಣಿ ಎಂಬವರು 1538ರಲ್ಲಿ ಕಟ್ಟಿಸಿದ ನರಸ ಕಿಣಿ ನರಸಿಂಹ ದೇವಸ್ಥಾನ, ಲಕ್ಕರಸ ಕಾಮತ್ ಎಂಬವರು ಕಟ್ಟಿಸಿದ ಲಕ್ಕರಸ ಕಾಮತಿ ಲಕ್ಷ್ಮೀನಾರಾಯಣ ದೇವಾಲಯ (1550) ಮತ್ತು ಬಾಳ ಕಿಣಿ ಕಟ್ಟಿಸಿದ ರಘುನಾಥ ದೇವಸ್ಥಾನ. (ಭಟ್ಕಳದ ಎಲ್ಲ ಶಿಲಾಲೇಖಗಳ ವಿವರ ಧಾರವಾಡದಿಂದ ಪ್ರಕಟಿತವಾದ 1965-66ರ ವಾರ್ಷಿಕ ವರದಿಯ (Annual Report of K.R.I) ಪುಟ 365-374ಗಳಲ್ಲಿವೆ) ಪರ್ತಗಾಳಿ ಮಠದ ದಾಖಲೆಗಳಲ್ಲಿ ಉಲ್ಲೇಖಿಸಲ್ಪಟ್ಟ ನರಸಕಿಣಿ ಇವರೇ ಇರಬೇಕು. ಆತ ಗೋವಾದ ಲೋಟರಿಯವರಿದ್ದು ಭಟ್ಕಳದ ಗೋಕರ್ಣ ಮಹಾಬಲೇಶ್ವರ ಮತ್ತು ಲಕ್ಷ್ಮೀನಾರಾಯಣ ದೇವಾಲಯಗಳಿಗೆ ದತ್ತಿಯನ್ನು ಕೊಟ್ಟುದಾಗಿ ತಿಳಿದು ಬರುತ್ತದೆ. ಈ ದೇವಾಲಯಗಳು ಶಿಲೆಯಿಂದ ನಿರ್ಮಿತವಾದವುಗಳಾಗಿವೆ. ಈಗಿನ ಕಾಲದಲ್ಲಿ ಕೇವಲ 1000ದಷ್ಟು ಜನಸಂಖ್ಯೆಯಿರುವಲ್ಲಿ ಹತ್ತು ಹನ್ನೆರಡು ದೇವಾಲಯಗಳಿರುವುದನ್ನು ಕಾಣುವಾಗ 1600ರ ಶತಕದಲ್ಲಿ ಅವುಗಳ ನಿರ್ಮಾಣ ಕಾಲದಲ್ಲಿ ಅದು ವಾಣಿಜ್ಯಿಕ ಪ್ರಾಮುಖ್ಯದ ಸಾರಸ್ವತರಿಂದ ತುಂಬಿದ್ದ ಪ್ರದೇಶವಾಗಿತ್ತೆಂಬುದು ಪ್ರತೀತವಾಗುತ್ತದೆ. ದೇವಾಲಯಗಳ ನಿರ್ಮಾಪಕರು ಈ ಪ್ರದೇಶದ ಪ್ರಗತಿಯುಕ್ತ ವಣಿಕ್ ಜನಗಳಾಗಿದ್ದರು. ಇಲ್ಲೇ ಕಾಶೀಮಠವಿದ್ದು 16ನೇ ಶತಮಾನದಲ್ಲಿ ಮುಕ್ತಿ ಹೊಂದಿದ ಶ್ರೀ ಮಠದ ಪ್ರಥಮ ಯತಿವರ್ಯ ಶ್ರೀ ಯಾದವೇಂದ್ರ ತೀರ್ಥರ ಸಮಾಧಿಯು ಇಲ್ಲಿದೆ. ಅಲ್ಲದೆ ಗೋಕರ್ಣ ಪರ್ತಗಾಳಿ ಮಠದ ಪ್ರಥಮ ಯತಿವರ್ಯರ ಒಡೆಯರ ಮಠವೂ ಇಲ್ಲಿದೆ. 16-17ನೇ ಶತಮಾನಗಳಲ್ಲಿ ಭಟ್ಕಳವು ಸಾರಸ್ವತರ ಎಷ್ಟೊಂದು ಪ್ರಮುಖ ಕೇಂದ್ರಸ್ಥಳವಾಗಿತ್ತೆಂಬುದು ಇದರಿಂದ ಅನುಭವಕ್ಕೆ ಬರುತ್ತದೆ. ವಿಜಯನಗರ ಸಾಮ್ರಾಜ್ಯದ ಪ್ರಮುಖ ಬಂದರು ನಗರವಾಗಿ ರಾಜಮಾರ್ಗ ಸಂಪರ್ಕವೂ ಇದ್ದು ಇದು 16ನೇ ಶತಮಾನದ ಸಮಯದಲ್ಲಿ ಸಂದರ್ಶನಗೈದ ಪೋರ್ಚುಗೀಸ ಯಾತ್ರಿ ಬರ್ಬೋಸಾ ಮತ್ತು ಪಾಯಸ್ ಇವರು ತಮ್ಮ ಪ್ರವಾಸ ಕಥನದಲ್ಲಿ ವರ್ಣಿಸಿದುದಾಗಿದೆ. ಪರದೇಶ ವ್ಯವಹಾರದಲಿ ಸಾರಸ್ವತರಿಗೆ ಸಿಂಹಪಾಲು ದೊರಕಿತ್ತು ಮತ್ತು ಅದು ನವಾಯತರ ದೊಡ್ಡ ಕೇಂದ್ರವೂ ಆಗಿತ್ತು. ಅನಂತರ ಇದರ ಆಧಿಪತ್ಯವು ಕೆಳದಿ (ನಗರ)ಗೆ ಸಂದಾಗ 1600ರ ತರುವಾಯ ಸಾರಸ್ವತರು ಪ್ರಬಲ ಸ್ಥಾನಗಳನ್ನು ಗಳಿಸಿಕೊಂಡರು. ಮೂಲ್ಕಿ (ಕಾರ್ನಾಡು) ಅಧಿಪತಿಗಳು ಸಾರಸ್ವತರನ್ನು ಆಮಂತ್ರಿಸಿ ಅವರ ಸಲುವಾಗಿ ಮೂಲ್ಕಿ ವೆಂಕಟರಮಣ ದೇವಸ್ಥಾನವನ್ನೂ ನಿರ್ಮಿಸಿದರು.

ವೆಂಕಟಾಪುರವು ಭಟ್ಕಳ ಸಮೀಪದ ಸಮುದ್ರ ತೀರದ ಸಣ್ಣದೊಂದು ಊರು (ಹೆಬಳೆ ಕಂದಾಯ ಗ್ರಾಮದಲ್ಲಿರುವಂತಹುದು). ಇಲ್ಲಿ ಗಣಪತಿ ಮಾಲ್ಲೆ (ಮಲ್ಯ) ಕಟ್ಟಿಸಿದ ಸುಂದರ ವೆಂಕಟರಮಣ ದೇವಾಲಯವಿದೆ. ಅವರು ಕೆಳದಿ ನಾಯಕರ ರಾಜ್ಯಭಾರದಲ್ಲೊಬ್ಬ ಅಧಿಕಾರಿಯಾಗಿದ್ದರು. 1600ರಲ್ಲಿ ಕೆಳದಿಯ ಎರಡನೇ ವೆಂಕಟಪ್ಪನಾಯಕ ಈ ದೇವಸ್ಥಾನಕ್ಕೆ ದತ್ತಿಯನ್ನಿತ್ತಿದ್ದ. ಪರ್ತಗಾಳಿ ಮಠದಲ್ಲಿ ಈ ದತ್ತಿಗೆ ಸಂಬಂಧಿಸಿದ ತಾಮ್ರ ಶಾಸನವೊಂದಿದ್ದು ದೇವಾಲಯವು ನಿರ್ಮಾಣವಾದ ಸ್ಥಳವು ಆ ಸಮಯದಲ್ಲಿ 'ದೋಣಿದೋರೆ' ಎಂದು ಕರೆಯಲ್ಪಡುತ್ತಿದ್ದು ಅದರ ಕಂದಾಯವಾದ 50 ಗದ್ಯಾಣ ಮತ್ತು ಎರಡು ಹಣಗಳನ್ನು ದೇವಸ್ಥಾನಕ್ಕೆ ದಾನವಾಗಿ ನೀಡಲಾಗಿದೆ. ದೇವಾಲಯದ ಗೋಡೆಗಳ ಮೇಲೆ ದಶಾವತಾರದ ಸುಂದರ ಚಿತ್ರಗಳಿವೆ. 1499ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ಸಾಮಂತರಾದ ಕೆಳದಿಯವರು 1600ರಿಂದ ಸ್ವತಂತ್ರರಾದ ಮೇಲೆ ಅವರಲ್ಲಿ ಸಾರಸ್ವತರಿಗೆ (ಕೆಳದಿ ಅಥವಾ ನಗರ ಸಂಸ್ಥಾನದ ರಾಜರ ಆಸ್ಥಾನದಲ್ಲಿ) ಉನ್ನತ ಸ್ಥಾನಗಳಿದ್ದುವು ಎಂಬುದು ಉಲ್ಲೇಖನೀಯ. ಅಕ್ಕಿಯ ರಫ್ತು ವ್ಯವಹಾರದಲ್ಲಿ ಮುಂಚೂಣಿಯಲ್ಲಿದ್ದ ಸಾರಸ್ವತರ ಸಹಕಾರವನ್ನು ಕೆಳದಿ (ನಗರ) ಅಧಿಪತಿಗಳು ನಡೆಯುತ್ತಿದ್ದರು. (ಅರಬ್ ರಾಷ್ಟ್ರ ಮಸ್ಕತ್‌ಗೆ ಅಧಿಕತರವಾಗಿ ನಿರ್ಯಾತವಾಗುತ್ತಿದ್ದ ಕಾರಣದಿಂದ ಮಸ್ಕತಿ ಎಂಬ ವಿಧದ ಅಕ್ಕಿಯು ಉತ್ತಮ ಮಟ್ಟದ್ದಿದ್ದು ಮಂಗಳೂರು ವಲಯದಲ್ಲಿ ಪ್ರಸಿದ್ಧವಿತ್ತು). ಕರಿಮೆಣಸು (ಕನ್ನಡ ಜಿಲ್ಲಾ ಪ್ರದೇಶದ ಕರಿಮೆಣಸು ಮಲಬಾರ್‌ನ ಕರಿಮೆಣಸಿಗಿಂತ ಶ್ರೇಷ್ಠವಾದುದಾಗಿತ್ತು) ಜವುಳಿ, ದಾಲಚೀನಿ, ಸಾಗುವಾನಿ, ಬೀಟೆ ಮತ್ತು ಚಂದನ ಮರಗಳು, ಕಾಡು ಉತ್ಪತ್ತಿಗಳು ಪಶ್ಚಿಮತೀರದಿಂದ ರಫ್ತಾಗುತ್ತಿದ್ದವು. ಆಯಾತ ವಸ್ತುಗಳೆಂದರೆ ಕುದುರೆಗಳು, ಪಾದರಸ, ವಿದೇಶೀ ಮದ್ಯ, ಹವಳ ಮತ್ತು ಪುತ್ಥಳಿ ಚಿನ್ನ. ವಿದೇಶಿ ವಾಣಿಜ್ಯದಲ್ಲಿ ಭಾರತ ಅನುಕೂಲಕರ ಸಮತೋಲ ಹೊಂದಿದ್ದು ಆಮದಿಗಿಂತ ರಫ್ತು ಹೆಚ್ಚಾಗಿತ್ತು. ಅಧಿಕಾಂಶ ವಾಣಿಜ್ಯ ವ್ಯವಹಾರವು ಸಾರಸ್ವತರ ಅಂಕಿತದಲ್ಲಿತ್ತು ಮತ್ತು ಮುಸ್ಲಿಂ ವ್ಯಾಪಾರಿಗಳು ಅವರ ಏಕಮೇವ ಸ್ಪರ್ಧಿಗಳಾಗಿದ್ದರು. 1645-1660ರ ಅವಧಿಯಲ್ಲಿ ಕೆಳದಿಯಲ್ಲಿ ರಾಜ್ಯಭಾರಗೈದ ಕೆಳದಿಯ ಪ್ರಖ್ಯಾತ ರಾಜ ಶಿವಪ್ಪ ನಾಯಕ ಭೂನ್ಯಾಯ ಪರಿಹಾರಗಳಿಗೆ 'ಸಿಸ್ತು' ಎಂಬ ತನ್ನ ಭೂಕಂದಾಯ ನಿರ್ಣಯದಿಂದ ಪ್ರಸಿದ್ಧನಾಗಿ ಕೆಳದಿ ನೃಪ ವಿಜಯಂ ಎಂಬ ಐತಿಹಾಸಿಕ ಮಾಹಿತಿಗೀಡುವ ಕೃತಿಯಲ್ಲಿ ಉಲ್ಲೇಖಿತವಾದಂತೆ ಅವನ ಹೊಸ ರಾಜಧಾನಿ ಬಿದನೂರಿಗೆ (ವೇಣುಪುರವೆಂದೂ ಹೆಸರಾಗಿತ್ತು) ಇತರ ವಾಣಿಜ್ಯಕಾರರ ಪೈಕಿ ಕೊಂಕಣಿ ಸಮುದಾಯದವರನ್ನು ಆಮಂತ್ರಿಸಿ ಅವರಿಗೆ ತಮ್ಮ ಭಂಡಸಾಲೆಗಳ ಸ್ಥಾಪನೆಗೆ ಸ್ಥಳಗಳನ್ನು ಕೊಟ್ಟಿದ್ದುದು ತಿಳಿದು ಬರುತ್ತದೆ. ಗುರುಪರಂಪರಾಮೃತಂ ಎಂಬ ಕೃತಿಯಲ್ಲಿ ಗೋಕರ್ಣ ಪರ್ತಗಾಳಿ ಮಠದ ಅಧಿಪತಿಗಳಾದ ನಾರಾಯಣ ತೀರ್ಥರನ್ನು 'ವಡೆಯರ್' ಎಂಬ ಬಿರುದನ್ನು ಕೆಳದಿಯ ರಾಜರೇ ಇತ್ತುದರ ವಿವರಗಳು ತಿಳಿಯುತ್ತವೆ. ಶಿವಮೊಗ್ಗ ತಾಲೂಕಿನಲ್ಲಿ ಸಿಕ್ಕಿದ ಒಂದು ತಾಮ್ರ ಶಾಸನದ ಪ್ರಕಾರ (1929-45) ವೀರಭದ್ರ ನಾಯಕ ಅರಸನ ಮಂತ್ರಿಯಾದ ರಾಮಕೃಷ್ಣ ಪ್ರಭು ಗುಣ,' ವಿದ್ವತ್ತೆಗಳಲ್ಲಿ ಬೃಹಸ್ಪತಿ, ಶುಕ್ರಾಚಾರ್ಯರಿಗೆ ಸಮಾನರಾಗಿದ್ದು ಅವರಿಗೆ ಭೂದಾನ ನೀಡಿದುವಾಗ ಉಲ್ಲೇಖಿತವಾಗಿದೆ. ಅವರಿಗೆ ತೀರ್ಥಹಳ್ಳಿ ತಾಲೂಕಿನಲ್ಲೂ ಭೂದಾನ ದೊರೆತುದು ಇದೆ. ಅವರ ತಂದೆ ಪುರುಷೋತ್ತಮ ಪ್ರಭು, ಅಜ್ಜ ರಾಮಕೃಷ್ಣ ಪ್ರಭು ಮತ್ತು ಮುತ್ತಜ್ಜ ನಾರಾಯಣ ಪ್ರಭು ಇವರೂ ಮಂತ್ರಿಗಳೆಂದು ನಾಮಾಂಕಿತರಾಗಿದ್ದು ಅವರು 16ನೇ ಶತಮಾನದಿಂದ ಕೆಳದಿ ಅರಸರ ಆಸ್ಥಾನದಲ್ಲಿ ಮಂತ್ರಿಗಳಾಗಿದ್ದರೆಂಬ ನಿರ್ಣಯಕ್ಕೆ ಬರಬಹುದಾಗಿದೆ.

ಅನೇಕ ಸಾರಸ್ವತರು ರಾಯಭಾರಿಗಳಾಗಿ, ಮಧ್ಯವರ್ತಿ ಸಂಧಾನಕಾರರಾಗಿ ಮತ್ತು ದ್ವಿಭಾಷಿಗಳಾಗಿ ನಿಯುಕ್ತರಾಗಿದ್ದರು. 1623ರಲ್ಲಿ ಇಟೆಲಿಯ ಪ್ರವಾಸಿ ಪೀತ್ರೋ ಡೆಲ್ಲವಲ್ಲೆ ಭಾರತಕ್ಕೆ ಬಂದಿದ್ದ. ಕೆಳದಿಯಿಂದ ಪೋರ್ಚುಗೀಸರಿಗೆ ವಿಟಲ ಸಿನಾಯ್ ಎಂಬಾತ ರಾಯಭಾರಿಯಾಗಿ ಹೋದ ವಿಚಾರವನ್ನಾತ ಹೇಳಿರುತ್ತಾನೆ. ಮಧ್ಯಸ್ಥಿಕೆಯಲ್ಲಿ ಆತನ ಚಾತುರ್ಯವನ್ನೂ ಬುದ್ಧಿವಂತಿಕೆಯನ್ನೂ ಮುಕ್ತಕಂಠದಿಂದ ಹೊಗಳಿ ವರ್ಣಿಸಿದ್ದಾನೆ. ರಾಜಾ ವೆಂಕಟಪ್ಪ ನಾಯಕನು ಆತನನ್ನು ನಿಯುಕ್ತಗೊಳಿಸಿದ್ದ. ತದನಂತರ 1633ರಲ್ಲಿ ವೆಂಕಟಪ್ಪನಾಯಕನು ರಾಮಪ್ಪಯ್ಯ (ರಾಮ ಪೈ) ಎಂಬವನನ್ನು ಪೋರ್ಚುಗೀಸರೊಡನೆ ಸಂಧಿ ಪ್ರಸ್ತಾವಕ್ಕೆ ಕಳುಹಿಸಿದ್ದ. 1649ರಲ್ಲಿ ಮಿರ್ಜಾನ ಬಂದರಿನಲ್ಲಿ ನಡೆದ ಕೆಲವು ವ್ಯವಹಾರಗಳಲ್ಲಿ ಕ್ಯಾಪ್ಟನ್ ಡುರ್ಸನ್ ಎಂಬ ಒಬ್ಬ ವ್ಯಾಪಾರಿಯು ಊನ ಮೌಲ್ಯದ ನಾಣ್ಯಗಳ ಚಲಾವಣೆಗೆ ಪ್ರಯತ್ನಿಸಿದುದರ ಇತ್ಯರ್ಥಕ್ಕಾಗಿ ದೇವರಾಯ ಶೆಣೈ (ದೇವರ್ಸ ಶೆಣೈ) ಎಂಬ ಅಧಿಕಾರಿಯನ್ನು ಕೆಳದಿಯ ರಾಜನ ಆಸ್ಥಾನವು ನಿಯೋಜಿಸಿತ್ತು. ವಿಲಿಯಂ ಫೊಸ್ಟರನ ದಾಖಲೆಗಳಲ್ಲಿ ಇದು ಉಲ್ಲೇಖಿತವಾಗಿದೆ (ಫ್ಯಾಕ್ಟರಿ ರೆಕಾರ್ಡ್ಸ್)

ಭದ್ರಪ್ಪ ನಾಯಕನು (1662-1664) ಅಕಾಲಿಕವಾಗಿ ಮೃತನಾದಾಗ ಮಲ್ಲಪ್ಪ ಮಾಲ್ಲೊ (ಮಲ್ಯ) ಎಂಬಾತ ಯುದ್ಧೋಪರಾಂತ ಕೆಳದಿ ಮತ್ತು ಪೋರ್ಚುಗೀಸರ ಪಾರಸ್ಪರಿಕ ಸಂಬಂಧಗಳ ವಿಷಯದಲ್ಲಿ ನಿರ್ಣಾಯಕ ಸಂವಾದದಲ್ಲಿ ನಿರತರಾಗಿದ್ದರು. ನಾರಣ ಮಾಲ್ಲೊ (ಮಲ್ಯ) ಎಂಬ ಇನ್ನೋರ್ವ ಅಧಿಕಾರಿಯು ರಾಜಕುಮಾರ ಸೋಮಶೇಖರನಿಗೆ, ರಾಜಭವನವಿಡೀ ಷಡ್ಯಂತ್ರನಿರತ ವಂಚಕರಿಂದ ತುಂಬಿದ್ದ ವಿಷಮ ಸ್ಥಿತಿಯಲ್ಲಿ ಅತಿಯಾದ ಕೌಶಲದಿಂದ ನಿಯಂತ್ರಣಗೈದು ಪಟ್ಟಾಭಿಷೇಕ ನೆರವೇರಿಸಿ ರಾಜ್ಯಭಾರವನ್ನು ಸುಸೂತ್ರಗೊಳಿಸಿದ್ದ. ರಾಜಕುಮಾರನು ಪ್ರಾಪ್ತ ವಯಸ್ಕನಾಗುವವರೆಗೆ ಆತ ರಾಜ ಪ್ರತಿನಿಧಿಯಾಗಿದ್ದ.

1671ರಲ್ಲಿ ಪೋರ್ಚುಗೀಸರ ಮತ್ತು ಕೆಳದಿ ನಾಯಕರ ನಡುವೆ ನಡೆದ ಒಂದು ಪ್ರಮುಖ ವಾಣಿಜ್ಯ ಒಪ್ಪಂದದಲ್ಲಿ ಕೆಳದಿ ಅರಸರ ಕಡೆಯವರಾಗಿ ವಿಟ್ಠಲ ಮಲ್ಲ (ಮಲ್ಯ) ಮತ್ತು ಗೋಪಣ ಶೆಣೈ ಇವರು ಹಸ್ತಾಕ್ಷರ ಮಾಡಿದ್ದರು. ರಾಜಕೀಯ ಮಹತ್ವದ ಸಂವಾದಕ್ಕೆ ಬಸವ ನಾಯಕನು 1704ರಲ್ಲಿ ಗೋವೆಗೆ ಕಳುಹಿಸಿದ ರಾಯಭಾರಿ ಮಂಡಳಿಯು ಪೋರ್ಚುಗೀಸ ದಾಖಲೆಗಳ ಪ್ರಕಾರ ಅತಿ ಚತುರಮತಿ ದಾಮರ್ಸ ಪ್ರಭುವಿನ ಮುಖಂಡತ್ವವಿತ್ತು. 1707ರಲ್ಲಿ ಪೋರ್ಚುಗೀಸರು ಮಂಗಳೂರನ್ನು ವಶಪಡಿಸಿಕೊಳ್ಳಲು ಮಾಡಿದ ಆಕ್ರಮಣವನ್ನು ಕೆಳದಿಯ ಅರಸರು ಉಗ್ರಪ್ರತಿರೋಧದಿಂದ ವಿಫಲಗೊಳಿಸಿ ಮಂಗಳೂರನ್ನು ತಮ್ಮ ವಶವಿರಿಸಿಕೊಂಡರು ಮತ್ತು ರಾಜನೈತಿಕ ಸಂಧಾನಗಳಿಗೆ ಪೋರ್ಚುಗೀಸರೊಂದಿಗೆ ಅದೇ ದಾಮರ್ಸ ಪ್ರಭುವನ್ನು ಕಳುಹಿಸಿದ್ದರು. 1734ರಲ್ಲಿ ದ್ವಿತೀಯ ಸೋಮಶೇಖರನು ನಾರ್ಣಪ್ರಭು ಎಂಬವರನ್ನು ರಾಯಭಾರಿಯಾಗಿ ಗೋವೆಗೆ ಕಳುಹಿಸಿದ್ದನು. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯು ಕಳುಹಿಸಿದ ಒಂದು ಗುಪ್ತ ವರದಿಯಲ್ಲಿ ನಾಲ್ವರು ಗಮನೀಯ ರಾಜನೀತಿಜ್ಞರು ಕೆಳದಿ ರಾಜರ ಆಸ್ಥಾನದಲ್ಲಿರುವರೆಂದು ತಿಳಿಸಿ ಅವರಲ್ಲಿ ಹೊನ್ನಾವರದ ಗವರ್ನರ್ ವೆಂಕಟ ಮಾಲೊ (ಮಲ್ಯ) ಹರ ಕಾಮತಿ (ಒಬ್ಬ ವಣಿಕ) ಮತ್ತು ಸೀಮಾ ಶುಲ್ಕಾಧಿಕಾರಿ (ಕಸ್ಟಮ್ಸ್) ಸುಬ್ಬು ಶೆಣೈ ಇವರ ಹೆಸರುಗಳನ್ನು ಸೂಚಿಸಲಾಗಿದೆ. (ಸಾರಸ್ವತರ ಉನ್ನತ ಪದವಿ, ಉಚ್ಚಾಧಿಕಾರಿಗಳ ವಿಷಯದ ಪ್ರಕರಣಗಳು ಹಾಗೂ ವಿವರಗಳು

ಖಾನಾಪುರ, ಚಾಂದಗಡ ಮತ್ತು ಬೆಳಗಾವಿ ಪ್ರದೇಶದಲ್ಲೂ ಇಂತಹ ಸ್ಥಾನಗಳಲ್ಲಿ ಅನೇಕ ಸಾರಸ್ವತರಿದ್ದರು. ವಿಜಯನಗರ ಸಾಮ್ರಾಜ್ಯದ ಪ್ರತಿಸ್ಪರ್ಧಿಗಳಾಗಿದ್ದ ಕಾರಣದಿಂದ ಬಿಜಾಪುರದ ರಾಜರು ಮರಾಠಿ ಜನರನ್ನು ತಮ್ಮ ರಾಜ್ಯಭಾರದಲ್ಲಿ ಹಾಗೂ ನ್ಯಾಯಾಸ್ಥಾನಗಳಲ್ಲಿ ಮುಖ್ಯ ಪದವಿಗಳಲ್ಲಿ ನಿಯುಕ್ತರನ್ನಾಗಿ ಮಾಡಿದರು. ಏಕೆಂದರೆ ಕನ್ನಡಿಗರು ವಿಜಯನಗರ ಪಕ್ಷಪಾತಿಗಳಾಗಿದ್ದರು. ತಮ್ಮ ರಾಜ್ಯಾಡಳಿತ ಸೇವೆಗಳಲ್ಲಿ ನಿಯುಕ್ತಿಗೊಳಿಸಲು ಸಾಕಷ್ಟು ಸಂಖ್ಯೆಯ ಮುಸ್ಲಿಂ ವಿದ್ಯಾವಂತರ ಅಭಾವ ಕಾರಣದಿಂದ ಹಾಗೂ ಪರ್ಶಿಯಾ ಮತ್ತು ಮಧ್ಯಪ್ರಾಚ್ಯದವರನ್ನು ತಂದು ಅವರನ್ನು ಸೇವೆಯಲ್ಲಿ ತೊಡಗಿಸುವುದರಿಂದ ಮಾಡಿದ ದಖ್ಖನೀ-ಪರದೇಶಿಗಳ ನಡುವಿನ ತೀವ್ರ ಸ್ಪರ್ಧೆಯ ಕಾರಣದಿಂದ ಗಂಡಾಂತರಕಾರಿಯಾಗಿತ್ತು ಮತ್ತು ವ್ಯವಹಾರ್ಯವೂ ಆಗಿರಲಿಲ್ಲ. ಈ ಮೊದಲೇ ಹೇಳಿದಂತೆ ದೇಸಾಯಿಗಳಡಿಯಲ್ಲಿ ಸೇವೆ ಅಲ್ಲದೆ ಮರಾಠಿಗಳೆಂದು ತಪ್ಪಾಗಿ ತಿಳಿದುಕೊಳ್ಳಲ್ಪಟ್ಟ ಸಾರಸ್ವತರು ಬಿಜಾಪುರ ರಾಜರಲ್ಲಿ ಅಧಿಕಾರ ಪದವಿಗಳನ್ನು ಗಳಿಸಿಕೊಂಡರು. 'ಚತುರ' ಎಂಬ ಉಪಾಧಿಯನ್ನು ಗಳಿಸಿದ ಸಾಬಾಜಿ ಅನಂತ್ ಎಂಬ ಸಾರಸ್ವತರೊಬ್ಬರು ಅಂಥವರಲ್ಲೊಬ್ಬರಾಗಿ ಬಿಜಾಪುರ ಅರಸರ ಸೇವೆಯಲ್ಲಿದ್ದರು. ಅನಂತರ ಅವರು ಅಹಮದ್‌ನಗರದ ನಿಜಾಮಶಾಹಿಯವರ ಸೇವೆಯಲ್ಲಿ ನಿಯುಕ್ತರಾಗಿ ದೌಲತಾಬಾದ್ ಪರಗಾಣಾದ ಕಾರ್ಯಭಾರಿಯಾಗಿ ನೇಮಕ ಹೊಂದಿದರು. ಸಾರಸ್ವತರನ್ನು ಅಧಿಕಾರಿಗಳನ್ನಾಗಿ ಮರಾಠರೂ ಸೇವೆಗಳಲ್ಲಿ ತೊಡಗಿಸಿಕೊಂಡರು. ಸಾವಂತವಾಡಿ ಆಸ್ಥಾನಕ್ಕೆ ಪೀತಾಂಬರ ಶೆಣ್ವಿ ಎಂಬವರನ್ನು ಶಿವಾಜಿ ಮಹಾರಾಜರೇ ರಾಯಭಾರಿಯನ್ನಾಗಿ ಕಳುಹಿಸಿದ್ದರು. ಛತ್ರಪತಿ ಶಾಹುವಿನ ಅಧೀನವಾಗಿ ಪಾಖನವೀಸ್ (ಪುರಾಲೇಖಕಾರ ಮತ್ತು ದಾಖಿಲಾತಿಕಾರ) ಆಗಿ ನರೋರಾಮ್ ಮಂತ್ರಿ ಎಂಬವರಿದ್ದರು. ಒಂದನೇ ಪೇಶ್ವೆ ಬಾಜೀರಾವ್‌ರ ಕೈಕೆಳಗೆ ರಾಮಚಂದ್ರ ಬಾಬಾ (ಮಲ್ಹಾರ ಸುಖ್ತಂಕರ್) ಎಂಬ ಅಧಿಕಾರಿ ಇದ್ದು ಅನಂತರ ಈತ ಉಜ್ಜೈನಿಯ ರಾಣೋಜಿ ಸಿಂಧ್ಯಾನ ದಿವಾನರ ಅಧಿಕಾರದಲ್ಲಿ ಉಳಿದು ಉಜ್ಜೈನಿಯ ಶ್ರೀ ಮಹಾಕಾಳ ದೇವಸ್ಥಾನವನ್ನು ನವೀಕರಿಸಿದನು. ಪೇಶ್ವೆಯವರ ಪ್ರಖ್ಯಾತ ಸೇನಾನಿ ಸದಾಶಿವ ಭಾವೂವಿನಿಂದ ಆಮಂತ್ರಿತನಾಗಿ 1754ರ ಪರ್ಯಂತ ಪೇಶ್ವಾ ಆಸ್ಥಾನದಲ್ಲಿ ಆರ್ಥಿಕ ಮತ್ತು ರಾಜತಾಂತ್ರಿಕ ವ್ಯವಹಾರ ನಿರ್ವಹಿಸುವ ಮುಖ್ಯಾಧಿಕಾರಿಯಾದನು.

1686ರಲ್ಲಿ ಬಿಜಾಪುರ ಪತನಾನಂತರ ಮರಾಠಾಶಕ್ತಿಯ ಉತ್ಥಾನವಾಗಿ ಅನೇಕ ಸಾರಸ್ವತರು ಸತಾರಾ ಹಾಗೂ ಪೂನಾ ಕಡೆಗೆ ಆಕರ್ಷಿತರಾದರು. ಆದರೆ ಪೇಶ್ವೆಗಳು ಚಿತ್ಪಾವನರಿದ್ದುದರಿಂದ ಚಿತ್ಪಾವನರಿಗೆ ಪೇಶ್ವೆಯವರ ಆಸ್ಥಾನದ ಹುದ್ದೆಗಳ ಸಿಂಹಪಾಲು ದೊರೆತು ಸಾರಸ್ವತರು ನೇಮಕ ಹಾಗೂ ಪದೋನ್ನತಿಗಳಲ್ಲಿ ಭೇದಭಾವಕ್ಕೊಳಗಾಗಬೇಕಾಗುತ್ತಿತ್ತು. ಆದುದರಿಂದ ರಾಮಚಂದ್ರ ಬಾಬಾನ ಉದಾಹರಣೆಯನ್ನನುಸರಿಸಿ ಅನೇಕ ಸಾರಸ್ವತರು ಗ್ವಾಲಿಯರ್‌ನ ಸಿಂಧ್ಯಾನ ಆಸ್ಥಾನಕ್ಕೆ ಹೋಗಿ ಅಲ್ಲಿ ಮುಖ್ಯ ಸ್ಥಾನಗಳನ್ನು ಗಳಿಸಿಕೊಂಡರು. ಅಂಥವರಲ್ಲಿ ಬಕ್ಷಿಯಾಗಿ ನಿಯಮಿತನಾದ ಜೀವ್‌ಬಾ ದಾದಾ ಕೇತ್ಕರ್, ಲಖ್‌ಬಾದಾದಾ ಲಾಡ್, ಲಾಲಾಜಿ ಗುಲಗುಲೆ (ಕೋಟ್ಯಾದಿಂದ ನಜರು ಕಾಣಿಕೆಯನ್ನು ವಸೂಲು ಮಾಡುತ್ತಿದ್ದವ) ಇತ್ಯಾದಿಯವರಿದ್ದಾರೆ. ಜೀವ್‌ಬಾ ದಾದಾ ಕೇತ್ಕರ್ ಗೋವಾದ ಕೇರಿ (ಕ್ವೇರಿಮ್)ಯವನಾಗಿದ್ದ ಮತ್ತು ಆತ ಸಿಂಧ್ಯಾನ ಸೈನ್ಯದಲ್ಲಿದ್ದು ಪಾಣಿಪತ್‌ನಲ್ಲಿ (1761) ನಡೆದ ಯುದ್ಧದಲ್ಲಿ ಭಾಗವಹಿಸಿದ್ದ. ಆತ ಈ ವಿಧ್ವಂಸಕ ಯುದ್ಧದಲ್ಲಿ

ಬದುಕುಳಿದ. ಯುದ್ಧಾನಂತರ ಗ್ವಾಲಿಯರ್ ಸಂಸ್ಥಾನದಲ್ಲಾದ ದುರ್ಭರ ಪರಿಸ್ಥಿತಿಯನ್ನು ನಿಭಾಯಿಸಿ ಶಾಂತಿಯನ್ನು ಪುನಃ ಪ್ರತಿಷ್ಠಾಪಿಸುವಲ್ಲಿ ಆತ ವಹಿಸಿದ ಪಾತ್ರವು ಬಹಳ ಮಹತ್ವದ್ದಿದೆ. ಬಾಳೋಬಾ ತಾತ್ಯಾ ಮತ್ತು ಸದಾಶಿವ ಮಲ್ಹಾರ್ ಎಂಬವರು ಗ್ವಾಲಿಯರ್‌ನ ರಾಜ್ಯಭಾರದಲ್ಲಿ ತುಂಬ ಸಹಾಯ ಮಾಡಿದರು. 18ನೇ ಶತಮಾನದ ಉತ್ತರಾರ್ಧದಲ್ಲಿ ಜೀವ್‌ಬಾ ನಿರ್ವಹಿಸಿದ ಕಾರ್ಯಭಾರವು ಭಾರತದ ಇತಿಹಾಸದಲ್ಲಿ ಮಹತ್ವದ್ದಾಗಿದೆ. ಅನೇಕ ಸನ್ನಿವೇಶಗಳಲ್ಲಿ ಆತ ಬ್ರಿಟಿಷರನ್ನು ಪರಾಭವಗೊಳಿಸಿದ. 1795 ರಲ್ಲಿ ಮರಾಠಾ ಸೈನ್ಯದ ನೇತೃತ್ವ ವಹಿಸಿ ಆತ ನಿಜಾಮನನ್ನು ಸೋಲಿಸಿದ.

ಹೈದರ್ ಅಲಿಯ ಆಸ್ಥಾನದಲ್ಲಿ ಅಪ್ಪಾಜಿರಾಮ ಎಂಬ ಅಧಿಕಾರಿ ಇದ್ದ. ಮತ್ತು ಕರ್ನಾಟಕದ ಹೊಸ ವಾಣಿಜ್ಯಿಕ ನಗರ ದಾವಣಗೆರೆಯ ನಿರ್ಮಾತೃವಾಗಿದ್ದ. ಹೈದರ್ ಅಲಿಯು ಆ ಸ್ಥಳವನ್ನು ಜಹಗೀರಾಗಿ ಆತನಿಗೆ ಕೊಟ್ಟಿದ್ದ. ಈ ಗೃಹಸ್ಥನು ಅಂಕೋಲೆಯವನಾಗಿದ್ದು ವಾಗ್ಳೆನಾಡಕರ್ಣಿ ಎಂಬ ಉಪನಾಮಗಳಿದ್ದವನಾಗಿದ್ದ. ಹೈದರ್‌ಅಲಿಯು ಆತನನ್ನು ಅನೇಕ ವಿಷಯಗಳಲ್ಲಿ ನಿರ್ಣಾಯಕ ನಿರ್ಧಾರಗಳನ್ನು ಕೈಗೊಳ್ಳುವಲ್ಲಿ ಸಹಾಯಕ್ಕಾಗಿ ನಿಯಮಿಸಿದ್ದ ಮತ್ತು ಪೇಶ್ವೆ ಮಾಧವ ರಾಯನ ಆಸ್ಥಾನಕ್ಕೂ ಕಳುಹಿಸಿದ್ದ. ಟಿಪ್ಪುವು 1784ರಲ್ಲಿ ಈತನನ್ನು ಮಂಗಳೂರು ಸಂಧಿಯ ಮೊದಲು ಬ್ರಿಟಿಷರಲ್ಲಿಗೆ ವಿಚಾರ ವಿನಿಮಯಕ್ಕಾಗಿ ಮುಂಬೈಗೆ ಕಳುಹಿಸಿದ್ದ. ಮುಂಬೈಯಲ್ಲಿ ಇಂಗ್ಲಿಷರ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ ರಾಮ ಕಾಮತಿ ಎಂಬಾತ ಉನ್ನತ ಅಧಿಕಾರಿಯಾಗಿದ್ದರು. ಕಂಪೆನಿಯ ಸರ್ವೋಚ್ಚ ಪರ್ಯವೇಕ್ಷಕ ಅಧಿಕಾರಿಯಾಗಿ ಅವರಿದ್ದರು. 18ನೇ ಶತಮಾನದಲ್ಲಿ ಟಂಕಶಾಲಾ ಅಧಿಕಾರಿಯಾಗಿದ್ದು ಮುಂಬೈ ವಾಣಿಜ್ಯ ಕೇಂದ್ರವಾಗಿ ರೂಪಾಂತರವಾಗುವ ಸಂಧಿಕಾಲದಲ್ಲಿ ಮುಂಬೈಯಲ್ಲಿಗಣನೀಯ ಉಚ್ಚಸ್ಥಾನದಲ್ಲಿದ್ದರು.

1801 ಇಸವಿಯಲ್ಲಿ ಫ್ರಾನ್ಸಿಸ್ ಬುಕಾನನ್ ಎಂಬಾತ ಹೇಳುತ್ತಾನೆ. 'ಮಂಜೇಶ್ವರ ಸಾರಸ್ವತರು ಬಹು ಪ್ರಗತಿಶೀಲರಿದ್ದಾರೆ. ನಾನಿಂದು ಅವರ ಮದುವೆಯ ದಿಬ್ಬಣ ಹೋಗುವುದನ್ನು ಕಂಡೆ. ಬಹುಸಂಖ್ಯೆಯ ಜನರಿದ್ದ ಆ ದಿಬ್ಬಣದಲ್ಲಿ ಸುಂದರ ಯುವತಿಯರಿದ್ದು ಅವರು ಉತ್ತಮ ವಸ್ತ್ರ ಭೂಷಣಗಳಿಂದ ಅಲಂಕೃತರಾದವರಿದ್ದರು'. ಜೆ. ಸ್ಟರಾಕ್ ಎಂಬಾತ ತನ್ನ 1894ರ ಸೌತ್ ಕೆನರಾ ಡಿಸ್ಟ್ರಿಕ್ಟ್ ಮ್ಯಾನ್ಯುವಲ್‌ನಲ್ಲಿ ''ಬಹುಸಂಖ್ಯೆಯ ಕೊಂಕಣಸ್ಥರು ವ್ಯಾಪಾರಿಗಳಾಗಿದ್ದು ಜಿಲ್ಲಾದ್ಯಂತ ಪ್ರತಿಯೊಂದು ಕಡೆಯ ಮಾರುಕಟ್ಟೆಯಲ್ಲೂ ಅವರಿದ್ದಾರೆ ಮತ್ತವರು ಶ್ರೀಮಂತ ಭೂಮಾಲಕರಿದ್ದಾರೆ''. ಎಂದಿದ್ದಾನೆ. ಮುಂದರಿದು ಆತ 'ಅವರಲ್ಲನೇಕರು ಸರಕಾರದ ಪದವಿ ಗಳಲ್ಲಿಯೂ ಇದ್ದು ಇತ್ತೀಚೆ ಅವರು ಆ ಕಡೆ ಹೆಚ್ಚು ಗಮನ ಹರಿಸಿದ್ದಾರೆ'' ಎಂದು ಬರೆದಿದ್ದಾನೆ. ಅದೇ ಲೇಖಕ ಹೇಳುವಂತೆ - 'ಚಿತ್ರಾಪುರ ಸಾರಸ್ವತರು ಭಾರಿ ಪ್ರಗತಿ ಹೊಂದಿದವರಾಗಿದ್ದು ಬುದ್ಧಿವಂತರಾಗಿ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ತಮ್ಮ ವಿಶಿಷ್ಟ ಗುಣಗಳಿಂದ ಸರಕಾರಿ ಉದ್ಯೋಗ ಹಾಗೂ ಸೇವೆಗಳಲ್ಲಿ ತಮ್ಮ ಜನಸಂಖ್ಯಾ ಪ್ರಮಾಣಕ್ಕೆ ಮಿಗಿಲಾಗಿ ಇರುವವರು'' ದಕ್ಷಿಣ ಭಾರತದ ಸಾರಸ್ವತರು, ಅವರು ಸರಕಾರಿ ಅಧಿಕಾರಿಗಳಿರಲಿ, ವಿದ್ವಾಂಸರಿರಲಿ ಅಥವಾ ಉದ್ಯಮಿ, ಕೃಷಿಕ್ಷೇತ್ರ ಮಾಲಿಕ, ಸಾಹಿತಿ, ಕಲಾಕಾರ, ಕ್ರೀಡಾಳುವಾಗಿರಲಿ ಎಲ್ಲೇ ಇದ್ದರೂ ಅವರು ಸಮಾಜಕ್ಕೆ ತಮ್ಮ ಶ್ರೀಮಂತ ಕೊಡುಗೆಯನ್ನಿತ್ತಿದ್ದಾರೆ. ಸಾಮಾಜಿಕ ಅಥವಾ ತಾಂತ್ರಿಕ ವಿಷಯಗಳಲ್ಲಿ ಅವರು

ನವೀನ ವಿಚಾರಗಳನ್ನು ಸ್ವೀಕರಿಸುವಲ್ಲಿ ಸದಾ ಉತ್ಸುಕರಾಗಿರುತ್ತಿದ್ದರು. ಕೊಂಕಣಿಯು ಮನೆಮಾತಾಗಿದ್ದರೂ ತಮಗೆ ಆಶ್ರಯ ದೊರೆತ ರಾಜ್ಯದ ಭಾಷೆಗಳಿಗೆ ಉತ್ತಮ ಕೊಡುಗೆಯನ್ನಿತ್ತಿರುವರು. ಕೇರಳದಲ್ಲಿ ಶೇಷಗಿರಿ ಪ್ರಭು ಮಲೆಯಾಳಿಗೆ ಹೊಸ ವ್ಯಾಕರಣವನ್ನು ಬರೆದಿದ್ದಾರೆ ಹಾಗೂ 'ಸಾಹಿತ್ಯ ಕುಶಲ' ಎಂಬ ಬಿರುದನ್ನೂ ಸಂಪಾದಿಸಿದ್ದಾರೆ. ಹರಿಶರ್ಮ ಮತ್ತು ತುರವೂರ್ ಮಾಧವ ಪೈ ಇತರ ಖ್ಯಾತ ಮಲೆಯಾಳಿ ಲೇಖಕರಿದ್ದಾರೆ. ಕನ್ನಡ ಸಾಹಿತ್ಯಲೋಕದಲ್ಲಿ ಗೋವಿಂದ ಪೈ, ಪಂಜೆ ಮಂಗೇಶರಾವ್, ಎಂ. ಎನ್. ಕಾಮತ್, ಯಶವಂತ ಚಿತ್ತಾಲ, ದಿನಕರ್ ದೇಸಾಯಿ, ಗಿರೀಶ್ ಕಾರ್ನಾಡ್ ಗಮನಾರ್ಹ ಹೆಸರುಗಳಾಗಿವೆ. ಕೊಂಕಣಿ ಭಾಷಾ ಸಾಹಿತ್ಯಕ್ಕೂ ಅವರ ದೇಣಿಗೆಯು ಅನನ್ಯವಿದ್ದು ಗೋವಾದಲ್ಲಿ ವಿಶೇಷತಃ ಇದು ಗಣನೀಯ ಪ್ರಖ್ಯಾತವಾದ ಅಂಥವರ ಹೆಸರುಗಳನ್ನು ಪುನಃ ಹೇಳಬೇಕಾದುದು ಅವಶ್ಯವಲ್ಲ. ಅವರಲ್ಲಿ ಅನೇಕ ಖ್ಯಾತನಾಮ ಮರಾಠಿ ಸಾಹಿತಿಗಳೂ ಇದ್ದಾರೆ.

ರಾಷ್ಟ್ರೀಕೃತ 20 ಬ್ಯಾಂಕುಗಳಲ್ಲಿ ಮೂರು ಬ್ಯಾಂಕುಗಳು ಸಾರಸ್ವತರು ಕಟ್ಟಿ ಬೆಳೆಸಿಕೊಂಡು ಬಂದವುಗಳು. ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮತ್ತು ಕಾರ್ಪೊರೇಶನ್ ಬ್ಯಾಂಕ್ ಇವೇ ಆ ಮೂರು ಬ್ಯಾಂಕ್‌ಗಳು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾರ್ನಾಡ್ ಸದಾಶಿವರಾವ್, ಹಿರಿಯಡ್ಕ ರಾಮರಾಯ ಮಲ್ಯ, ಪಾಂಗಾಳ ನಾಯಕ್ ಕುಟುಂಬ, ಸಿದ್ದಾಪುರದ ತಿಮ್ಮಪ್ಪ ನಾಯಕ್, ಶಿರಸಿಯ ವಾಮನ ಹೊದ್ಕೆ, ಶಂಕರ ಗುಲ್ವಾಡಿ, ಶ್ರೀರಂಗ ಕಾಮತ್, ಕಾಕಾ ಕಾಲೇಲ್ಕರ್ ಹೆಸರುಗಳು ಉಲ್ಲೇಖಾರ್ಹವಾಗಿವೆ. 1932ರ ಕರನಿರಾಕರಣ ಚಳವಳಿಯಲ್ಲಿ ಮಡಗಾಂವ್‌ಕರ್ ಕುಟುಂಬದ ಇಬ್ಬರು ಸ್ತ್ರೀಯರ ಸಹಿತ 12 ಮಂದಿ ಕಾರಾಗೃಹವಾಸಿಗಳಾದರು. ಕರ್ನಾಟಕದಲ್ಲಿ ವಿಶೇಷವಾಗಿ ಪ್ರಸಿದ್ಧರಾದವರ ಹೆಸರುಗಳನ್ನು ನಾನು ಹೇಳಿರುತ್ತೇನೆ. ಕೇರಳ, ಮಹಾರಾಷ್ಟ್ರ, ಗೋವಾ ರಾಜ್ಯಗಳಲ್ಲೂ ಅಂಥ ಅನೇಕ ಮಹತ್ವದ ಹೆಸರುಗಳನ್ನು ಉದಾಹರಿಸಬಹುದು. ಮಂಜೇಶ್ವರ ಗೋವಿಂದ ಪೈ, ಮಹೇಶ್ವರ ಭಟ್ ಸುಕ್ತಾಂಕರ್, ಧರ್ಮಾನಂದ ಕೋಸಾಂಬಿ, ಕಾಕಾ ಕಾಲೇಲ್ಕರ್, ಆರ್. ಜಿ. ಭಂಡಾರ್ಕರ್ ಇವರು ಪ್ರಮುಖ ಸಾರಸ್ವತ ವಿದ್ವಾಂಸರಾಗಿ ಹೆಸರಿಸಬಹುದಾದವರು. ಮುಂಬೈಯ ಭಾವುದಾಜಿ ಮತ್ತು ಸಾಲೆತೋರ್ ಸಹೋದರರು ಪ್ರಖ್ಯಾತ ಇತಿಹಾಸಕಾರರಿದ್ದಾರೆ. ಬಿಡಾರಂ ಕೃಷ್ಣಪ್ಪ ಕರ್ನಾಟಕ ಸಂಗೀತದಲ್ಲಿ ಮೈಸೂರು ಆಸ್ಥಾನದ ಗಾಯಕರಾಗಿದ್ದರು. ಕುದ್ಮುಲ್ ರಂಗರಾವ್, ಆರ್.ಜಿ. ಭಂಡಾರ್‌ಕರ್, ನಾರಾಯಣ ಚಂದಾವರ್ಕರ್ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಸಾಮಾಜಿಕ ಸುಧಾರಣೆಯ ಕ್ಷೇತ್ರದ ಮುಂಚೂಣಿಯಲ್ಲಿದ್ದವರು. ವಿ.ಎಸ್. ಕುಡ್ವಾ, ಮೊಳಹಳ್ಳಿ ಶಿವರಾವ್, ಶಿರಸಿಯ ಕೇಶವಾಯ್ನ್, ಡಾ। ಟಿ.ಎಂ.ಎ. ಪೈ, ಟಿ.ಎ. ಪೈ., ದಿನಕರ ದೇಸಾಯಿ, ವಿ.ಎಂ. ಸೋಂದೆ, ವಿಟ್ಠಲ ಮಲ್ಯ, ಶಿರೂರು ಸಹೋದರರು ಇವರೆಲ್ಲ ಸಮಾಜದ ಪ್ರಗತಿಗಾಗಿ ಶಿಕ್ಷಣ, ಸಹಕಾರಿ ಕ್ಷೇತ್ರವೇ ಮೊದಲಾಗಿ ಅನೇಕ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿ ಆಧುನಿಕ ಚರಿತ್ರೆಯಲ್ಲಿ ಉಲ್ಲೇಖಿತವಾಗಲು ಅರ್ಹವಾದ ಹೆಸರುಗಳು. ಗೋವಾದ ಡೆಂಪೊ, ತಿಂಬ್ಲೊ ಮತ್ತು ಸಾಲ್ಗಾಂವ್‌ಕರ್ ಜ್ಞಾಪಿಸಿಕೊಳ್ಳಬೇಕಾದ ಹೆಸರುಗಳಾಗಿವೆ.

15ನೇ ಶತಮಾನದಲ್ಲಿ ನಾರಾಯಣ ತೀರ್ಥರೆಂಬ ಉಡುಪಿಯ ಯತಿಗಳೊರ್ವರು ಗೋವೆಗೆ ಹೋಗಿ ವಿಸ್ತಾರವಾಗಿ ವೈಷ್ಣವ ತತ್ತ್ವಪ್ರಚಾರ ಮಾಡಿದುದರಿಂದ ಸಾಷಷ್ಟಿ ಪ್ರದೇಶದ ಸಾರಸ್ವತರು

ವೈಷ್ಣವರಾದರು ಮತ್ತು ಅವರಿಗಾಗಿ ಗೋಕರ್ಣ ಪರ್ತಗಾಳಿ ಮಠದ ಸ್ಥಾಪನೆಯಾಯಿತು ಎಂದು ಭಾರತೀಯ ಸಂಸ್ಕೃತಿಕೋಶ (ಮರಾಠಿ ಸಂ. ix) ಹೇಳುತ್ತದೆ. ಸ್ಮಾರ್ತರು ಮತ್ತು ವೈಷ್ಣವರು (ಮಾಧ್ವರು) ಪರಸ್ಪರರಲ್ಲಿ ವಿವಾಹ ಮಾಡಿಕೊಳ್ಳುವುದನ್ನು, ಊಟ ಮಾಡುವುದನ್ನೂ ಈ ಕಾರಣದಿಂದ ವರ್ಜಿಸಿದರು. ಗೋವೆಯ ವೈಷ್ಣವರು ಬಹುತೇಕವಾಗಿ ಕೃಷಿ ಮತ್ತು ವಾಣಿಜ್ಯವನ್ನು ತಮ್ಮ ಜೀವನ ಉಪಾಯವನ್ನಾಗಿ ಮಾಡಿಕೊಂಡರು. ಬಾರ್ದೇಶದ ಕೆಲವು ವೈಷ್ಣವರು ಕೃಷಿಯನ್ನು ಉಪಜೀವನೋಪಾಯವಾಗಿಸಲು ಭಟ್ ಗ್ರಾಮಕ್ಕೆ ಹೋದರು. ಅವರು ಹೀಗೆ ಊರು ಬಿಟ್ಟು ತೆರಳುವಾಗ ನದಿ ದಾಟುವ ಸಮಯದಲ್ಲಿ, ತಿನ್ನಲಿಕ್ಕಾಗಿ ಬೇಯಿಸಿದ ಆಹಾರ ಪದಾರ್ಥಗಳನ್ನು ಕೊಂಡುಹೋದರು. ಇದು ಧರ್ಮಸೂತ್ರಗಳಿಗೆ ವಿರೋಧವಾದ ಆಚರಣೆಯೆಂದು ಕೆಲವರು ಆ ಪ್ರದೇಶದ ಗವರ್ನರರಿಗೆ ದೂರು ಕೊಟ್ಟರು. ಬಿಜಾಪುರದರಸರ ಪ್ರತಿನಿಧಿಯಾದ ಸುಖ್ತಂಕರ್ ಎಂಬ ಈ ಗವರ್ನರರು ಈ ದೂರಿಗೆ ಪ್ರತಿಯಾಗಿ ಅಂಥವರನ್ನು 'ಬಹಿಷ್ಕಾರ'ಕ್ಕೊಳಪಡಿಸಿದರು. ಹೀಗೆ ಬಹಿಷ್ಕಾರಕ್ಕೊಳಗಾಗಿ ಊರು ಬಿಟ್ಟು ತೆರಳಿದವರನ್ನು ಬಾರ್ದೇಶಕಾರರೆಂಬ ಉಪಜಾತಿಯಾಗಿ ಗುರುತಿಸಲಾಯಿತು. ಇದು 1500ರಲ್ಲಿ ನಡೆಯಿತು.

ಅದೇ ರೀತಿ ಪೆಡ್ನೆಕರ್ ವರ್ಗದವರೂ ಇದ್ದಾರೆ. ತಾವು ಸರ್ವ ಪ್ರಥಮ ಬ್ರಾಹ್ಮಣರಾಗಿದ್ದವರು ಅಂತೆಯೇ ಆದ್ಯ ಗೌಡ ಬ್ರಾಹ್ಮಣರೆಂದು ಅವರ ವಾದವಾಗಿತ್ತು. ಈ ಕಾರಣವಾಗಿ ಪಡ್ನೇಕಾರರೆಂಬ ಒಂದು ಬೇರೆಯೇ ವರ್ಗವು ರೂಪಿತವಾಯಿತು. ಹಾಗೆಯೇ ಕುಡಾಲ್ ದೇಶಕಾರರು, ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯ ಕುಡಾಲ ಎಂಬ ಕಡೆಯಲ್ಲಿದ್ದ ಸ್ಮಾರ್ತ ಸಾರಸ್ವತರಾಗಿದ್ದು ಒಂದು ಮದುವೆಯ ಸಂದರ್ಭದಲ್ಲಿ ಎದ್ದ ವಿವಾದದ ಫಲವಾಗಿ ಆದ್ಯ ಗೌಡ ಬ್ರಾಹ್ಮಣರೆಂದು ವರ್ಗೀಕರಿಸಿಕೊಳ್ಳಲು ಮುಂದಾದರು. ಈ ವಿಷಯವು ಅದೇ ವಿಶ್ವಕೋಶದಲ್ಲಿ ಉಕ್ತವಾಗಿದೆ. ಮೊದಲೇ ಹೇಳಿದಂತೆ ಅವರ ಮಠವು ಡಾಬೋಲ್‌ನಲ್ಲಿದೆ.

ಪಂಚಗೌಡ ವ್ಯವಸ್ಥೆಯೊಳಗಿನ ಗೌಡಸಾರಸ್ವತರೆಂಬ ಶೆಣವಿ ಜನರು ರತ್ನಾಗಿರಿ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿದ್ದುದು ಮೂಲವಣ ಮತ್ತು ವೆಂಗುರ್ಲಾದಲ್ಲಿ. ಆದರೆ ಅವರ ಮೂಲ ಸ್ಥಾನವು ಕೊಂಕಣ ಪ್ರದೇಶದ ಗೋವಾ ಆಗಿತ್ತೆಂದು ರತ್ನಾಗಿರಿ ಜಿಲ್ಲೆಯ ಗೆಝೆಟಿಯರ್ (1962) ಉಲ್ಲೇಖಿಸುತ್ತದೆ. ಸ್ಮಾರ್ತರು ಮತ್ತು (ಷಷ್ಟಿಕಾರರೆಂದು ಕರೆಯಲ್ಪಡುವ) ವೈಷ್ಣವರಲ್ಲದೆ ಗೆಝೆಟಿಯರ್ ಇತರ ಏಳು ವರ್ಗಗಳನ್ನು ಉಲ್ಲೇಖಿಸುತ್ತದೆ. ಆ ವರ್ಗಗಳು ಇಂತಿವೆ : ಕುಡಾಲ ದೇಶ್ಕಾರ, ಬಾಲಾವಲಕಾರ, ಪೆಡ್ನೆಕಾರರು, ಲೋಟ್ಲಿಕಾರರು, ದಿವಾಡ್ಕಾರರು, ಬಾರ್ದೆಶಕಾರರು ಮತ್ತು ಖಡ್ಪೆ ಕೌಜುಲೆಗಳು. ಇವರಲ್ಲಿ ಪ್ರತಿಯೊಬ್ಬರೂ ತಾವು ಇನ್ನೊಂದು ವರ್ಗದವರಿಗಿಂತ ಶ್ರೇಷ್ಠರೆಂದು ವಾದಿಸುತ್ತಾರೆ. (ಪುಟ 202) ಗ್ರಂಥವು ಮುಂದರಿದು ಈಗ ಅವರು ಪರಸ್ಪರರಲ್ಲಿ ಭೋಜನ, ಅಂತರ್ವರ್ಗೀಯ ವಿವಾಹಗಳನ್ನು ನೆರವೇರಿಸಿ ಹಿಂದಿನ ನಿರ್ಬಂಧಗಳು ಕಡಿಮೆಯಾಗಿವೆ. (ಪುಟ. 203) ಎಂದು ಹೇಳುತ್ತದೆ. ಬಾರ್ದೇಶಕಾರರು ಮತ್ತು ಸಾಷಷ್ಠಿಕಾರರು ಮಾತ್ರ ವೈಷ್ಣವರಾಗಿದ್ದು ಇತರೆಲ್ಲರೂ ಸ್ಮಾರ್ತರಾಗಿದ್ದಾರೆ. ಪಶ್ಚಿಮ ಭಾರತದ ಅತಿ ಬುದ್ಧಿವಂತ ಮತ್ತು ಪ್ರಗತಿಶೀಲ ಹಿಂದೂ ಸಮಾಜವಾಗಿರಲು ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸವನ್ನು ಕೊಡಿಸಲು ಇವರು ಉತ್ಸುಕರಾಗಿದ್ದು ಯೋಗ್ಯ ಸಂಪಾದನೆ ಇರುವ ಉದ್ಯೋಗಳನ್ನಾಶ್ರಯಿಸುವುದರಲ್ಲಿ ತತ್ಪರರಾದ

ಕೆ.ಡಿ. ಸ್ವಾಮಿನಾಥನ್ ಅವರ ಪುಸ್ತಕ 'ನಾಯಕಾಸ್ ಆಫ್ ಇಕ್ಕೇರಿ' ಮತ್ತು 'ಕೆಳದಿಯ ನಾಯಕರು ಹಾಗೂ ಪೋರ್ಚುಗೀಸರು' ಎಂಬ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎಸ್. ಶಾಸ್ತ್ರಿಯವರ ಪುಸ್ತಕದಲ್ಲಿ ಸಿಗುತ್ತವೆ)

ಕೆಳದಿಯ ನಾಯಕರು ವೀರಶೈವರಿದ್ದರು. ಆದರೆ ರಾಜ್ಯಾಡಳಿತದಲ್ಲಿ ಬ್ರಾಹ್ಮಣರು ವಿಶೇಷತಃ ಸಾರಸ್ವತರು ರಾಜ್ಯಭಾರ ಯಂತ್ರದಲ್ಲಿ ಪ್ರಮುಖ ಸ್ಥಾನಗಳಲ್ಲಿದ್ದರು. ಈ ಸಮಯದ ಒಂದು ಸ್ವಾರಸ್ಯಕರ ಘಟನೆಯೆಂದರೆ ಸಾರಸ್ವತರ ಚಿತ್ರಾಪುರ ಮಠದ ಆವಿರ್ಭಾವ. ಬೇರೆ ಬೇರೆ ಆಖ್ಯಾಯಿಕೆಗಳಲ್ಲಿರುವ ವಿವರಗಳನ್ನು ಫ್ರಾಂಕ್ ಎಫ್ ಕಾನಲನ್ ಇವರು ಯೋಗ್ಯವಾಗಿ ವರ್ಣಿಸಿದ್ದಾರೆ. (ಎ ಕಾಸ್ಟ್ ಇನ್ ದಿ ಚೇಂಜಿಂಗ್ ವರ್ಲ್ಡ್ ದಿ ಚಿತ್ರಾಪುರ್ ಸಾರಸ್ವತ್ ಬ್ರಾಹ್ಮಣ್ಸ್ 1700-1935 ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ ಪ್ರೆಸ್ 1977)

ಚಿತ್ರಾಪುರ ಸಾರಸ್ವತರ ವಿಷಯದ ಒಂದು ಉಲ್ಲೇಖವಿಲ್ಲಿ ಅಪ್ರಸ್ತುತವಾಗಲಾರದು. ಈ ಸಾರಸ್ವತರು ಗೌಡ ಸಾರಸ್ವತರಿಗೆ ಯಾವುದೇ ರೀತಿಯ ಸಂಬಂಧವಿಲ್ಲದಿರುವವರು ಎಂದು ಸ್ಥಾಪಿಸಲು ಪ್ರಯತ್ನಗಳು ನಡೆದಿವೆ. (ಡಾ। ಆರ್.ಎನ್. ಸಾಲೆತೋರ್ (ಫಿಫ್ಟಿ ಈಯರ್ಸ್ ಆಫ್ ಜ್ಲಿಸ್ - ಡಾ. ಗೋಪಾಲ ಜಿ. ಹಟ್ಟಿಯಂಗಡಿ (ಸಂ.) ಮುಂಬೈ, 1965) ಅವರು ಗೌಡ ಸಾರಸ್ವತರನ್ನು 'ಕೊಂಕಣ'ರೆಂದು ಹೇಳಿ 'ಈ ಎರಡು ಸಮುದಾಯಗಳು ತೀರ ಭಿನ್ನವಾಗಿವೆ ಎನ್ನುತ್ತಾರೆ (ಪು. 269) ಆದರೆ ಅವರ ಬರಹಗಳಲ್ಲಿ ಈ ವಾದವನ್ನು ಪುಷ್ಟೀಕೃತಗೊಳಿಸಲು ಅವರು ಮಾಡಿದ ಪ್ರಯತ್ನಗಳು ಆಧಾರ ವಿರಹಿತವಾಗುತ್ತವೆ. ಚಿತ್ರಾಪುರ ಮಠದ ದಾಖಲೆಗಳೇ ಹೇಳುವಂತೆ ಅದರ ಅನುಯಾಯಿಗಳು ಗೌಡ ಸಾರಸ್ವತರೇ ಆಗಿದ್ದಾರೆ ಮತ್ತು ಚಿತ್ರಾಪುರ ಸಾರಸ್ವತರ ವಿಷಯವಾಗಿ ವಿದ್ವತ್ಪೂರ್ಣ ಪುಸ್ತಕವನ್ನು ಬರೆದಿರುವ ಕಾನಲನ್ ತಾನೇ ಹೇಳುವಂತೆ ಅವರು ಗೌಡಸಾರಸ್ವತರೇ ಆಗಿದ್ದಾರೆ. ಕವಳೇ ಮಠ ಮತ್ತು ಚಿತ್ರಾಪುರ ಮಠದ ಆರಾಧ್ಯ ದೇವರು ಶ್ರೀ ಭವಾನಿಶಂಕರ ಆಗಿದ್ದು ಚಿತ್ರಾಪುರ ಮಠದ ಅನುಯಾಯಿಗಳು ಮೂಲತಃ ಕವಳೇ ಮಠದ ಅನುಯಾಯಿಗಳಾಗಿದ್ದರು. 'ಸಾರಸ್ವತ ಜಾತಿಯವರ ಪೂರ್ವಜರು ಗೋವಾದ ಬ್ರಾಹ್ಮಣ ಕುಟುಂಬದವರಾಗಿದ್ದರು. ಗೌಡ ಸಾರಸ್ವತ ಬ್ರಾಹ್ಮಣರೆಂದು ಕಾಲಾಂತರದಲ್ಲಿ ಯಾರು ಪರಿಚಿತರಾದರೋ ಅವರೇ ಈ ಗೋವಾ ಬ್ರಾಹ್ಮಣ ಸಮುದಾಯಗಳ ಭಾಗವಾಗಿದ್ದರು" (ಕಾನಲನ್ ಪು.14)

ಗೋವೆಯಲ್ಲಿ ಕುಶಸ್ಥಲಿಕಾರರು ಕವಳೇ ಸ್ಮಾರ್ತ ಮಠದ ಅನುಯಾಯಿಗಳಾಗಿಯೇ ಮುಂದುವರಿದರು ಮತ್ತು ಅವರೂ ಕನ್ನಡ ಜಿಲ್ಲೆಗಳಿಗೆ ಮತ್ತು ದಕ್ಷಿಣಕ್ಕೆ ದೇಶಾಂತರ ತೆರಳಿದರು. ವೈಷ್ಣವ ಸಾರಸ್ವತರ ಜೊತೆಗೆ ಅವರೂ ಕೆಳದಿ ರಾಜರ ರಾಜ್ಯಭಾರ ವ್ಯವಸ್ಥೆಯಲ್ಲಿ ಲಾಭಕರ ಅಧಿಕಾರ ಸ್ಥಾನಗಳಲ್ಲಿದ್ದರು. ದ್ರಾವಿಡ ಬ್ರಾಹ್ಮಣರು ಪದವಿ ಹಾಗೂ ಸ್ಥಾನಗಳಿಗಾಗಿದ್ದ ಸಂಘರ್ಷದಲ್ಲಿ ಗೌಡ ಸಾರಸ್ವತರ ವಿರುದ್ಧ ಈರ್ಷ್ಯೆಗೀಡಾಗಿ ಈ ಪ್ರತಿಸ್ಪರ್ಧೆಯು ಬೇರೆ ಬೇರೆ ಕಡೆ ವಿವಿಧ ರೂಪಗಳಲ್ಲಿ ಕಂಡು ಬಂದಿತು. ಮಹಾರಾಷ್ಟ್ರದಲ್ಲಿ ಸಾರಸ್ವತರು ತ್ರಿಕರ್ಮಿಗಳೆಂದು ಮಾತ್ರ ಮಾನ್ಯ ಮಾಡಲ್ಪಟ್ಟರು. ಷಟ್ಕರ್ಮಿಗಳೆಂದಲ್ಲ ಆದುದರಿಂದ ಪೌರೋಹಿತ್ಯ, ಶಿಕ್ಷಣದಾನ ಮತ್ತು ಪರಿಗ್ರಹ ಈ ತ್ರಿಕರ್ಮಗಳಿಂದ ವಂಚಿತರಾದರು. ಆದರೆ 19ನೇ ಶತಮಾನದಲ್ಲಿ ಮುಂಬೈ ಉಚ್ಚ ನ್ಯಾಯಾಲಯವು ಅವರು ಷಟ್ಕರ್ಮಗಳಿಗೂ ಅರ್ಹರೆಂಬ ನಿರ್ಣಯವನ್ನು ಘೋಷಿಸಿತು.

ಕೆಳದಿಯ ಆಸ್ಥಾನದಲ್ಲೂ ಈ ಸ್ಪರ್ಧೆಯು ಪ್ರಕಟವಾಗಿ 'ಕರ್ನಾಟಕದ ಬ್ರಾಹ್ಮಣರು ಶೆಣ್ವಿಗಳು ಶುದ್ಧ ಶಾಕಾಹಾರಿಗಳಲ್ಲವಾಗಿ ಅವರ ಸ್ಥಾನಮಾನವು ಪ್ರಶ್ನಾತೀತವಲ್ಲದುದಲ್ಲ'ವೆಂದು ವಾದಿಸಿದರು. ಪ್ರತಿಸ್ಪರ್ಧಿಗಳ ವಾದವಾಗಿತ್ತೆಂದರೆ ಸಾರಸ್ವತ(ಸ್ಮಾರ್ತ)ರು ಗುರುಪೀಠವಿಲ್ಲದವರೆಂದು ಕವಳೆ ಮಠದ ಯತಿಗಳು ಬಹುದೀರ್ಘ ಕಾಲದಿಂದ ವಾರಾಣಸಿಯಲ್ಲೇ ಇದ್ದು ಅನಂತರ ಸಾಧಾರಣ 1630ರಲ್ಲಿ ಅವರು ಕೊಂಕಣ ಮತ್ತು ಕೆನರಾ ಜಿಲ್ಲೆಗೆ ಬಂದಾಗ ಗುರುಗಳನ್ನೂ ಅವರ ಶಿಷ್ಯದ್ವಯರನ್ನೂ ಮಾನ್ಯ ಮಾಡಲು ತಿರಸ್ಕರಿಸಿದರು. ಆದುದರಿಂದ ಅಂತಹ ಅನೇಕರು ಮಠದಿಂದ ಬಹಿಷ್ಕೃತರಾದರು. ಇಂತು ಗುರುರಾಹಿತ್ಯದ ವಾದವು ಅಡ್ಡಿಯಾಗಲು ಉತ್ತರ ಭಾರತದ ಸಾರಸ್ವತ ಪಂಡಿತರೊಬ್ಬರು ಸುಮಾರು 1708ರಲ್ಲಿ ಗೋಕರ್ಣಕ್ಕೆ ಬಂದಾಗ ಬಹಿಷ್ಕೃತರಾದವರು ಅವರನ್ನು ಗುರುಗಳನ್ನಾಗಿ ಸ್ವೀಕರಿಸಿ ಪರಿಜ್ಞಾನಾಶ್ರಮರೆಂಬ ಅಭಿಧಾನವನ್ನಿತ್ತರು. ಶೃಂಗೇರಿ ಮಠ ಮತ್ತು ಸ್ಮಾರ್ತ ಪೀಠವು ನೂತನ ಪೀಠಾಧೀಶರಿಗೆ ಮಾನ್ಯತೆಯನ್ನಿತ್ತು ಗೋಕರ್ಣದಲ್ಲಿ ಹೊಸ ಪೀಠವು ಸ್ಥಾಪಿತವಾಯಿತು. ಬಸವಪ್ಪ ನಾಯಕ ರಾಜರೂ ಹೊಸ ಪೀಠಾಧಿಪತಿಗಳನ್ನು ಗೌರವಿಸಿ ಮಾನ್ಯತೆಯಿತ್ತರು ಮತ್ತು ಶರಾವತಿ ಪರ್ಯಂತ ಉತ್ತರ ಕನ್ನಡದ ಸ್ಮಾರ್ತ ಸಾರಸ್ವತರ ಗುರುಗಳೆಂದು ಸ್ವೀಕರಿಸಲ್ಪಟ್ಟರು.

1757ರಲ್ಲಿ ಮಠದ ಕೇಂದ್ರ ಸ್ಥಾನವು ಉತ್ತರ ಕನ್ನಡ ಜಿಲ್ಲೆಯ ಚಿತ್ರಾಪುರಕ್ಕೆ ಸ್ಥಳಾಂತರಿಸಲ್ಪಟ್ಟಿತು. ಇಲ್ಲಿ ಮಠದ ದ್ವಿತೀಯ ಪೀಠಾಧಿಪತಿಗಳಾದ ಶ್ರೀ ಶಂಕರಾಶ್ರಮ ಯತಿಗಳು ಸಮಾಧಿಸ್ಥರಾದರು. 1799 ಇಸವಿಯಿಂದ ಕೆನರಾ ಜಿಲ್ಲೆಯಲ್ಲಿ ಬ್ರಿಟಿಷರ ಆಳ್ವಿಕೆಯ ಸಮಯದಲ್ಲಿ ಈ ಚಿತ್ರಾಪುರ ಮಠಕ್ಕೆ ಸಂಬಂಧಪಟ್ಟ ಸಾರಸ್ವತ ಸಮಾಜದ ಜನರು ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ ಶ್ಯಾನುಭೋಗರಾಗಿ ನೇಮಕಗೊಳಿಸಲ್ಪಟ್ಟರು. ಈ ಕಾರಣದಿಂದ ಹೆಚ್ಚಿನ ಈ ಸಾರಸ್ವತರಿಗೆ ಈ ಎರಡು ಜಿಲ್ಲೆಗಳ ಊರುಗಳ ಹೆಸರುಗಳು ಉಪನಾಮಗಳಾಗಿ ಜೋಡಿಸಲ್ಪಟ್ಟವು. ಉಳ್ಳಾಲ, ಉದ್ಯಾವರ, ಬೆಳ್ತಂಗಡಿ, ಹೊನ್ನಾವರ, ಚಂದಾವರ, ಕೋಡ್ಕಣಿ ಇತ್ಯಾದಿ. ಕೆಲವು ಐತಿಹಾಸಿಕ ಮತ್ತು ಸಾಮಾಜಿಕ ಕಾರಣಗಳಿಂದ ಕೆನರಾ ಜಿಲ್ಲೆಗಳಲ್ಲಿ ಈ ಜನರು ಇತರ ಸಮಾಜದ ಜನರಿಗಿಂತ ಬಹುಬೇಗನೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ತಮ್ಮದಾಗಿಸಿಕೊಂಡರು ಮತ್ತು ಈ ಎರಡು ಜಿಲ್ಲೆಗಳಲ್ಲಿ ಬ್ರಿಟಿಷ್ ರಾಜ್ಯಭಾರದ ಸಮಯದಲ್ಲಿ ಸಿವಿಲ್ ಸೇವೆಯಲ್ಲಿ ಅವರು ಅಗ್ರೇಸರರಾಗಿ ಮುಂದರಿದರು.

ಈ ನವೀನ ಮಠದ ಉಗಮಕ್ಕೆ ಮುಖ್ಯ ಕಾರಣವು ಕೆಳದಿ ರಾಜ್ಯದ ಅಧಿಕಾರದ ಪ್ರಭುತ್ವದಲ್ಲಿ ಸಾರಸ್ವತರಿಗೆ (ವೈಷ್ಣವರು ಹಾಗೂ ಸ್ಮಾರ್ತರು) ಸಿಂಹಪಾಲು ಇದ್ದುದೇ ಆಗಿದೆ. ಈ ವಸ್ತುಸ್ಥಿತಿಯಿಂದಾಗಿ ಇತರ ವರ್ಗಗಳಲ್ಲಿ ಉತ್ಪನ್ನವಾದ ಈರ್ಷ್ಯೆಯೂ ಚಿತ್ರಾಪುರ ಮಠದ ಸ್ಥಾಪನೆಗೆ ಕಾರಣವಾಗಿದೆ. ಇತರ ರಾಜ್ಯಗಳಲ್ಲಿಯೂ ಸಾರಸ್ವತ ಜನರು ಯಾವ ವಿಷಯದಲ್ಲೂ ಹಿಂದುಳಿಯಲಿಲ್ಲ.

ಚಿತ್ರಾಪುರ ಸಾರಸ್ವತರು ಕೆನರಾ ಜಿಲ್ಲೆಗಳಲ್ಲಿ ಅಧಿಕಾರ ಸ್ಥಾನಗಳಲ್ಲಿ ಇದ್ದುದರಿಂದ ಇತರರಿಗಿಂತ ಮೊದಲೇ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಹೊಂದಿದರು. ಇವರು ಹೊಸ ವಿಚಾರಗಳಲ್ಲಿ ಆಸಕ್ತಿ ಹೊಂದಿದವರಾಗಿದ್ದು ಇವರಲ್ಲಿ ಕೆಲವರು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಥಮವಾಗಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ತಂದವರಾಗಿದ್ದರು. ಬಾಸೆಲ್ ಮಿಶನಿನವರ ವಿಚಾರಗಳಿಂದ ಪ್ರಭಾವಿತರಾದವರೂ

ಆಗಿದ್ದರು. ಕ್ರಿಶ್ಚನ್ ಮಿಶನರಿಗಳು ಮಾಡುತ್ತಿದ್ದ ಟೀಕೆಗಳಿಂದ ಚಿಂತಿತರಾದರು. ಮಿಶನರಿಗಳು ಮಾಡುತ್ತಿದ್ದ ಟೀಕೆಗಳಲ್ಲಿ ಕೆಲವು ಯಥಾರ್ಥವಾದವುಗಳಾಗಿದ್ದರೂ ಕೆಲವು ಅಸಮಂಜಸವಾಗಿದ್ದು ಒಟ್ಟಿನಲ್ಲಿ ಹಿಂದುತ್ವವನ್ನು ಹೀನೈಸುವುದು ಅದರ ಉದ್ದೇಶವಾಗಿತ್ತು. ಮಂಗಳೂರು ಮಿಷನ್ ಹೈಸ್ಕೂಲಿನಲ್ಲಿ ಶಿಕ್ಷಣ ಪಡೆದ ಸಾರಸ್ವತ ಯುವಕರು ಕ್ರೈಸ್ತ ಮತವನ್ನು ಅಂಗೀಕರಿಸುವ ಯೋಚನೆಯನ್ನು ಮಾಡಿದರು. ಆದರೆ ರಾಜಾರಾಮ ಮೋಹನ ರಾಯ್ ಇವರ ಒಂದು ಪುಸ್ತಕವು ಅವರಿಗೆ ಹೊಸ ದಿಶೆಯಲ್ಲಿ ಆಲೋಚಿಸಲು ಪ್ರೇರಣೆ ಕೊಟ್ಟಿತು. ಅವರು ಬ್ರಹ್ಮ ಸಮಾಜದ ತತ್ವಗಳನ್ನು ಸ್ವೀಕರಿಸಿದರು. ಮಾತ್ರವಲ್ಲ ಬ್ರಹ್ಮ ಸಮಾಜದ ಶಾಖೆಯೊಂದನ್ನು ಮಂಗಳೂರಿನಲ್ಲಿ ಪ್ರಾರಂಭಿಸಿದರು. ಇಂತಹ ಮಹನೀಯರಲ್ಲಿ ಒಬ್ಬರಾದ ಶ್ರೀ ಕುದ್ಮುಲ್ ರಂಗರಾಯರು ಪರಿಶಿಷ್ಟ ಜನಾಂಗದವರ ಉತ್ಥಾನವನ್ನು ಕೈಗೆತ್ತಿಕೊಂಡರು ಮತ್ತು ಮಂಗಳೂರಲ್ಲಿ 1897ರಲ್ಲಿ ನಿಮ್ನ ವರ್ಗದವರ ಒಂದು ಮಿಶನ್ (Deppressed classes mission) ಪ್ರಾರಂಭಿಸಿದರು. ಕೆಲವು ಸಾರಸ್ವತರು ಥಿಯೊಸೊಫಿಕಲ್ ಸೊಸೈಟಿಯ ವಿಚಾರಗಳಿಂದ ಪ್ರಭಾವಿತರಾಗಿ ಮಂಗಳೂರಿನಲ್ಲಿ ಮಹಿಳಾ ವಿದ್ಯಾಭ್ಯಾಸದ ಸಲುವಾಗಿ ಅವಿರತ ಶ್ರಮಪಟ್ಟರು. ಇವರಲ್ಲಿ ಬೆನಗಲ್ ಕುಟುಂಬದ ಸದಸ್ಯರಿದ್ದರು. ಮಂಗಳೂರಿನಲ್ಲಿ ಬ್ರಹ್ಮ ಸಮಾಜ ಮತ್ತು ಥಿಯೋಸೋಫಿಕಲ್ ಸೊಸೈಟಿ ಈ ಎರಡೂ ಸಂಸ್ಥೆಗಳಲ್ಲಿ ಭಾಗಿಗಳಾಗಿದ್ದ ಗೌಡ ಸಾರಸ್ವತರಾದ ಕೈನರಾ ಹೈಸ್ಕೂಲ್, ಕೆನರಾ ಹಾಸ್ಟೆಲ್, ಕೆನರಾ ಗರ್ಲ್ಸ್ ಸ್ಕೂಲ್ ಮತ್ತು ಕೆನರಾ ಬ್ಯಾಂಕ್ (ಆಗ 'ಹಿಂದೂ ಮ್ಯೂಚುವಲ್ ಪಯಿಡ ಫಂಡ್‌ಗಳ) ಸ್ಥಾಪನೆಗೈದ ಶ್ರೀ ಅಮ್ಮೆಂಬಳ ಸುಬ್ರಾಯ ಪೈ ಇಲ್ಲಿ ಉಲ್ಲೇಖನೀಯರು.

ಬೇರೆ ವಿಷಯಕ್ಕೆ ತೊಡಗುವ ಮುನ್ನ ಚಿತ್ರಾಪುರ ಸಾರಸ್ವತರ ಬಗ್ಗೆ ಕೆಲವು ವಿಚಾರಗಳನ್ನು ಹೇಳಲು ಇಚ್ಛಿಸುತ್ತೇನೆ. ಮಂಗಳೂರಿನ ಕಲೆಕ್ಟರರ ಹಾಗೂ ಇತರ ಕಚೇರಿಗಳಲ್ಲಿ ಉದ್ಯೋಗಗಳು ದೊರೆತ ಕಾರಣ ಇಲ್ಲಿ ಸಾರಸ್ವತರ ವಸತಿಗಳು ಹೆಚ್ಚಾಗಿದ್ದವು. ಹಾಗೆಯೇ ಕೆನರಾ ಜಿಲ್ಲೆಯ ವಿಭಜನ ಪೂರ್ವ ಜಿಲ್ಲೆಯ ಡೆಪ್ಯುಟಿ ಕಲೆಕ್ಟರರ ಕಚೇರಿಯು ಹೊನ್ನಾವರದಲ್ಲಿದ್ದ ನಿಮಿತ್ತವಾಗಿ ಚಿತ್ರಾಪುರ ಸಾರಸ್ವತರು ಈ ಊರಿಗೂ ತಲುಪಿದ್ದರು. 1863ರಲ್ಲಿ ಹೊಸದಾಗಿ ಕಾರವಾರ ಜಿಲ್ಲೆಯು ರಚಿಸಲ್ಪಟ್ಟ ಕಾರಣವಾಗಿ ಇವರು ಕಾರವಾರಕ್ಕೂ ಬಂದು ಮುಟ್ಟಿದರು. ಇವರು ಬಹುಬೇಗ ಇಂಗ್ಲಿಷ್ ವಿದ್ಯಾಭ್ಯಾಸ ಗಳಿಸಿದವರಾಗಿದ್ದುದರಿಂದ ಮತ್ತು ವಿವಿಧ ಸರಕಾರಿ ಕಚೇರಿಗಳಲ್ಲಿ ಉತ್ತಮ ಸ್ಥಾನಗಳನ್ನು ಹೊಂದಿದವರಾದುದರಿಂದ ಅವರು ತಮ್ಮ ಸಮುದಾಯದವರಿಗೆ ಗ್ರಾಮ ಲೆಕ್ಕಿಗರಾಗಿ (ವಿಲೇಜ್ ಎಕೌಂಟೆಂಟ್ಸ್) ಅಥವಾ ಶಾನುಭಾಗ ಉದ್ಯೋಗಗಳನ್ನು ದೊರಕಿಸಿಕೊಟ್ಟರು. ವ್ಯಾಪಾರಿಗಳಾಗಿದ್ದ ಇತರ ಸಾರಸ್ವತರು ಮತ್ತು ಕುಶಲ ಕರ್ಮಿಗಳಾಗಿದ್ದವರು ಅಥವಾ ಕೃಷಿಕರಾಗಿದ್ದವರಿಗಿಂತ ಚಿತ್ರಾಪುರ ಸಾರಸ್ವತರು ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸವನ್ನೀಯುವ ಸ್ಥಿತಿಯಲ್ಲಿದ್ದರು. 19ನೇ ಶತಮಾನದ ಅಂತ್ಯದ ಹೊತ್ತಿಗೆ ಚಿತ್ರಾಪುರ ಸಾರಸ್ವತರು ಶಿಕ್ಷಣದಲ್ಲಿ ಬಹಳ ಮುಂದುವರಿದವರಾಗಿದ್ದರು. ಇಂಗ್ಲಿಷ್ ಶಿಕ್ಷಣದ ಕಾರಣದಿಂದ, ಅಮೇರಿಕದ ಯಾದವೀ ಯುದ್ಧದ ಸಂದರ್ಭದಲ್ಲಿ (ಸಿವಿಲ್ ವಾರ್) (1862-1864 ರ ಅವಧಿಯ ಹೊತ್ತಿಗೆ) ಭಾರತದಲ್ಲಿ ಅರಳೆಯ ಬೆಲೆಯಲ್ಲುಂಟಾದ ತೀವ್ರ ಹೆಚ್ಚಳದಿಂದ ಇವರಿಗೆ ಹತ್ತಿಯ ವ್ಯಾಪಾರದಲ್ಲಿ ಮತ್ತು ಉದ್ಯಮದಲ್ಲಿ ಗಟ್ಟಿಯಾದ ಸ್ಥಾನವು ಕುಮಟಾ, ಹುಬ್ಬಳ್ಳಿ, ಧಾರವಾಡ ಕೊನೆಗೆ ಬೆಂಗಳೂರಲ್ಲೂ ಸಿದ್ಧಿಸಿತು. ಹಾಗೆಯೇ ರೈಲ್ವೇ ಕೇಂದ್ರಸ್ಥಾನವು ಧಾರವಾಡದಿಂದ ಮದರಾಸಿಗೆ ಸ್ಥಾನಾಂತರವಾದ

ಸಂದರ್ಭದಲ್ಲಿ ಅನೇಕ ಚಿತ್ರಾಪುರ ಸಾರಸ್ವತರು ಮದರಾಸನ್ನೂ ಸೇರಿದರು. ನವ ವಿದ್ಯಾಭ್ಯಾಸವು ಅವರಿಗೆ ಮುಂಬಯಿ ಮದರಾಸುಗಳಲ್ಲಿ ಸರಕಾರೀ ಸ್ಥಾನಗಳು ಪ್ರಾಪ್ತವಾಗಲು ಸಹಕಾರಿಯಾಯಿತು. ಮುಂಬೈಯಲ್ಲಿ ಅನೇಕ ಸಂಸ್ಥೆಗಳು 1900ರ ಮೊದಲೇ ಅವರಿಗೆ ಭದ್ರ ನೆಲೆಯನ್ನು ದೊರಕಿಸಲು ಸಹಕಾರಿಯಾದವು (ವಿವರಗಳು ಕಾನಲನ್‌ನ ಪುಸ್ತಕದಲ್ಲಿವೆ)

ಮುಂಬೈಯಲ್ಲಿ ನೆಲೆಯೂರಿದವರಲ್ಲಿ ಪ್ರಮುಖವಾಗಿ ಕಾರವಾರದ ಶ್ರೀ ಶ್ಯಾಮರಾವ್ ವಿಠ್ಠಲ ಕಾಯ್ಕಿಣಿ (ಇವರ ಹೆಸರಲ್ಲಿ ಶ್ಯಾಮ ರಾವ್ ವಿಟ್ಠಲ ಕೋಪರೇಟಿವ್ ಬ್ಯಾಂಕ್ ಸ್ಥಾಪಿತವಾಗಿದೆ), ಹೊನ್ನಾವರದ ಇವರ ತಂಗಿಯ ಮಗ ಶ್ರೀ ನಾರಾಯಣ ಚಂದಾವರ್ಕರ್ ಇವರು ಪ್ರಮುಖ ವ್ಯಕ್ತಿಗಳೂ ಸಾಮಾಜಿಕ ಕಾರ್ಯಕರ್ತರೂ ಆಗಿದ್ದರು (ಇವರು ಪ್ರಾರ್ಥನಾ ಸಮಾಜದ ಸಹಭಾಗಿಗಳೂ ಆಗಿದ್ದರು) ಅಲ್ಲದೆ ಬಹು ಸುಶಿಕ್ಷಿತರೂ ಆಗಿದ್ದ ಶ್ರೀ ಚಂದಾವರ್ಕರ್ 1900ರ ಲಾಹೋರ್ ಸಮ್ಮೇಳನದಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಚುನಾಯಿತರಾದರು ಮತ್ತು ಮುಂಬೈ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನೇಮಕವಾದರು ಕೂಡ. ಪ್ರಮುಖ ಸ್ವಾತಂತ್ರ್ಯ ಸೇನಾನಿ ಕಾರ್ನಾಡ್ ಸದಾಶಿವ ರಾವ್, ಕಮಲಾ ದೇವಿ ಚಟ್ಟೋಪಾಧ್ಯಾಯ, ಕೃಷ್ಣಾಬಾಯಿ ಪಂಜೇಕರ್, ಉಮಾಬಾಯಿ ಕುಂದಾಪುರ್ ಇವರೆಲ್ಲ ಈ ಸಮುದಾಯಕ್ಕೆ ಸೇರಿದವರು. ಪ್ರಮುಖ ಕನ್ನಡ ಸಾಹಿತಿ ಪಂಜೆ ಮಂಗೇಶರಾವ್ ಅವರ ಹೆಸರನ್ನು ಇಲ್ಲಿ ಉಲ್ಲೇಖಿಸಬೇಕಾಗುತ್ತದೆ.

ಈಗ ಗೌಡ ಸಾರಸ್ವತರ ಶತಮಾನಗಳ ಹಿಂದಣ ಇತಿಹಾಸವನ್ನು ತಿಳಿಯಲು ಹಿಂದೆ ಸರಿಯುತ್ತೇನೆ. ಪ್ರಸಿದ್ಧ ಸಂಶೋಧಕ ಆರ್ ಬಿ. ಗುಂಜೀಕರ್ ಅವರ ಅಭಿಪ್ರಾಯದಂತೆ ಗೋವಾ ಮತ್ತು ಕೊಂಕಣದ ರಾಜ್ಯಪಾಲ (ಗವರ್ನರ್) ರಾಗಿದ್ದ ಮಾಧವ ಮಂತ್ರಿಯು ಕೊಚರೆ (ಆ ಕಾಲದಲ್ಲಿ ಕುಚ್ಛರ ಎಂದು ಕರೆಯಲ್ಪಡುತ್ತಿದ್ದರು) ಎಂಬಲ್ಲಿ ನಿರ್ಮಿಸಿದ ಅಗ್ರಹಾರವನ್ನು ಮಾಧವಪುರವೆಂದು ಪುನರ್ನಾಮಕರಣ ಮಾಡಿ 25 ಬ್ರಾಹ್ಮಣರಿಗೆ ದಾನವಿತ್ತ ಮತ್ತು ಆ ಬ್ರಾಹ್ಮಣರು ಸಾರಸ್ವತರಾಗಿದ್ದರು. ಮಾಧವ ಮಂತ್ರಿಯು ಸಪ್ತನಾಥ ದೇವಾಲಯವನ್ನೂ ಪುನನಿರ್ಮಾಣ ಮಾಡಿಸಿ (ನಾರ್ವೆಯ ಸಪ್ತಕೋಟೀಶ್ವರ ದೇವಾಲಯ) ಈ ಅಗ್ರಹಾರವನ್ನು ಕಟ್ಟಿಸಿದ. ದೇವಾಲಯವನ್ನು ಆಕ್ರಮಣಕಾರಿಗಳು ಧ್ವಂಸ ಮಾಡಿದರು. (1884 - ಸರಸ್ವತಿ ಮಂಡಲ ಪ್ರಕಾರ) ಗೋವಾದ ದೇವಾಲಯಗಳ ವಿವೇಚನಾರಹಿತ ವಿನಾಶದಿಂದ ಬೆಳಗಾವಿ, ಧಾರವಾಡ, ಉತ್ತರಕನ್ನಡದಂತಹ ನೆರೆಯ ಜಿಲ್ಲೆಗಳಲ್ಲಿ ಕಂಡು ಬರುತ್ತಿದ್ದ ಶಿಲಾಲೇಖಗಳು ಹಾಗೂ ಗೋವೆಯಲ್ಲಿದ್ದಿರಬಹುದಾದ ಎಲ್ಲವೂ ನಷ್ಟವಾದವು.

16ನೇ ಶತಮಾನದಲ್ಲಿ ನಡೆದ ಪೋರ್ಚುಗೀಸ ದುರತಿಕ್ರಮಗಳ ಕಾರಣದಿಂದ ಜನರು ಸಮುದ್ರ ಮಾರ್ಗವಾಗಿ ಮಾತ್ರವಲ್ಲ ಭೂ ಮಾರ್ಗವಾಗಿಯೂ ಬೆಳಗಾವಿ, ಕೊಲ್ಹಾಪುರ, ಧಾರವಾಡ, ಉತ್ತರಕನ್ನಡ ಜಿಲ್ಲೆ ಮತ್ತು ಅನಂತರ ಬಿಜಾಪುರದ ರಾಜರು, ಸೋಂದಾ ಅಧಿಪತಿಗಳಲ್ಲಿಗೆ ತೆರಳಿ ಅಲ್ಲಿ ಸೇವಾನಿರತರಾದರು. ಆದಿಲ ಶಾಹಿಗಳ ಸಾಮಂತರಿದ್ದ ದೇಸಾಯಿಗಳ ಸೇವೆಯಲ್ಲಿದ್ದ ಸಾರಸ್ವತರಿದ್ದರು ಅಂತೆಯೇ ಕಿತ್ತೂರಿನ ದೇಶಪಾಂಡೆ, ಕಿತ್ತೂರಿನ ಲಿಂಗಾಯತ ದೇಸಾಯಿಗಳ ಅಧೀನರಾದ ದೇಶಪಾಂಡೆ ಮತ್ತು ಇತರ ಕಡೆಯಲ್ಲೂ ಸಾರಸ್ವತರು ದೇಶಪಾಂಡೆಗಳಾಗಿದ್ದರು.

ಈ ಶೆಣ್ವಿಗಳು ತಮ್ಮ ಉದ್ದೇಶ ಸಾಧನೆಗೆ ಶಕ್ತರಾಗುವರೆಂದು ಗೆಝೆಟಿಯರ್ ಟಿಪ್ಪಣಿ ಮಾಡಿದೆ (ಪುಟ. 203) 19ನೇ ಶತಮಾನದಲ್ಲಿ ಕ್ಯಾಂಪ್‌ಬೆಲ್ ಇದೇ ಗೆಝೆಟಿಯರ್‌ನಲ್ಲಿ ಈ ಅಭಿಪ್ರಾಯಗಳನ್ನು ಪುನರುಚ್ಚರಿಸಿರುತ್ತಾನೆ.

ಇಷ್ಟರವರೆಗೆ ನಾನು ಸಾರಸ್ವತ ಸಮುದಾಯದ ಮೂಲ, ವಿಸ್ತಾರ ಮತ್ತು ಚಟುವಟಿಕೆಗಳ ವಿಷಯದಲ್ಲೊಂದು ಪಕ್ಷಿನೋಟದ ಚಿತ್ರವನ್ನು ಕೊಡಲು ಪ್ರಯತ್ನಿಸಿದ್ದೇನೆ. ಮುಂದೆ ಸಮಾಜದ ಮಠಗಳು, ಮುಖ್ಯ ದೇವಾಲಯಗಳು ಮತ್ತು ಸಮಾಜದಲ್ಲಿ ಅವುಗಳ ಪಾತ್ರದ ವಿಷಯವಾಗಿ ಹೇಳಲು ಪ್ರಯತ್ನಿಸುತ್ತೇನೆ.

ದ್ವಿತೀಯ ಭಾಗ

ಬೇರೆ ಬೇರೆ ಗ್ರಾಮಗಳ ಗ್ರಾಮದೇವ ದೇವಿಯರಾಗಿದ್ದ ದೇವತೆಗಳೇ ಮುಂದೆ ನಮ್ಮ ಕುಲದೇವತೆಗಳಾಗಿ ಮಾನ್ಯರಾದರು. ಈ ಕುಲದೇವತಾ ದೇವಾಲಯಗಳ ಸುತ್ತಮುತ್ತ ಸಮಾಜದ ಜನರು ಕೇಂದ್ರಿತರಾದರು. ಕಾರ್ತಿಕ, ಶ್ರಾವಣ, ರಥಸಪ್ತಮಿಯಂಥ ಉತ್ಸವಗಳನ್ನು ವೈಭವದಿಂದ ಆಚರಣೆ ಮಾಡಲು ಪ್ರಾರಂಭವಾಯಿತು. ಉತ್ಸವ ಮೂರ್ತಿಗಳ ಉತ್ಸವವು ಊರ ಬೀದಿಗಳಲ್ಲಿ ತೊಡಗಿತು. ಪ್ರಿಯೋಲಾದಲ್ಲಿ ಮಂಗೇಶ, ಜಾಂಬಾವಲಿಯಲ್ಲಿ ದಾಮೋದರ, ಮಾಶೆಲಾದಲ್ಲಿ ದೇವಕೀ ಕೃಷ್ಣ ರವಳನಾಥ, ಬಾಂದೋರಾದಲ್ಲಿ ರಾಮನಾಥ, ಮಹಾಲಕ್ಷ್ಮಿ ಮತ್ತು ನಾಗೇಶ ಹೋರಿಂ ಎಂಬಲ್ಲಿ ನವದುರ್ಗಾ, ಕಾಣಕೋಣದಲ್ಲಿ ಮಲ್ಲಿಕಾರ್ಜುನ, ಚಂದೋಲಾದಲ್ಲಿ ಭಗವತಿ, ಫಾತೊರ್ಪಾದಲ್ಲೂ ಶಾಂತದುರ್ಗಾ, ಮಡಕೈ ನವದುರ್ಗಾ, ಪೆಡ್ನೆಯಲ್ಲಿ ಭಗವತಿ, ಕೇರಿಂನಲ್ಲಿ ವಿಜಯದುರ್ಗಾ, ಕವಳೆಯಲ್ಲಿ ಶಾಂತದುರ್ಗಾ, ಶಿರೋಡಾದಲ್ಲಿ ಕಾಮಾಕ್ಷಿ, ವೇಲಿಂಗಾದಲ್ಲಿ ಲಕ್ಷ್ಮೀನರಸಿಂಹ ಉಲ್ಲೇಖನೀಯ ದೇವಾಲಯಗಳಾಗಿವೆ. ಹಲವು ಸಾರಸ್ವತರು ಗೋವಾ ತೊರೆದು ಹೋಗುವಾಗ ತಮ್ಮ ಕುಲದೇವರನ್ನೂ ತಮ್ಮೊಂದಿಗೆ ಕೊಂಡು ಹೋಗಿ ತಾವು ನೆಲೆ ನಿಂತಲ್ಲಿ ದೇವಾಲಯಗಳನ್ನು ಸ್ಥಾಪಿಸಿದರು. ಇವು ಉತ್ತರಕನ್ನಡ ಜಿಲ್ಲೆಯಲ್ಲಿವೆ. ಕುಂದೋದರಿ ಮತ್ತು ಮಹಾಲಸಾ ನಾರಾಯಣಿ ಅಂಕೋಲೆಯಲ್ಲಿ ಈ ರೀತಿ ಸ್ಥಾಪಿತವಾದ ದೇವಾಲಯಗಳಾಗಿವೆ. ಶಿರಾಲಿಯಲ್ಲಿ ಮಹಾಮಾಯಾ ಗಣಪತಿ, ಅವರ್ಸಾದಲ್ಲಿ ಕಾತ್ಯಾಯನಿ ಬಾಣೇಶ್ವರವೂ ಇತರ ದೇವಾಲಯಗಳು. ರಥಸಪ್ತಮಿಯ ದಿನ, ಶರನ್ನವರಾತ್ರಿಯ ದಿನಗಳು, ಫಾಲ್ಗುಣದಲ್ಲಿ ಶಿಶಿರೋತ್ಸವ, ಹೋಳಿ, ಮಹಾಶಿವರಾತ್ರಿ, ಕಾರ್ತಿಕ ಪೂರ್ಣಿಮಾ ಉತ್ಸವ, ರಥೋತ್ಸವ ಈ ದೇವಸ್ಥಾನಗಳಲ್ಲಿ ನಡೆಯುವ ಉತ್ಸವಗಳಾಗಿವೆ.

ಪಶ್ಚಿಮ ತೀರದಲ್ಲಿ ನಿರ್ವಸಿತರಾಗಿ ನೆಲೆಸಿದ ಸಾರಸ್ವತರು ವಿಜಯನಗರ ಸಾಮ್ರಾಜ್ಯದ ಅಧಿಪತ್ಯವು ನೆಲೆ ನಿಂತಿದ್ದ ಕಾಲದಲ್ಲಾದುದರಿಂದ ಬಹು ಸಂಖ್ಯೆಯವರು ವೈಷ್ಣವರಾಗಿ ತಿರುಪತಿಯ ವೆಂಕಟರಮಣನ ಭಜಕರಾದರು. ತಿರುಪತಿಯ ಸಮೀಪದ ಕುಂಭಕೋಣ ಮಠಕ್ಕೂ ಅವರ ಸಂಬಂಧವಿದ್ದು ಕಾಲಕ್ರಮೇಣ ಕಾಶೀಮಠವು ಈ ಮಠದ ಶಾಖಾ ಮಠವಾಗಿ ರೂಪಿತವಾಯಿತು. ಈ ಕಾರಣದಿಂದ ಶ್ರೀ ವೆಂಕಟರಮಣ ವಿಜಯನಗರದಲ್ಲಲ್ಲವಾದರೂ ಕೊಚ್ಚಿಯಲ್ಲಿ ಆರಾಧ್ಯ

ದೇವನಾದ. ಕೊಚ್ಚಿಯ ಮಟ್ಟಾಂಚೇರಿಯಲ್ಲಿರುವ ವೆಂಕಟರಮಣ ದೇವಾಲಯವು ಸಾರಸ್ವತರ ದೇವಳಗಳಲ್ಲಿಯೇ ಅತ್ಯಂತ ದೊಡ್ಡದಾಗಿರುವುದಾಗಿದ್ದು 16ನೇ ಶತಮಾನದಲ್ಲಿ ಸ್ಥಾಪಿತವಾಯಿತೆಂದು ತಿಳಿಯಲಾಗುತ್ತಿದೆ. ಮಂಜೇಶ್ವರದ ಅನಂತೇಶ್ವರ ದೇವಾಲಯವು 700 ವರ್ಷಗಳಷ್ಟು ಪುರಾತನವಾಗಿದ್ದು ಇಲ್ಲಿಯ ರಥೋತ್ಸವವು ಮಾರ್ಗಶಿರ ಷಷ್ಠಿಯಂದು ಜರಗುತ್ತದೆ. ವೆಂಕಟರಮಣ ದೇವಾಲಯಗಳು ಕಣ್ಣಾನೂರು, ಕಾಸರಗೋಡು, ಎರ್ನಾಕುಲಂ, ತೊರವೂರ, ಅಲೆಪ್ಪಿ ಕೊಟ್ಟಾಯಂ ಇತ್ಯಾದಿ ಕಡೆಗಳಲ್ಲಿರುವ ಕೇರಳದ ದೇವಾಲಯಗಳು. ಮಂಗಳೂರು, ಬಂಟ್ವಾಳ, ಉಡುಪಿ, ಉಪ್ಪಿನಂಗಡಿ, ಕಾರ್ಕಳ, ಗಂಗೊಳ್ಳಿ, ಕುಂದಾಪುರ ಮೂಲ್ಕಿ ಇತ್ಯಾದಿಯಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ವೆಂಕಟಾಪುರ, ಹೊನ್ನಾವರ, ಕುಮಟಾ, ಸಿದ್ಧಾಪುರ, ಯಲ್ಲಾಪುರ, ಮುರ್ಡೇಶ್ವರ ಇತ್ಯಾದಿಯಾಗಿ ಉತ್ತರ ಕನ್ನಡ ಜಿಲ್ಲೆಯಲ್ಲೂ, ಶಿವಮೊಗ್ಗಾ ನಗರದಲ್ಲೂ ದೇವಾಲಯಗಳಿದ್ದು ಸಾರಸ್ವತರು ಇವುಗಳ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದಾರೆ. ಚಿತ್ರಾಪುರ ಸಾರಸ್ವತರವುಗಳಾದ ವಿಟ್ಲದ ಅನಂತೇಶ್ವರ, ಮಂಗಳೂರು ಉಮಾ ಮಹೇಶ್ವರ, ಬಂಟವಾಳದ ಸೀತಾರಾಮ ದೇವಳಗಳು ಪ್ರಮುಖವಾಗಿವೆ. ಉತ್ತರ ಕನ್ನಡ ಜಿಲ್ಲೆಯಲ್ಲೂ ಅವರ ದೇವಾಲಯಗಳಿವೆ. ಕೆಲವು ದೇವಾಲಯಗಳಲ್ಲಿ ಆವೇಶ ದರ್ಶನವಿದ್ದು ಕಾಲಭೈರವನ ಆವೇಶವು ಪಾತ್ರಿಯಲ್ಲಿ ಆವಿರ್ಭಾವವಾಗಿ ಭಜಕರು ಮಾರ್ಗದರ್ಶನ ಪಡೆಯುತ್ತಾರೆ. ಉದಾಹರಣೆಗೆ ಮೂಲ್ಕಿ, ಗುರುಪುರ ಇತ್ಯಾದಿ. ಶ್ರೀಕೃಷ್ಣ, ರಾಮ, ವಿಟ್ಠಲ ಮತ್ತು ಆಂಜನೇಯ ದೇವಾಲಯಗಳೂ ಸಾರಸ್ವತರಿಂದ ಸ್ಥಾಪಿತವಾದವುಗಳು ಇವೆ. ರಥೋತ್ಸವ, ಕಾರ್ತಿಕ ಪೂರ್ಣಿಮೆ ಮತ್ತು ವನಭೋಜನ ಉತ್ಸವಗಳು ಸಾಮಾನ್ಯವಾಗಿ ಇಲ್ಲೆಲ್ಲ ಆಚರಿಸಲ್ಪಡುತ್ತವೆ.

ದೇವಾಲಯಗಳು ಸಾಮಾಜಿಕ ಸಂಮಿಲನ ಕೇಂದ್ರಗಳಾಗಿವೆ. ದೇವಸ್ಥಾನಗಳಲ್ಲಿ ಹರಿಕಥೆ, ಪ್ರವಚನ, ಸಂಗೀತ ಕಾರ್ಯಕ್ರಮಗಳು ವ್ಯವಸ್ಥೆಯಾಗುತ್ತವೆ. ಕಾರ್ತಿಕ ದೀಪೋತ್ಸವ ಮತ್ತು ರಥೋತ್ಸವ ಸಂದರ್ಭಗಳಲ್ಲಿ ಸಾಮೂಹಿಕ ಅನ್ನ ಸಂತರ್ಪಣೆ ಇರುತ್ತದೆ. ಕಾರ್ತಿಕ ಏಕಾದಶಿಗೆ ಅಂತ್ಯವಾಗುವಂತೆ ಭಜನಾ ಸಪ್ತಾಹಗಳು ದೇವಳಗಳಲ್ಲಿ ನಡೆಯುತ್ತವೆ. ಈ ಸಂದರ್ಭಗಳಲ್ಲಿ ಕನ್ನಡ ಮರಾಠಿ, ಹಿಂದಿ ಭಜನೆಗಳನ್ನು ಸಮೂಹಗಳು ಹಾಡುತ್ತವೆ. ಭಜನಾ ಸಪ್ತಾಹಗಳು ಸಂಸ್ಕಾರಪ್ರದಾಯಕಗಳಾಗಿವೆ ಮತ್ತು ಈ ಸಪ್ತಾಹಗಳಲ್ಲಿ ಹಾಡುವ ಸಂತ ಪುರಂದರ ದಾಸ, ಕನಕದಾಸ, ತುಕಾರಾಮ, ಮೀರಾ, ಕಬೀರದಾಸರ ಕೃತಿಗಲಾಗಿದ್ದು ದೈವಿಕ ಮತ್ತು ಧಾರ್ಮಿಕ ಬೋಧನೆಗಳನ್ನೊಳಗೊಂಡವಾಗಿರುತ್ತವೆ. ಸಪ್ತಾಹಗಳಲ್ಲಿ ಭಾಗಿಯಾಗಿರುವವರ ಮನಸ್ಸುಗಳ ಮೇಲೆ ಇವುಗಳ ಸ್ಥಾಯೀ ಪ್ರಭಾವವಾಗುತ್ತದೆ. ಜನರ ಕಿವಿಗಳಲ್ಲಿ ಮತ್ತು ಹೃದಯಗಳಲ್ಲಿ ಈ ಭಜನೆಗಳ ಪ್ರತಿಧ್ವನಿ ಸರ್ವದಾ ಕೇಳಿ ಬರುತ್ತಿರುತ್ತದೆ. ಇಂಥ ಭಜನೆಗಳು ಅನೇಕ ಮನೆಗಳಲ್ಲಿ ಪ್ರತಿನಿತ್ಯ ನಡೆಯುತ್ತವೆ.

ಭಕ್ತರಿಗೆ ಪ್ರಸಾದ ನೀಡುವ ಒಂದು ವಿಶಿಷ್ಟ ಕ್ರಮ ಉತ್ತರ ಕನ್ನಡ ಜಿಲ್ಲೆಯ ಗುಂಡಬಾಳಾ ಎಂಬಲ್ಲಿರುವ ಮುಖ್ಯಪ್ರಾಣ ದೇವಾಲಯದಲ್ಲಿದೆ. ಅಭೀಷ್ಟ ಸಿದ್ಧಿಗಾಗಿ ಆ ದೇವರ ಮುಂದೆ ಯಕ್ಷಗಾನ ಬಯಲಾಟ ಸೇವೆಯೊಪ್ಪಿಸುವ ಹರಕೆ ಹೊತ್ತುಕೊಳ್ಳಭೇಕಾಗುತ್ತದೆ. ಬೇಸಗೆ ಕಾಲದಲ್ಲಿ ದಿನ ಬಿಟ್ಟು ದಿನ ಎಂಬಂತೆ ಇಲ್ಲಿ ಯಕ್ಷಗಾನ ಪ್ರದರ್ಶನವಿದೆ.

ಎಲ್ಲ ಕಡೆ ಪಸರಿಸಿರುವ ಸಾರಸ್ವತರಿಗೆ ತಮ್ಮ ಸಾಮಾಜಿಕ ಐಕ್ಯ ಕಾಯ್ದುಕೊಳ್ಳಲು ದೇವಾಲಯಗಳು ಸುಲಭ ಪ್ರಾಪ್ತ ವೇದಿಕೆಗಳಾಗಿವೆ. ಊರು ಬಿಟ್ಟು ಪರಊರುಗಳಲ್ಲಿ ಇರುವವರಿಗೆ ರಥೋತ್ಸವಗಳು ತಮ್ಮ ಮೂಲ ಊರುಗಳ ಸಂದರ್ಶನಕ್ಕೆ ಮತ್ತು ತಮ್ಮವರನ್ನು ಕಾಣಲು ವರ್ಷಕ್ಕೊಮ್ಮೆ ದೊರಕುವ ಸದವಕಾಶಗಳಾಗಿವೆ. ಈ ರಥೋತ್ಸವಗಳಿಂದಾಗಿ ಆಸ್ತಿಕತೆಯ ವೃದ್ಧಿ ಮಾತ್ರವಲ್ಲ ಸಾಮಾಜಿಕ ಐಕ್ಯವೂ ದೃಢವಾಗುತ್ತದೆ. ಉತ್ಸವದ ವೇಳೆ ಪಾಲಕಿಗಳನ್ನು ಹೊತ್ತುಕೊಳ್ಳುವುದು, ಬಡಿಸುವುದು, ಎಂಜಲೆಲೆಗಳನ್ನು ಎತ್ತುವುದು ಇಂತಹ ದೈಹಿಕ ಶ್ರಮದ ಕೆಲಸಗಳನ್ನು ಮಾಡುವುದರಿಂದ ಶ್ರಮದ ಮೌಲ್ಯವನ್ನು ವರ್ಧಿಸುವ ಅವಕಾಶವು ಪ್ರಾಪ್ತವಾಗುತ್ತದೆ. ಉತ್ಸವದ ಯಶಸ್ಸೂ ಇವರಿಗೆ ಈ ಎಲ್ಲದರಿಂದ ಲಭಿಸುತ್ತದೆ. ದೇವಾಲಯಗಳಲ್ಲಿನ ಉತ್ಸವಗಳು ತರುಣ ವರ್ಗಕ್ಕೆ ಸ್ವಸಹಕಾರ ಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಹಾಗೂ ನಾಯಕತ್ವ ಗುಣಗಳನ್ನು ಗಳಿಸಿಕೊಳ್ಳಲು ಸಹಕಾರಿಯಾಗಿವೆ. ಗಾಯನ, ನರ್ತನ ಇಂತಹ ಲಲಿತಕಲೆಗಳ ಕಡೆಗಿನ ಪ್ರೀತಿಯನ್ನು ವರ್ಧಿಸಲು ಇಂತಹ ಉತ್ಸವಗಳು ಯಶಸ್ವಿಯಾಗಿವೆ. ಸಾಂಸ್ಕೃತಿಕ ಮೌಲ್ಯಗಳನ್ನು ಕಾಯ್ದುಕೊಂಡು ಜೀವನದ ಉತ್ತಮ ಮೌಲ್ಯಗಳಲ್ಲಿ ಆಸಕ್ತಿ ಬೆಳೆಸುವಲ್ಲಿಯೂ ಈ ಉತ್ಸವಗಳು ಸಹಕಾರಿಗಳಾಗಿವೆ.

ಶಿರಸಿಯಲ್ಲಿನ ಶ್ರೀ ಗೋಪಾಲಕೃಷ್ಣ ದೇವಸ್ಥಾನ ಅಥವಾ ತೀರ್ಥಹಳ್ಳಿಯಲ್ಲಿನ ಶ್ರೀ ರಾಮಮಂದಿರವು ಸ್ವಾತಂತ್ರ್ಯ ಆಂದೋಲನದ ವೇಳೆ ಎಲ್ಲ ಸಭೆಗಳ ನಿವೇಶನವಾಗಿಯೂ ಉಪಯುಕ್ತವಾಗಿದ್ದವು.

ಬೆಂಗಳೂರು, ಮೈಸೂರು, ಮುಂಬೈ ಪುಣೆಯಂತಹ ನಗರ ಮತ್ತು ಪುರ ಸ್ಥಳಗಳಲ್ಲಿ ಸಮುದಾಯ ಸಂಸ್ಥೆಗಳು (ಸಮಾಜ ಸಂಘಟನೆಗಳು) ಸಾರ್ವಜನಿಕ ಗಣೇಶೋತ್ಸವ, ರಾಮ ನವಮಿ ಮತ್ತು ಇತರ ಸಾಂಸ್ಕೃತಿಕ ಉತ್ಸವಗಳನ್ನು ವ್ಯವಸ್ಥೆಗೊಳಿಸಿ ದೇವಾಲಯಗಳ ಪಾತ್ರವನ್ನು ನಿರ್ವಹಿಸಿವೆ. ಸ್ತ್ರೀಯರ ಸಲುವಾಗಿಯೇ ಇರುವ ಶ್ರಾವಣ ಮಾಸದಲ್ಲಿನ ಚೂಡಿ ವಿನಿಮಯ, ಹೊಸ್ತಿಲು ಪೂಜೆ ಇತ್ಯಾದಿಗಳೂ ವ್ಯವಸ್ಥೆಯಾಗುತ್ತಿವೆ.

ಮಠಗಳು

ಕೈವಲ್ಯ ಮಠ ಅಥವಾ ಕವಳೆ ಮಠವು ಸಾರಸ್ವತ ಸಮಾಜದ ಪ್ರಾಚೀನ ಮಠವೆಂಬುದರಲ್ಲಿ ಸಂಶಯವಿಲ್ಲ. ಗೋವಿಂದ ಭಗವತ್ಪಾದರ ಶಿಷ್ಯ ವಿವರಣಾನಂದ ಸ್ವಾಮಿಗಳು ಸಾಧಾರಣ ಕ್ರಿ.ಶ. 740ರಲ್ಲಿ ಈ ಮಠವು ಗೋವಾದ ಕುಶಸ್ಥಲಿ ಎಂಬಲ್ಲಿ (ಕೆಲೋಶಿಯ ಸಮೀಪ) ಸ್ಥಾಪನೆ ಮಾಡಿದರು ಎಂಬುದನ್ನು ಮೊದಲೇ ಹೇಳಿದೆ. ಆ ಯತಿಗಳು ಕಾಶ್ಮೀರದಿಂದ ಬಂದವರೆಂದು ಪ್ರತೀತಿಯಿದೆ. ಅವರು ಸ್ಮಾರ್ತ ಶಾಂಕರ ಸಂಪ್ರದಾಯಾನುಯಾಯಿಗಳಿದ್ದರು. ಗೌಡ ಪಾದಾಚಾರ್ಯರ ಶಿಷ್ಯ ಗೋವಿಂದ ಭಗವತ್ಪಾದರು ಶ್ರೀ ಆದಿಶಂಕರಾಚಾರ್ಯರಿಗೆ ಸನ್ಯಾಸಾಶ್ರಮ ಕೊಟ್ಟವರು. ಕುಶಸ್ಥಲಿಯಲ್ಲಿದ್ದ ಮೂಲಮಠವು ಪೋರ್ಚುಗೀಸರಿಂದ ನಾಶಗೊಳಿಸಲ್ಪಟ್ಟುದ್ದರಿಂದ ಮಠದ ಮೂಲ ಇತಿಹಾಸವು ಲಭ್ಯವಿಲ್ಲವೆಂದು ಕರಂದೆ ಶಾಸ್ತ್ರಿಗಳು ಹೇಳುತ್ತಾರೆ. (ಶ್ರೀ ಸಂಸ್ಥಾನ, ಕೈವಲ್ಯ ಮಠಾಚಾ ಇತಿಹಾಸ, 1910) 57ನೇ ಯತಿಗಳಾದ ಶ್ರೀ ವಿದ್ಯಾನಂದ ಸರಸ್ವತಿ ಮತ್ತವರ ಇಬ್ಬರು

ಶಿಷ್ಯರು ರತ್ನಾಗಿರಿ ಜಿಲ್ಲೆಯ ಗೊಲ್ವಾಣಾದಲ್ಲಿ ವಾಸ್ತವ್ಯ ಮಾಡಿಕೊಂಡಿದ್ದರು. ಮತ್ತು 60ನೇ ಗುರುಗಳು ಮಾಲ್ವಣ ತಾಲೂಕಿನ ಚಿಂದಾರಾದಲ್ಲಿದ್ದರು. (ಗಣೇಶ ರಾಮಚಂದ್ರ ಶರ್ಮ 1950). ರಾಮಾನಂದ ಸರಸ್ವತಿ ಯತಿಗಳ ಸಮಾಧಿಯು ಚಿಂದಾರಾದಲ್ಲಿದೆ. ಅವರ ಶಿಷ್ಯದ್ವಯರಾದ ಸದಾನಂದ ಸರಸ್ವತಿ ಮತ್ತು ಭಾವಾನಂದ ಸರಸ್ವತಿ ಯತಿಗಳು ವಾರಾಣಸಿಯಲ್ಲಿದ್ದು ಅಲ್ಲೇ ಸಮಾಧಿಸ್ಥರಾದರು. ಮಠದ ಶಿಷ್ಯರು ಈ ಮೊದಲೇ ಹೋಗಿ ಭಾವಾನಂದ ಸರಸ್ವತಿಯವರನ್ನು ಗೋವಾಕ್ಕೆ ಬಂದು ವಾಸ್ತವ್ಯವಿರಲು ಬಿನ್ನವಿಸಿಕೊಂಡಿದ್ದರು. ಭಾವಾನಂದ ಸರಸ್ವತಿಯವರು (62ನೇ ಗುರುಗಳು) ಸಚ್ಚಿದಾನಂದ ಸರಸ್ವತಿಯವರನ್ನು ಮಠದ ಜೀರ್ಣೋದ್ಧಾರಕ್ಕಾಗಿ ಕಳುಹಿಸಿದರು. 1630ರ ಸುಮಾರಿಗೆ ಮಠದ ಪುನರ್ನಿರ್ಮಾಣವಾಯಿತು. ಅವರು 63ನೇ ಗುರುಗಳಾಗಿದ್ದರು. ಪೀಠಾಧಿಪತಿಗಳ ಆರಾಧ್ಯ ಶ್ರೀ ಭವಾನಿಶಂಕರ ದೇವರಾಗಿದ್ದು ಕವಳೆಯಲ್ಲಿ ಮಠದ ಬದಿಯಲ್ಲಿ ಒಂದು ದೇವಾಲಯವಿದೆ.

ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರು ಮಠದ ಅಧಿಕಾರವನ್ನು ಗ್ರಹಣ ಮಾಡಲು ಭಾವಾನಂದ ಸರಸ್ವತಿ ಯತಿಗಳು ಪ್ರಮೋದ ಸಂವತ್ಸರದಲ್ಲಿ ಕೊಟ್ಟ ರಾಯಸ ಪತ್ರಕ್ಕೆ ವಾರಾಣಸಿಯ ಪಂಡಿತರುಗಳು ಹಸ್ತಾಕ್ಷರ ಮಾಡಿದ್ದರು. ಸಚ್ಚಿದಾನಂದ ಸರಸ್ವತಿಯವರು ಮಠದ ಪುನರ್ನಿರ್ಮಾಣ ಕಾರ್ಯವು ಪೂರ್ಣವಾಗುವವರೆಗೆ ರತ್ನಾಗಿರಿಯ ಸೋನವಾಡೆಯೆಂಬಲ್ಲಿ ವಾಸ್ತವ್ಯವಿದ್ದರು. ಕವಳೆ ಮಠವು ಶಾಂತಾದುರ್ಗಾ ದೇವಸ್ಥಾನದ ಸಮೀಪವೇ ನಿರ್ಮಿತವಾಯಿತು. ಆ ಸ್ವಾಮೀಜಿಯವರ ಸಮಾಧಿಯ ಸೋನವಾಡಾದಲ್ಲಿದೆ. ಅವರ ಒಬ್ಬ ಶಿಷ್ಯ ಆತ್ಮಾನಂದ ಸರಸ್ವತಿಯವರು ಮುಂಬೈ ವಾಲ್ಕೇಶ್ವರದಲ್ಲಿ ಒಂದು ಮಠವನ್ನು ಕಟ್ಟಿಸಿದರು. ಅವರ ಸಮಾಧಿಯೂ ಅಲ್ಲೇ ಇದೆ. ಸಚ್ಚಿದಾನಂದ ಸರಸ್ವತಿ ಯತಿಗಳ ಅನೇಕ ಶಿಷ್ಯರ ಸಮಾಧಿಗಳು ಕವಳೆಯಲ್ಲಿವೆ. ಅನಂತರದ ಸ್ವಾಮಿಗಳು ರಾಮಾನಂದ ಸರಸ್ವತಿಯವರಿದ್ದು ಅವರು ನಾಲ್ವರು ಶಿಷ್ಯರನ್ನು ಪರಿಗ್ರಹಿಸಿದರು ಮತ್ತು ಅವರಲ್ಲಿ ಮೂವರು ಅಕಾಲಿಕವಾಗಿ ಕಾಲವಶರಾದಂತೆ ತೋರುತ್ತಿದೆ. ರಾಮಾನಂದ ಸರಸ್ವತಿಯವರ ಸಮಾಧಿಯು ಕವಳೆಯಲ್ಲಿದೆ. ಅವರ ಪ್ರಥಮ ಶಿಷ್ಯರು ಜ್ಯೋತಿರಾನಂದರೂ (ಅಗಾಪುರ), ದ್ವಿತೀಯ ಶಿಷ್ಯರು ಲೀಲಾನಂದರೂ (ನಾಸಿಕ) ತೃತೀಯ ಶಿಷ್ಯರು ಸದಾನಂದ ಸರಸ್ವತಿ (ಸೋನವಾಡಾ) ಮತ್ತು ನಾಲ್ಕನೆಯವರು ಪೂರ್ಣಾನಂದ ಸರಸ್ವತಿ (ಸಾಂಖಳಿ, ಗೋವಾ)ಯವರಾಗಿದ್ದು ಆವರಣದಲ್ಲಿ ಕೊಟ್ಟವುಗಳು ಅವರ ಸಮಾಧಿಗಳಿರುವ ಊರುಗಳಾಗಿವೆ. ಪೂರ್ಣಾನಂದ ಸರಸ್ವತಿಯವರ ಶಿಷ್ಯರಾದ ರಾಮಾನಂದ ಸರಸ್ವತಿಯವರು ಬಹುಶಃ ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿನ ಮಠವನ್ನು ಕಟ್ಟಿಸಿದರು. ಅನಂತರದ ಯತಿಗಳು ಕವಳೆಯಲ್ಲಿರುವುದು ಅನನುಕೂಲಕರವೆಂದು ತಿಳಿದಿರಬೇಕು. ತದನಂತರದ ಸ್ವಾಮಿಗಳಾದ ಶಿವಾನಂದ ಸರಸ್ವತಿಯವರು ಇಬ್ಬರು ಶಿಷ್ಯಂದಿರನ್ನು ಸ್ವೀಕರಿಸಿದರು. ಅವರು ವಾಲ್ಕೇಶ್ವರದಲ್ಲಿ ಸಮಾಧಿಸ್ಥರಾದರು. ಅವರ ಇಬ್ಬರು ಶಿಷ್ಯರಲ್ಲಿ ಒಬ್ಬರಾದ ಸಚ್ಚಿದಾನಂದ ಸರಸ್ವತಿಯವರ ಸಮಾಧಿಯು ವಾಲ್ಕೇಶ್ವರದಲ್ಲಿದ್ದು ಇನ್ನೊಬ್ಬರಾದ ಆತ್ಮಾನಂದ ಸರಸ್ವತಿಯವರ ಸಮಾಧಿಯು ಖಾನಾಪುರದಲ್ಲಿದೆ. ಅನಂತರದ ಪೀಠಾಧಿಪತಿಗಳಾದ ಪೂರ್ಣಾನಂದ, ಸದಾನಂದ, ರಮಾನಂದ, ಶಿವಾನಂದ, ಆತ್ಮಾನಂದ, ಪೂರ್ಣಾನಂದರು ಕ್ರಮವಾಗಿ ಕವಳೆ, ಸೋನಾವಡೆ, ಖಾನಾಪುರ, ಕಾರವಾರದ ಹತ್ತಿರದ ಸದಾಶಿವಗಡ, ಕವಳೆ, ಖಾನಾಪುರದಲ್ಲಿ ಸಮಾಧಿಸ್ಥರಾದರು. ಖಾನಾಪುರದಲ್ಲಿ ಸಮಾಧಿಸ್ಥರಾದ

ರಾಮಾನಂದರು ಅನಂತರ ಪೀಠಾಧಿಪತಿಗಳಾಗಿ ಪರಂಪರೆಯಲ್ಲಿ ಬಂದರೂ ಪೀಠವನ್ನೇರುವ ಮೊದಲೇ ಪರಲೋಕವಾಸಿಗಳಾದರು. ಗಾಯತೊಂಡೆ ಮತ್ತು ಧುಮೆ ಇವರು ಕೊಟ್ಟ ಪಟ್ಟಿಯಲ್ಲಿ ಪ್ರಕೃತ ಅಧಿಪತಿಗಳಾಗಿರುವ ಶ್ರೀಮತ್ ಸಚ್ಚಿದಾನಂದ ಸರಸ್ವತಿಗಳ ಸಹಿತ ಕೇವಲ 13 ಪೀಠಾಧಿಪತಿಗಳ ಹೆಸರಿನ ಉಲ್ಲೇಖ ಮಾತ್ರವಿದೆಯಾದರೆ ಗಣೇಶ ರಾಮಚಂದ್ರ ಶರ್ಮಾರವರು ಕೊಟ್ಟಿರುವ ಪಟ್ಟಿಯಲ್ಲಿ 19 ಯತಿಗಳ ಹೆಸರುಗಳು ಉಲ್ಲೇಖಿತವಾಗಿವೆ. ನಾನು ಎರಡನೆಯದಾಗಿ ಹೇಳಿದ ಪಟ್ಟಿಯನ್ನು ಅಧಿಕೃತವೆಂದು ಮಾನ್ಯಮಾಡಿ ಅದನ್ನು ಅವಲಂಬಿಸಿದ್ದೇನೆ.

ಪೂರ್ಣಾನಂದ ಸರಸ್ವತಿ ಸ್ವಾಮೀಜಿಯವರು 1950ರಲ್ಲಿ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರಿಗೆ ದ್ವಿತೀಯ ಶಿಷ್ಯರನ್ನಾಗಿ ಪರಿಗ್ರಹಿಸಿದರು. ಪ್ರಥಮ ಸ್ವೀಕಾರ ಮಾಡಿದ ಶಿಷ್ಯರು ಅಕಾಲಿಕವಾಗಿ ಪರಂಧಾಮವನ್ನೈದಿದ ಕಾರಣವಾಗಿ ದ್ವಿತೀಯ ಶಿಷ್ಯರಿಗೆ ದೀಕ್ಷೆಯನ್ನೀಯಬೇಕಾಯಿತು.

ತಮ್ಮ 13ನೇ ವರ್ಷ ವಯಸ್ಸಿನಲ್ಲೇ ಸನ್ಯಾಸಾಶ್ರಮಕ್ಕೆ ಪಾದಾರ್ಪಣೆಗೈದ ಅವರಿಗೆ ಶಿಷ್ಯತ್ವ ಶಿಕ್ಷಣವನ್ನು ಪರಂಪರಾಗತವಾಗಿ ಕೊಡಲಾಗಲಿಲ್ಲ. ಗುರುಗಳು ಶಿಷ್ಯ ಸ್ವೀಕಾರದ ಅನತಿದೂರ ಕಾಲದಲ್ಲಿ ಸಮಾಧಿಸ್ಥರಾದ ಕಾರಣವಾಗಿ ಈ ಸ್ಥಿತಿ ಪ್ರಾಪ್ತವಾಯಿತೆಂದು ಪ್ರಕೃತ ಸ್ವಾಮೀಜಿಯವರ ಬಗೆಗೆ ಶ್ರೀ ಎಸ್.ಪಿ. ಪಿಕಳೆ ಹೇಳುತ್ತಾರೆ. ಶ್ರೀಮಠದ ಶಾಖೆಗಳು ಕಾಶಿ (ವಾರಾಣಸಿ), ಬ್ರಹ್ಮಾವರ್ತ (ಪ್ರಯಾಗ ಸಮೀಪ), ನಾಸಿಕ, ವಾಲ್ಕೇಶ್ವರ (ಮುಂಬೈ), ಖಾನಾಪುರ, ಸಾಂಖಲಿ (ಗೋವಾ), ಸೋನವಾಡೆ, ಟಿಂಡಾರ್, ಗೋಲ್ವಾಣ್, ಸದಾಶಿವಗಡ, ಹಲಗೆ (ಕಾರವಾರ ಸಮೀಪ), ಗೋಕರ್ಣ, ಪಣಜಿ, ಬೆಳಗಾವಿಗಳಲ್ಲಿವೆ. ಸ್ಮಾರ್ತಗೌಡ ಸಾರಸ್ವತರನ್ನು 'ಆಡ್ವಿ' ಎನ್ನುತ್ತಾರೆ. (ಅಡ್ಡ ನಾಮ ಧಾರಣ ಮಾಡುವವರು). ದಕ್ಷಿಣ ಕನ್ನಡದಲ್ಲಿ ಇವರ ಸಂಖ್ಯೆ ಕಡಿಮೆ ಇದ್ದು ಉತ್ತರಕನ್ನಡ ಗಣನೀಯವಾಗಿ, ಗೋವಾ, ಮಹಾರಾಷ್ಟ್ರಗಳಲ್ಲಿ ಬಹುಸಂಖ್ಯೆಯಲ್ಲಿರುತ್ತಾರೆ.

ಚಿತ್ರಾಪುರ ಮಠ

ಕೆಳದಿ ಸಂಸ್ಥಾನ (ಚಂದ್ರಗಿರಿ ಮತ್ತು ಶರಾವತಿ ನದಿಗಳ ನಡುವಣ ಭೂಪ್ರದೇಶ) ಇದ್ದ ಸ್ಮಾರ್ತ ಸಾರಸ್ವತರಿಗೆ 1708ರ ಸುಮಾರಿಗೆ ಪ್ರಸಂಗವಶಾತ್ ಯಾವ ರೀತಿಯಾಗಿ ಗೋಕರ್ಣದಲ್ಲಿ ಬೇರೆಯೇ ಮಠ ಒಂದನ್ನು ಸ್ಥಾಪಿಸಬೇಕಾಯಿತು, ಪ್ರಪ್ರಥಮ ಯತಿಗಳಾದ ಪರಿಜ್ಞಾನಾಶ್ರಮ ಸ್ವಾಮಿಗಳ ಉತ್ತರಾಧಿಕಾರಿಗಳಾಗಿ ಪೀಠವೇರಿದ ಶಂಕರಾಶ್ರಮ ಸ್ವಾಮಿಗಳು (1720-57) ಚಿತ್ರಾಪುರದಲ್ಲಿ ಸಮಾಧಿಸ್ಥರಾಗಿ ಉತ್ತರಕನ್ನಡ ಶಿರಾಲಿಯ ಚಿತ್ರಾಪುರವು ಹೇಗೆ ಆ ಮಠದ ಮೂಲ ಕೇಂದ್ರವಾಯಿತೆಂಬುದನ್ನು ಈ ಮೊದಲೇ ಹೇಳಿದೆ. ಈ ಸಂಸ್ಥಾನಾಧಿಪತಿಗಳು ಶ್ರೀ ಭವಾನಿಶಂಕರ ದೇವರ ಆರಾಧಕರು. ಸಂಸ್ಥಾನದ ತೃತೀಯ ಪೀಠಾಧಿಪತಿಗಳಾದ ಶ್ರೀ ಪರಿಜ್ಞಾನಾಶ್ರಮ II (1757) ಸ್ವಾಮಿಗಳು ಹಾಗೂ ಅವರ ಶಿಷ್ಯ ಶಂಕರಾಶ್ರಮ II ಇವರು ತಮ್ಮ ಗುರುಗಳ ಜೀವತಾವಧಿಯಲ್ಲೇ ಸಂಪೂರ್ಣ ಅಧಿಕಾರವನ್ನುಪಯೋಗಿಸಿದರು. ಮತ್ತು 1785ರ ಪರ್ಯಂತ ಪೀಠಸ್ಥರಾಗಿದ್ದರು. ಚಂದಾವರದ ಸಮೀಪ ಮಲ್ಲಾಪುರದಲ್ಲಿ ಅವರ ಸಮಾಧಿ ಇದೆ. 1781ರಲ್ಲಿ ಶ್ರೀ ಕೇಶವಾಶ್ರಮರು ಸನ್ಯಾಸಾಶ್ರಮಕ್ಕೆ ಸ್ವೀಕೃತರಾಗಿ 1785ರಲ್ಲಿ ಪೀಠಾಧಿಪತಿಗಳಾದರು. 'ಇವರು ಮಠದ ಉನ್ನತಿಗೆ ಬಹಳ ಶ್ರಮಪಟ್ಟು, ಸಮಾಜದ ಸೀಮೆಗಳಿಗೆ ಮಠವು ಕೇಂದ್ರವಾಗುವಂತೆ ಮಾಡಿದರು'' ಎಂದು

ಕಾನ್‌ಲಾನ್ ಹೇಳುತ್ತಾನೆ. ಈ ಯತಿಗಳು ದಕ್ಷಿಣ ಕನ್ನಡ ಜಿಲ್ಲೆಯನ್ನು ವ್ಯಾಪಕವಾಗಿ ಪರ್ಯಟನ ಮಾಡಿದರು. ಈ ಸಮಯದಲ್ಲಿ ಮಠದ ಅನುಯಾಯಿಗಳು ವೈಷ್ಣವ ವಿಧಿಗಳನ್ನು ಅನುಸರಿಸುವದನ್ನು ತ್ಯಜಿಸಬೇಕೆಂದು ನಿಯಮನಗೈದರು" ಎಂದು ಕಾನ್‌ಲಾನ್ ಹೇಳುತ್ತಾನೆ (ಪು. 42) ಅನಂತರ ಪರಂಪರೆಯಲ್ಲಿ ಶ್ರೀ ವಾಮನಾಶ್ರಮರು (1823-39) ಶ್ರೀ ಕೃಷ್ಣಾಶ್ರಮರು (1839-64), ಶ್ರೀ ಪಾಂಡುರಂಗಾಶ್ರಮರು (1864-1915), ಶ್ರೀ ಆನಂದಾಶ್ರಮರು (1915-1966) ಪೀಠಾಧಿಪತಿಗಳಾದರು. ಶ್ರೀ ವಾಮನಾಶ್ರಮ ಸ್ವಾಮಿಗಳು ಬಂಟ್ವಾಳ ಶ್ರೀ ಸೀತಾರಾಮ ದೇವಾಲಯವನ್ನು ಪ್ರತಿಷ್ಠಾಪಿಸಿದರು. (1839) ಶ್ರೀ ಪಾಂಡುರಂಗಾಶ್ರಮ ಸ್ವಾಮಿಗಳು ಅನುಯಾಯಿಗಳಲ್ಲಿ ಕೆಲವರು ಸಮುದ್ರಯಾನ ಮಾಡಿದರೆಂಬ ಕಾರಣಕ್ಕೆ ಅಂಥವರನ್ನು ಬಹಿಷ್ಕರಿಸಿದ ಪ್ರಯುಕ್ತ ಸಮಾಜದ ಉಗ್ರ ವಿರೋಧವನ್ನು ಎದುರಿಸಬೇಕಾಯಿತು. ಬಹಿಷ್ಕೃತರಾದವರು ಸಮಾಜ ಹಾಗೂ ಸಮುದಾಯದಲ್ಲಿ ಬಹು ಪ್ರತಿಷ್ಠಿತರಾಗಿದ್ದುದು ಇದಕ್ಕೆ ಕಾರಣವಿದ್ದಿತು. ಇವರಲ್ಲಿ ಶ್ಯಾಮರಾವ್ ವಿಟ್ಠಲ್, ನಾರಾಯಣ್ ಚಂದಾವರ್ಕರ್ ಮತ್ತು ಹುಬ್ಬಳ್ಳಿಯ ಶಿರೂರ್‌ಗಳಿದ್ದರು. 1934ರಲ್ಲಿ ಈ ಬಹಿಷ್ಕಾರವನ್ನು ಹಿಂದೆಗೆಯಲಾಯಿತು. ಶ್ರೀ ಆನಂದಾಶ್ರಮ ಸ್ವಾಮಿಗಳ ಉತ್ತರಾಧಿಕಾರಿಗಳಾಗಿ ಶ್ರೀ ಪರಿಜ್ಞಾನಾಶ್ರಮ ಯತಿಗಳು ಪೀಠಾರೂಢರಾದರು. ಇವರು ಚಿತ್ರಾಪುರದಲ್ಲಿ ಪುನರಪಿ ರಥೋತ್ಸವ ಆಚರಣೆಯನ್ನು ಪ್ರಾರಂಭಿಸಿ, ಚಿತ್ರಾಪುರ ಮಠದಲ್ಲಿ ವಸ್ತು ಸಂಗ್ರಹಾಲಯ ಒಂದನ್ನು ರಚಿಸಿದರು. ಇತರ ಆರ್ಥಿಕ, ಸಮಾಜಿಕ ಸುಧಾರಣೆಗಳೂ ನಡೆದು ಮಠದ ಬಹುವಿಧ ಪ್ರಗತಿಯಾಯಿತು. ಆದರೆ ಅವರು ಮಠ ತ್ಯಜಿಸಿದರು ಹಾಗೂ ಶಿಷ್ಯ ಪರಿಗ್ರಹಣ ಮಾಡಿರಲಿಲ್ಲ ಮತ್ತು 1991ರಲ್ಲಿ ಶಿವೈಕ್ಯರಾದರು. 1997ರಲ್ಲಿ ಶ್ರೀಸದ್ಯೋಜಾತ ಗಿರಿ ಪೀಠಾಧಿಕಾರಿಗಳಾಗಿ ಪ್ರತಿಷ್ಠಿತರಾದರು (ಫೆ. 22)

ಗೋಕರ್ಣ ಪರ್ತಗಾಳಿ ಮಠ

ಈ ಮಠದ ವಿಷಯದಲ್ಲಿ ಕುಮಟೆಯ ಶ್ರೀ ನರಸಿಂಹ ಪುರಾಣಿಕರ 'ಗುರುಪರಂಪರಾಮೃತಂ' ಬಹುಮುಖ್ಯ ಮಾಹಿತಿ ಮೂಲವಾಗಿರುತ್ತದೆ. ಉಡುಪಿ ಫಲಿಮಾರು ಮಠದ ಶ್ರೀ ರಾಮಚಂದ್ರ ತೀರ್ಥರು ಸಾರಸ್ವತ ವಟು ಒಬ್ಬರಿಗೆ ಸನ್ಯಾಸ ದೀಕ್ಷೆಯನ್ನಿತ್ತು 1475ರಲ್ಲಿ ಶ್ರೀ ನಾರಾಯಣ ತೀರ್ಥರು ಗುರುಗಳಾಗಿ ಸಾರಸ್ವತ ವೈಷ್ಣವರ ಒಂದು ಮಠವು ಭಟ್ಕಳದಲ್ಲಿ ಪ್ರಾದುರ್ಭವಿಸಿತು. ಅವರ ಸಮಾಧಿಯು ಭಟ್ಕಳದಲ್ಲಿದೆ. ಈ ಮಠಕ್ಕೆ ಕೆಳದಿಯ ರಾಜರ ಪ್ರೋತ್ಸಾಹವಿದ್ದು ಗೋವೆಯ ಬಹುತೇಕ ವೈಷ್ಣವ ಸಾರಸ್ವತರೂ, ಅವಿಭಜಿತ ಕನ್ನಡ ಜಿಲ್ಲೆಯಲ್ಲೂ ಬಹುಸಂಖ್ಯೆಯಲ್ಲಿ ಅನುಯಾಯಿಗಳಿದ್ದರು. ಫಲಿಮಾರು ಮಠದ ಸ್ವಾಮಿಗಳಾದ ಶ್ರೀ ರಾಮಚಂದ್ರ ತೀರ್ಥರಿಗೆ ತಮ್ಮ ಮಠಕ್ಕೆ ಇವರೇ ಉತ್ತರಾಧಿಕಾರಿಗಲಾಗಬೇಕೆಂಬ ಇಚ್ಛೆ ಇತ್ತಾದರೂ ಆ ಮಠದ ತುಳು ಶಿಷ್ಯ ವರ್ಗದ ವಿರೋಧದಿಂದಾಗಿ ವೈಷ್ಣವ ಸಾರಸ್ವತರ ಸಲುವಾಗಿ ಈ ರೀತಿಯಾಗಿ ಹೊಸಮಠ ಒಂದರ ಸ್ಥಾಪನೆಯಾಯಿತು. ಹೊಸ ಮಠದ ಗುರುಗಳು ಆರಾಧಿಸಿದ ದೇವರು ಶ್ರೀ ವೀರವಿಟ್ಠಲ. ಅನಂತರದ ಪೀಠಾಧಿಪತಿಗಳು ಶ್ರೀ ವಾಸುದೇವ ತೀರ್ಥರಿದ್ದು ಅವರ ಸಮಾಧಿಯ ಪಂಢರಪುರದಲ್ಲಿದೆ. ಅವರ ಉತ್ತರಾಧಿಕಾರಿಗಳಾದ ಶ್ರೀ ಜೀವೋತ್ತಮ ತೀರ್ಥರ ಸಿದ್ಧಿ ಸಾಧನೆಗಳ ಕಾರಣದಿಂದಾಗಿ ಈ ಮಠವು ಜೀವೋತ್ತಮ ಮಠವೆಂದೂ ಪ್ರಸಿದ್ಧವಾಯಿತು. ಅವರ ಸಮಾಧಿಯೂ ಭಟ್ಕಳದಲ್ಲಿದೆ.

ಅವರ ಶಿಷ್ಯರು ಶ್ರೀ ಪುರುಷೋತ್ತಮ ತೀರ್ಥರು. ಅವರ ಕಾಲದಲ್ಲಿ ಅಥವಾ ಸ್ವಲ್ಪ ಅನಂತರ ಮಠವು ಗೋಕರ್ಣಕ್ಕೆ ಸ್ಥಾನಾಂತರವಾಯಿತು ಮತ್ತು ಅವರ ಸಮಾಧಿಯು ಗೋಕರ್ಣದಲ್ಲಿದೆ. ಅವರ ಶಿಷ್ಯರು ಜೀವೋತ್ತಮ ತೀರ್ಥರು II. ಅವರು ಗೋವಾದ ಬಿಚೋಲಿಯಲ್ಲಿ ಸಮಾಧಿಸ್ಥರಾದರು. ಅನಂತರದ ಪೀಠಾಧಿಪತಿಗಳು ಶ್ರೀ ರಾಮಚಂದ್ರ ತೀರ್ಥರು. ಅವರ ಕಾಲದ ತಾರೀಕುವಾರು ದಾಖಲೆಗಳು ಲಭ್ಯವಿವೆ (1634 ರಿಂದ 1666ರ ವರೆಗಿನವು). ಅವರು ಗೋಕರ್ಣದ ಸಮುದ್ರ ತೀರಕ್ಕೆ ಅನುಷ್ಠಾನಾರ್ಥ ಹೋದಾಗ ದ್ರಾವಿಡ ಬ್ರಾಹ್ಮಣರು ಅವರಿಗಿತ್ತ ಕಿರುಕುಳಗಳ ವಿರುದ್ಧ ಬಿಜಾಪುರ ಸುಲ್ತಾನನ ಅಧಿಕಾರಿಗಳು ಕೊಟ್ಟ ಆಜ್ಞಾಪತ್ರಗಳು ಸಿಗುತ್ತವೆ. ಅವರ ವಿರುದ್ಧವಾದ ದ್ರಾವಿಡ ಬ್ರಾಹ್ಮಣರ ವರ್ತನೆಯನ್ನು ಖಂಡಿಸುವ 1645ರ ರಾಜಾಜ್ಞೆಯೂ ದೊರೆಯುತ್ತದೆ. ಭಟ್ಕಳದ ನರಸ ಕಿಣಿಯು ಮೇಗರೆ ಗ್ರಾಮವನ್ನು ಜೀವೋತ್ತಮ ತೀರ್ಥರಿಗೆ ದಾನವಾಗಿತ್ತಿದ್ದನು. ಆದರೆ ಈ ಗ್ರಾಮವು ತಪ್ಪಾಗಿ ಸೋಂದೆ ಮಠದ ಸ್ವಾಧೀನಕ್ಕೆ ಹೋಯಿತು. 1666ರ ಒಂದು ಆಜ್ಞಾಪತ್ರದ ಮೂಲಕವಾಗಿ ರಾಮಚಂದ್ರ ತೀರ್ಥರಿಗೆ ಪುನಪ್ರಾಪ್ತವಾಯಿತು. ಈ ಗುರುಗಳು ತಮ್ಮ ದೀರ್ಘಾವಧಿಯ ಪೀಠಾಧಿಪತ್ಯದ ತರುವಾಯ ಗೋವಾದ ರೇವಣದಲ್ಲಿ ಸಮಾಧಿ ಯನ್ನೈದಿದರು. ಅನಂತರ ಗುರುಗಳಾದ ದಿಗ್ವಿಜಯ ರಾಮಚಂದ್ರ ತೀರ್ಥರು ಅಂಕೋಲಾದಲ್ಲಿ ಸಮಾಧಿಸ್ಥರಾದರು. ಅವರ ಶಿಷ್ಯ ಶ್ರೀ ರಘುಚಂದ್ರ ತೀರ್ಥರ ಸಮಾಧಿಯು ಹೊನ್ನಾವರದಲ್ಲಿದೆ. ಅನಂತರದ ಪೀಠಾಧಿಕಾರಿಗಳ ಶ್ರೀ ಲಕ್ಷ್ಮೀನಾರಾಯಣ ತೀರ್ಥರು ಮರಾಠಾ ರಾಜಾ ಸಂಭಾಜಿ ಮತ್ತು ಸೇನಾಧಿಪತಿ ಪ್ರಖ್ಯಾದ ಸಿರಾಜಿಯ ಆಮಂತ್ರಣದಂತೆ 1680ರ ದಶಕದಲ್ಲಿ ಮಹಾರಾಷ್ಟ್ರಕ್ಕೆ ಹೋಗಿದ್ದರು. ಮತ್ತು ಆ ಅವಧಿಯಲ್ಲಿ ಗೋದಾವರಿ ನದೀತೀರದಲ್ಲಿ ಸಮಾಧಿಸ್ಥರಾದರು. ಅವರ ಉತ್ತರಾಧಿಕಾರಿಗಳಾಗಿ ಶ್ರೀ ಲಕ್ಷ್ಮೀಕಾಂತ ತೀರ್ಥರೂ ಆಮೇಲೆ ರಮಾಕಾಂತ ತೀರ್ಥರೂ ಪರಂಪರೆಯಲ್ಲಿ ಬಂದರು. ಅವರ ಸಮಾಧಿಗಳು ಕ್ರಮವಾಗಿ ಹೊನ್ನಾವರ ಮತ್ತು ಅಂಕೋಲೆಗಳಲ್ಲಿವೆ. ಅನಂತರದ ಗುರುಗಳಾದ ಶ್ರೀ ಕಮಲಾಕಾಂತ ತೀರ್ಥರು ಗೋಕರ್ಣದಲ್ಲಿ ಸಮಾಧಿಸ್ಥರಾದರು. ಅವರ ಶಿಷ್ಯ ಶ್ರೀಕಾಂತ ತೀರ್ಥ ವೊಡೇರ್‌ರ ಸಮಾಧಿಯು ಪರ್ತಗಾಳಿಯಲ್ಲಿದೆ. ತರುವಾಯ ಪರ್ತಗಾಳಿಯು ಗೋಕರ್ಣಮಠದ ಕೇಂದ್ರಸ್ಥಳವಾಯಿತು ಎಂದು ತೋರುತ್ತಿದೆ. ಅವರ ಉತ್ತರಾಧಿಕಾರಿ ಶ್ರೀ ರಮಾನಾಥ ತೀರ್ಥರ ಸಮಾಧಿಯು ಭಟ್ಕಳ ಸಮೀಪದ ವೆಂಕಟಾಪುರದಲ್ಲಿದೆ. ಅನಂತರ ಗುರು ಶ್ರೀ ಲಕ್ಷ್ಮೀನಾಥ ತೀರ್ಥರು ಬರೋಡಾದಲ್ಲಿ ಬ್ರಹ್ಮೈಕ್ಯರಾದರು ಮತ್ತವರ ಸಮಾಧಿಯೂ ಅಲ್ಲಿದೆ.

ಆ ಮೇಲಿನ ಯತಿಗಳಾದ ಶ್ರೀ ಆನಂದ ತೀರ್ಥರು, ಅವರ ಶಿಷ್ಯ ಶ್ರೀ ಪೂರ್ಣಪ್ರಜ್ಞ ತೀರ್ಥ, ಅವರ ಶಿಷ್ಯ ಶ್ರೀ ಇಂದಿರಾಕಾಂತ ತೀರ್ಥ ವೊಡೇರ್ ಇವರೆಲ್ಲರ ಸಮಾಧಿಗಳು ಪರ್ತಗಾಳಿಯಲ್ಲಿವೆ. ಇಂದಿರಾಕಾಂತ ತೀರ್ಥರು ಶ್ರೀ ಕಮಲಾನಾಥ ತೀರ್ಥರನ್ನು ಶಿಷ್ಯರನ್ನಾಗಿ ಪರಿಗ್ರಹಿಸಿದರೂ ಅವರು ತಮ್ಮ ಗುರುಗಳಿಗಿಂತ ಮೊದಲೇ ಅಮರತ್ವನ್ನೈದಿದುದರಿಂದ ಶ್ರೀ ದ್ವಾರಕಾನಾಥ ತೀರ್ಥರು ಅನಂತರದ ಶಿಷ್ಯರಾಗಿ ಪೀಠವನ್ನಲಂಕರಿಸಿದರು. ಇವರ ಸಮಾಧಿಗಳು ಪರ್ತಗಾಳಿಯಲ್ಲಿವೆ. ದ್ವಾರಕಾನಾಥ ತೀರ್ಥರು ಬೆಂಗಳೂರಿನ ದ್ವಾರಕಾನಾಥ ಭವನವನ್ನು ನಿರ್ಮಾಣ ಮಾಡಿಸಿದರು. ಇತರ ಭವನಗಳ ಸಹಿತ ಮುಂಬೈಯ ವಡಾಲಾದ ರಾಮ ಮಂದಿರವನ್ನು ಅವರು ಕಟ್ಟಿಸಿದರು. ಅನಂತರ ಪಟ್ಟಕ್ಕೆ ಬಂದ ಶ್ರೀ ವಿದ್ಯಾಧಿರಾಜ ತೀರ್ಥರು 1973ರಿಂದ ಪೀಠಾಧಿಪತಿಗಳಾಗಿದ್ದು

ದೈಹಿಕ ಆರೋಗ್ಯವು ಅನನುಕೂಲಕರವಿದ್ದರೂ ಧಾರ್ಮಿಕ ಕರ್ತವ್ಯಗಳನ್ನು ಅತಿ ನಿಷ್ಠೆಯಿಂದ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ವಿಶಿಷ್ಠ ಸಾಧನೆಗೈದ ಸಾರಸ್ವತರಿಗೆ ವಿದ್ಯಾಧಿರಾಜ ಪುರಸ್ಕಾರ ಪ್ರದಾನ ಪ್ರಥೆಯನ್ನವರು ಪ್ರಾರಂಭಿಸಿದ್ದಾರೆ. 1951ರಲ್ಲಿ ಜಿ.ಎಚ್. ಖರೆಯವರು ಭಾರತೀಯ ಚಾರಿತ್ರಿಕ ದಾಖಲೆಗಳ ಕಮಿಶನಿಗೆ ಕಳುಹಿಸಿದ ವರದಿಯನ್ನಾಧರಿಸಿ ಮತ್ತು ಕಾರವಾರದ ಶ್ರೀ ಪಿ.ಎಸ್. ಕಾಮತ್ ಅವರು ಪೂರೈಸಿದ ಮಾಹಿತಿಗಳನ್ನಾಧರಿಸಿ ಈ ಬರಹವನ್ನು ಸಿದ್ಧಪಡಿಸಲಾಗಿದೆ. ಮಠದ ಶಾಖಾ ಕೇಂದ್ರಗಳು ಭಟ್ಕಳ, ಗೋಕರ್ಣ, ಬಸ್ರೂರು, ಡಿಚೋಲಿ, ಪರ್ತಗಾಳಿ, ರೇವಣ, ಮಂಗಳೂರು, ಅಂಕೋಲಾ, ಕಾರವಾರ, ವಾರಾಣಸಿ, ವಡಾಲಾ(ಮುಂಬೈ) ವಾಸ್ಕೊ, ಗಂಗೊಳ್ಳಿ, ವೆಂಕಟಾಪುರ, ಹೊನ್ನಾವರ, ಯೆಲ್ಲಾಪುರ, ಸಿದ್ಧಾಪುರ ಮತ್ತು ಬದರಿನಾಥದಲ್ಲಿವೆ.

ಶ್ರೀ ಕಾಶೀಮಠ

ವಾರಾಣಸಿ ಅಥವಾ ಕಾಶಿ ಕ್ಷೇತ್ರದಲ್ಲಿ ಮುಖ್ಯ ಕೇಂದ್ರವಿರುವ ಶ್ರೀ ಕಾಶೀಮಠವು ಸಾರಸ್ವತರ ಎರಡು ವೈಷ್ಣವ ಮಠಗಳ ಪೈಕಿ ಒಂದಾಗಿದೆ. ಮೂಲ ದಾಖಲೆಗಳನ್ನು ಪರಿಶೀಲಿಸಿ ಕಾಶೀಮಠದ ಇತಿಹಾಸವನ್ನು ಸಂಶೋಧಿಸುವಲ್ಲಿ ಡಾ। ವಿ.ಎ. ಶೆಣೈಯವರು ಗಣನೀಯ ಪರಿಶ್ರಮಗೈದಿದ್ದಾರೆ. ಈ ದಾಖಲೆಗಳಲ್ಲಿ ಪರ್ಶಿಯನ್ ಭಾಷೆಯಲ್ಲೂ ಬರೆದವುಗಳಿವೆ. ದ್ವೈತ ತತ್ತ್ವ ಮತ್ತು ವೈಷ್ಣವ ಭಕ್ತಿಪಂಥವನ್ನು ಸ್ಥಾಪನೆಗೈದ ಆಚಾರ್ಯ ಮಧ್ವರು ಗೋವಾ, ಕೇರಳ ಮತ್ತು ಕನ್ನಡ ಜಿಲ್ಲೆಗಳಲ್ಲಿ ಪ್ರವಾಸಗೈದು ಅನೇಕ ಸಾರಸ್ವತರನ್ನು ತಮ್ಮ ಪಂಥಾನುಯಾಯಿಗಳನ್ನಾಗಿ ಮಾಡಿದರು. (1238-1318) ತದನಂತರ ಶ್ರೀ ವಾದಿರಾಜರಂಥ ಮತ ಪ್ರಸಾರಕರೂ ಈ ಕಾರ್ಯವನ್ನು ಮುಂದರಿಸಿದರು. (1480-1600) ಆಚಾರ್ಯ ಮಧ್ವರು ಉಡುಪಿಯ ಅಷ್ಟಮಠಗಳಲ್ಲದೆ ಉತ್ತರಾಧಿ ಮಠವನ್ನೂ ಸ್ಥಾಪಿಸಿ ಪದ್ಮನಾಭ ತೀರ್ಥರನ್ನೂ ಜಯತೀರ್ಥರನ್ನೂ ಅನುಕ್ರಮವಾಗಿ ಈ ಮಠಾಧಿಪತಿಗಳನ್ನಾಗಿ ಮಾಡಿದರು. ಅವರೂ ಗೋಮಾಂತಕದ ಪ್ರವಾಸವನ್ನು ಮಾಡಿ ಬಹುಸಂಖ್ಯೆಯ ಶಿಷ್ಯವರ್ಗವನ್ನು ಸಂಪಾದಿಸಿದರು. 15ನೇ ಶತಮಾನದಲ್ಲಿ ರಾಮಚಂದ್ರತೀರ್ಥರು ಇಬ್ಬರು ಶಿಷ್ಯರಿಗೆ ದೀಕ್ಷೆಯನ್ನನುಗ್ರಹಿಸಿದರು. ಮತ್ತು ಅವರ ಪೈಕಿ ಶ್ರೀ ವಿಬುಧೇಂದ್ರ ತೀರ್ಥರು ಕುಂಭಕೋಣಂನಲ್ಲಿ ಹೊಸ ಮಠವನ್ನು ಸ್ಥಾಪಿಸಿದರು. ಪೂರ್ವಾದಿ ಮಠವೆಂದು ಪ್ರಸಿದ್ಧವಾದ ಈ ಮಠವು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠವೂ ಆಗಿದೆ. ಅನಂತರ ಕೇರಳದ ಮತ್ತು ಭಟ್ಕಳ ಪರ್ಯಂತದ ಕನ್ನಡ ಜಿಲ್ಲೆಯ ಸಾರಸ್ವತರೂ ಈ ಮಠಕ್ಕೆ ನಿಷ್ಠೆಯನ್ನು ಸ್ಥಾಪಿಸಿಕೊಂಡರು.

ಕುಂಭಕೋಣಮ್‌ನ ಮಠದಲ್ಲಿ ಶ್ರೀ ಸುರೇಂದ್ರ ತೀರ್ಥರು ಪೀಠಸ್ಥರಿರುವಾಗ ಅವರ ಶಿಷ್ಯದ್ವಯರಲ್ಲಿ ವಿಜಯೀಂದ್ರ ತೀರ್ಥರನ್ನು ಕೊಚ್ಚಿಯ ಸಾರಸ್ವತರು ಚಾತುರ್ಮಾಸ್ಯ ವ್ರತವನ್ನು ಕೊಚ್ಚಿಯಲ್ಲಿ ಆಚರಿಸಬೇಕಾಗಿಯೂ ಮತ್ತು ಸಾರಸ್ವತ ವಟು ಒಬ್ಬರಿಗೆ ಸನ್ಯಾಸ ದೀಕ್ಷೆಯನ್ನು ಅನುಗ್ರಹಿಸಬೇಕಾಗಿಯೂ ವಿನಂತಿಸಿಕೊಂಡರು. ವಿಜಯೀಂದ್ರ ತೀರ್ಥರು ಈ ವಿನಂತಿಯನ್ನು ಮಾನ್ಯ ಮಾಡಿ ವಟುವೊಬ್ಬರನ್ನು ಚುನಾಯಿಸಿ ಅವರನ್ನು ಕಾಶಿಗೆ ಕರೆದುಕೊಂಡು ಹೋಗಿ ಅಲ್ಲಿ ಅವರಿಗೆ ಸನ್ಯಾಸ ದೀಕ್ಷೆಯನ್ನಿತ್ತು ಯಾದವೇಂದ್ರ ತೀರ್ಥರೆಂಬ ಅಭಿದಾನವಿತ್ತು ಹೊಸಮಠ ಒಂದನ್ನು ಸ್ಥಾಪಿಸಿದರು.

ಸುರೇಂದ್ರ ತೀರ್ಥ ಶ್ರೀಪಾದರು ಶ್ರೀವ್ಯಾಸ ಹಾಗೂ ಶ್ರೀ ರಘುಪತಿಯ ಮೂರ್ತಿಗಳನ್ನವರಿಗೆ ಪೂಜನೆಗಾಗಿ ಪ್ರದಾನ ಮಾಡಿದರು. ಆ ಮೂರ್ತಿಗಳು ಈಗಲೂ ಮಠದಲ್ಲಿ ಪೂಜಿಸಲ್ಪಡುತ್ತಿವೆ. ಸಾರಸ್ವತರ ಮೇಲೆ ಅವರ ಅಧಿಕಾರದ ಸೀಮೆಗಳನ್ನು ವಿವರಗಳನ್ನು ಉಲ್ಲೇಖಿಸಿದ ಒಂದು ತಾಮ್ರ ಶಾಸನವನ್ನವರು 1542ರಲ್ಲಿ ಬರೆಯಿಸಿಕೊಟ್ಟರು. (ಎಪಿಗ್ರಾಫಿಕಾ ಇಂಡಿಕಾ, xii ಪು.340) ಯಾದವೇಂದ್ರ ತೀರ್ಥರು 1608ರಲ್ಲಿ ಭಟ್ಕಳದಲ್ಲಿ ಸಮಾಧಿಸ್ಥರಾದರು. ಅನಂತರ ಶ್ರೀ ಕೇಶವೇಂದ್ರ ತೀರ್ಥರು ಬಸ್ರೂರಲ್ಲಿ ಪರಂಧಾಮವನ್ನೈದಿದರು (1670) ಪರಂಪರೆಯಲ್ಲಿ ಅನಂತರದವರು ಶ್ರೀ ಉಪೇಂದ್ರ ತೀರ್ಥರು (ಕಾಶಿಯಲ್ಲಿ 1670ರಲ್ಲಿ ಸಮಾಧಿ) ಯಾದವೇಂದ್ರ ತೀರ್ಥ II (ಸಮಾಧಿ ಹೆಮ್ಮಾಡಿ 1711), ರಾಘವೇಂದ್ರ ತೀರ್ಥ (ಉಪೇಂದ್ರ ತೀರ್ಥರು ಆಶ್ರಮ ಕೊಟ್ಟವರು - ಸಮಾಧಿ ಕಾಶಿ 1725) ಹಾಗೂ ದೇವೇಂದ್ರ ತೀರ್ಥ (ಬಂಟ್ವಾಳ - 1734). ಶ್ರೀ ರಾಘವೇಂದ್ರ ತೀರ್ಥರು ಕಾಶಿಯಲ್ಲಿನ ಶ್ರೀಮಠದ ಸನಿಹದಲ್ಲಿಯೇ ಒಂದು ಶ್ರೀ ಲಕ್ಷ್ಮೀನರಸಿಂಹ ದೇವಾಲಯವನ್ನು ಕಟ್ಟಿಸಿದರು. ಅನಂತರದ ಸ್ವಾಮಿಗಳಾದ ಶ್ರೀ ಮಾಧವೇಂದ್ರ ತೀರ್ಥರು ಮುಂಬೈಯ ವಾಲ್ಕೇಶ್ವರದಲ್ಲಿ ಸಜೀವ ಸಮಾಧಿ ಸ್ವೀಕರಿಸಿದರು. (1755) ಜ್ಞಾನೇಂದ್ರ ತೀರ್ಥ (ನಾಸಿಕ), ಯಾದವೇಂದ್ರ ತೀರ್ಥ III (ಹೊನ್ನಾವರ - 1783), ಉಪೇಂದ್ರ ತೀರ್ಥ II (ಕಾಶಿ - 1791), ರಾಜೇಂದ್ರ ತೀರ್ಥ (ತೊರವೂರ, ಕೇರಳ - 1799), ಸುರೇಂದ್ರ ತೀರ್ಥ (ಅಲೆಪ್ಪಿ - 1831), ವಿಷ್ಣು ತೀರ್ಥ (ಕಾಶಿ), ವಿಬುಧೇಂದ್ರ ತೀರ್ಥ (ಮಂಜೇಶ್ವರ 1834) ಇವರು ಕಾಶೀಮಠ ಪರಂಪರೆಯಲ್ಲಿ ಅನಂತರ ಪೀಠಾಧಿಪತಿಗಳಾದ ಸ್ವಾಮಿಗಳಾಗಿದ್ದಾರೆ. ವಿಬುಧೇಂದ್ರ ತೀರ್ಥರನ್ನು ಶ್ರೀ ಸುರೇಂದ್ರ ತೀರ್ಥರೇ ಶಿಷ್ಯರನ್ನಾಗಿ ಸ್ವೀಕರಿಸಿದ್ದರು. ಆದರೆ ಶಿಷ್ಯರು ಗುರುಗಳಿಗಿಂತ ಮೊದಲೇ ಗತಿಸಿದ್ದರು. ಇದರ ಬಗ್ಗೆ ಜಿಜ್ಞಾಸೆ ಇದೆ.

ಪರಂಪರೆಯಲ್ಲಿ ಪ್ರಖ್ಯಾತರಾದ ಶ್ರೀ ಭುವನೇಂದ್ರ ತೀರ್ಥರು ವೇದ ವಿಶಾರದರಾಗಿದ್ದರಲ್ಲದೆ ಆಯುರ್ವೇದದ ಪಾಂಡಿತ್ಯವಿದ್ದವರೂ ಆಗಿದ್ದರು. ಶ್ರೀ ಸುಮತೀಂದ್ರರು ಇವರ ಗುರುಗಳಾಗಿದ್ದರು (ಅಲೆಪ್ಪಿಯಲ್ಲಿ 1852 ರಲ್ಲಿ ಸಮಾಧಿಸ್ಥರಾದರು). ಶ್ರೀ ಭುವನೇಂದ್ರ ತೀರ್ಥರ ಮೊದಲು ಶ್ರೀ ವಸುಧೇಂದ್ರ ತೀರ್ಥರಿಗೆ ಸನ್ಯಾಸ ದೀಕ್ಷೆಯನ್ನು ಕೊಟ್ಟಿದ್ದರಾದರೂ ಅವರು ಮಂಜೇಶ್ವರದಲ್ಲಿ 1859ರಲ್ಲಿ ನಿರ್ವಾಣವನ್ನೈದಿದರು. ಶ್ರೀ ಭುವನೇಂದ್ರ ತೀರ್ಥರು ಕಲಾರಾಧಕರಾಗಿಯೂ ಶಿಲ್ಪಕಲಾಸಕ್ತರಾಗಿಯೂ ಇದ್ದರು. ಅವರ ಸಮಾಧಿಯು ಬಸ್ರೂರಲ್ಲಿದೆ (1886). ಅವರ ಶಿಷ್ಯ ಶ್ರೀ ವರದೇಂದ್ರ ತೀರ್ಥರು ವಾಲ್ಕೇಶ್ವರದಲ್ಲಿ 1914ರಲ್ಲಿ ಮುಕ್ತರಾದರು. ಅನಂತರದ ಯತಿಗಳಾದ ಶ್ರೀ ಮತ್ಸುಕೃತೀಂದ್ರ ತೀರ್ಥರು 1949ರಲ್ಲಿ ಸಮಾಧಿಸ್ಥರಾದರು.

ಪ್ರಕೃತ ಪೀಠಾಧಿಪತಿಗಳಾಗಿರುವ ಶ್ರೀ ಮತ್ಸುಧೀಂದ್ರ ತೀರ್ಥರು ಹರಿದ್ವಾರದಲ್ಲಿನ ವ್ಯಾಸಮಂದಿರ, ಕಾಲ್ಪಿಯಲ್ಲಿನ ವೇದವ್ಯಾಸ ಸ್ಮಾರಕ-ದ ಜೀರ್ಣೋದ್ಧಾರ, ತಿರುಪತಿ, ಬೆಂಗಳೂರು, ಕೋಳಿಕ್ಕೋಡ್ ಮತ್ತು ಭಾಗಮಂಡಲದಲ್ಲಿನ ನವನಿರ್ಮಿತ ಮಠಗಳ ಕಾರಣದಿಂದ ಸದಾ ಸ್ಮರಣೀಯರಾಗಿದ್ದಾರೆ. ಅವರು 1989ರ ಜುಲೈ 7ರಂದು ರಾಘವೇಂದ್ರ ತೀರ್ಥರನ್ನು ಶಿಷ್ಯರೆಂದು ಪರಿಗ್ರಹಿಸಿದರು. ಕಾಶೀಮಠದ ಶಾಖಾಮಠಗಳು ಕಾಶಿ, ಪ್ರಯಾಗ, ಹರಿದ್ವಾರ, ಭಟ್ಕಳ, ಬಸ್ರೂರು, ಹೆಮ್ಮಾಡಿ, ಬಂಟ್ವಾಳ, ಪಣಂಬೂರು, (ಸುರತ್ಕಲ್) ಮಂಜೇಶ್ವರ, ರಾಮೇಶ್ವರ, ಕಾರ್ಕಳ, ನಯಂಪಳ್ಳಿ

(ಉಡುಪಿಯ ಸಮೀಪ) ಭಾಗಮಂಡಲ (ಕೊಡಗು), ಬಾಂದೋರಾ (ಗೋವಾ), ಪಳ್ಳಿಪುರಂ (ಕೇರಳ), ಮಂಚಕಲ್, ನಾರಾವಿ, ಅಲೆಪ್ಪಿ, ಕೊಂಚಾಡಿ, ಹಂಗಾರಕಟ್ಟೆ, ತಿರುಪತಿ, ಬೆಂಗಳೂರು ಮತ್ತು ಕೋಳಿಕ್ಕೋಡ್ ಇಲ್ಲಿವೆ. ಮಂಗಳೂರು, ಕಾರ್ಕಳಗಳಲ್ಲಿ ಪೌರೋಹಿತ್ಯ ಕಲಿಸುವ ಒಂದು ಶಾಲೆಯನ್ನು ಕಾಶೀಮಠವು ನಡೆಸುತ್ತದೆ.

ದಕ್ಷಿಣ ಕನ್ನಡ ಮತ್ತು ಕೇರಳಗಳಲ್ಲಿ ಕಾಶೀಮಠದ ಬಹುಸಂಖ್ಯೆಯ ಶಿಷ್ಯ ವರ್ಗದವರಿದ್ದಾರೆ.

ಸಮಾಜದ ಮೇಲೆ ಉತ್ತಮ ಸಂಸ್ಕಾರಗಳನ್ನು ಬಿಂಬಿಸುವಲ್ಲಿ ಮಠಗಳ ಪಾತ್ರವು ಮುಖ್ಯವಾಗಿದೆ. ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಇಂದಿನ ಭೌತಿಕ ಲೋಲುಪತೆಯು ತುಂಬಿರುವ ಜಗತ್ತಿನಲ್ಲಿ ಎತ್ತಿ ಹಿಡಿಯುವ ಕಾರ್ಯವನ್ನು ಮಠಗಳು ಮಾಡಿವೆ. ಸಂಪತ್ತಿನ ಶೇಖರಣೆ ಮತ್ತು ಮನೋಕಾಮನಾ ಪೂರ್ತಿಯಾದಾಗ ಧರ್ಮವನ್ನು ಮರೆಯಬಾರದು. ಮನುಷ್ಯನ ಪರಮಗಮ್ಯವು ಮೋಕ್ಷವೆಂಬುದನ್ನು ಯಾವಾಗಲೂ ಅಲಕ್ಷಿಸಬಾರದೆಂದು ಮಠಗಳ ಸ್ವಾಮಿಗಳು ಪದೇಪದೇ ಉಪದೇಶಿಸಿ ಜಾಗೃತಿಯನ್ನು ಉಂಟುಮಾಡಿದ್ದಾರೆ. ಸ್ವಾಮಿಗಳ ಪದತಲದಲ್ಲಿದ್ದು ಈ ಮೌಲ್ಯಗಳನ್ನು ಕಲಿಯುವ ಅನುಕೂಲವು ಸಮಾಜಕ್ಕೆ ಯಾವಾಗಲೂ ಪ್ರಾಪ್ತವಾಗಿದೆ.

ಉಪಸಂಹಾರ

ಸುಂದರ, ಸುವಾಸನೆಯ ಪುಷ್ಪಗಳನ್ನೀಯುವುದರಿಂದ ಅಥವಾ ಸ್ವಾದಿಷ್ಟ ಫಲಗಳನ್ನೀಯುವುದರಿಂದ ಮರಗಳು ಉಪಯೋಗಿಯೆಂದು ತಿಳಿಯಲ್ಪಡುತ್ತಿವೆ. ಅದೇ ರೀತಿ ಮಹಾಪುರುಷ ಅಥವಾ ಸ್ತ್ರೀಯರಿಗೆ ಜನ್ಮವಿತ್ತುದರಿಂದ ಯಾವುದೇ ಸಮಾಜದ ಮಹತ್ತು ತಿಳಿಯಲ್ಪಡುತ್ತದೆ. ಶತಮಾನಗಳ ಕಾಲಾವಧಿಯಲ್ಲಿ ನಮ್ಮ ಸಮಾಜವು ಜನ್ಮವಿತ್ತ ಸಮಾಜ ಸೇವಕರು, ದೇಶಭಕ್ತರು, ವಿದ್ವಾಂಸರು (ಚರಿತ್ರಕಾರರು, ಆರ್ಥಿಕ ತಜ್ಞರು, ವಿಜ್ಞಾನಿಗಳು) ಕಲಾಕಾರರು ಮತ್ತಿತರ ಶ್ರೇಷ್ಠರ ಹೆಸರಿನ ಪಟ್ಟಿ ಮಾಡುವ ಆವಶ್ಯಕತೆ ಇದೆಯೆಂದು ನನಗನಿಸುವುದಿಲ್ಲ. ಅಸಂಖ್ಯ ವಿದ್ಯಾಶಾಲೆಗಳು, ದೇವಾಲಯಗಳು, ಉದ್ಯಮಗಳನ್ನು ಸ್ಥಾಪಿಸಿ ದೇಶದ ಸಮೃದ್ಧಿಗೆ ಸಮಾಜವು ಮಹತ್ತರ ದೇಣಿಗೆಯನ್ನಿತ್ತಿದೆ. ಆದರೆ ಇಷ್ಟೇ ಸಾಧನೆಯಿಂದ ನಾವು ನಿಶ್ಚಿಂತರಾಗಿ ಕೂರುವುದಲ್ಲ. ನಮ್ಮ ಸಮಾಜವೀಗ ಸಂಪತ್ತಾರಾಧಕವಾಗಿದೆ, ಒಬ್ಬನ ಆದಾಯ, ಆತನ ಆಸ್ತಿ ಸಂಗ್ರಹದ ಮೇಲಿಂದ ಆತನ ಮೌಲ್ಯಮಾಪನ ಮಾಡುವ ಪ್ರವೃತ್ತಿ ರೂಢವಾಗುತ್ತಿರುವಂತೆ ಭಾಸವಾಗುತ್ತಿದೆ. ಸಂಸ್ಕೃತದ ಅಧ್ಯಯನವನ್ನು ನಾವು ಪೂರ್ಣತಯಾ ಬಿಟ್ಟುಕೊಟ್ಟಿದ್ದೇವೆ ಮತ್ತು ಮಾನವಿಕ ವಿಜ್ಞಾನಗಳ ಕಲಿಕೆಯನ್ನೂ ತ್ಯಜಿಸಿದ್ದೇವೆ. ನಮ್ಮಲ್ಲಿ ವಿಜ್ಞಾನಿಗಳಿದ್ದಾರೆ, ಎಂಜಿನಿಯರರಿದ್ದಾರೆ, ಡಾಕ್ಟರುಗಳಿದ್ದಾರೆ, ವ್ಯಾಪಾರಿಗಳಿದ್ದಾರೆ. ಆದರೆ ಸಂಸ್ಕೃತದ ಶ್ರೇಷ್ಠ ವಿದ್ವಾಂಸರು ನಮ್ಮಲ್ಲಿಲ್ಲ. ನಮ್ಮ ಮಕ್ಕಳಿಗೆ ಸಂಸ್ಕೃತ ಕಲಿಸುವ, ಕನಿಷ್ಠ ಜ್ಞಾನವನ್ನೀಯುವ ಪ್ರಯತ್ನವೂ ನಡೆಯುತ್ತಿಲ್ಲ. ತತ್ತ್ವಶಾಸ್ತ್ರ, ಗಣಿತ, ಖಗೋಲ ವಿಜ್ಞಾನ, ರಸಾಯನ ಶಾಸ್ತ್ರ ಮತ್ತು ಸಮಾಜ ವಿಜ್ಞಾನ ಇತಿಹಾಸದಂತಹ ಮಾನವಿಕ ಶಾಸ್ತ್ರಗಳ ಗಣನೆ ಮಾಡುವಾಗ ಸಂಸ್ಕೃತವು ಜ್ಞಾನದ ಅಪರಿಮಿತ ಭಂಡಾರವಾಗಿದೆ. ನಮ್ಮ ತರುಣ ಜನಾಂಗವು ಸಂಗೀತ, ನೃತ್ಯಗಳಂತಹ ಲಲಿತಕಲೆಗಳ ಕಡೆಗೆ ಗಮನವೀಯಬೇಕು. ನಮ್ಮ ಪೂರ್ವೇತಿಹಾಸವನ್ನು ಪ್ರಶಸ್ತ ರೀತಿಯಲ್ಲಿ ವಿವರಿಸಲು ಶಕ್ತರಾದ ಯುವಕರ ಆವಶ್ಯಕತೆ ನಮಗಿದೆ. ನಮ್ಮ ಸ್ವಧರ್ಮದ ಯಥಾರ್ಥ ಜ್ಞಾನವಿದ್ದು ಅದರ

ಸಮರ್ಪಕ ವಿವರಣೆ ಮಾಡಬಲ್ಲವರು ಹಾಗೂ ನಮ್ಮ ತತ್ತ್ವಜ್ಞಾನ ಸಂಸ್ಕೃತಿಗಳನ್ನು ಯೋಗ್ಯ ರೀತಿಯಲ್ಲಿ ಅವಲೋಕಿಸಿ ನಮ್ಮ ಪ್ರಾಚೀನ ಪದ್ಧತಿಯಲ್ಲೇನಾದರೂ ಊನವಿದ್ದರೆ ಅದನ್ನು ವಿಶ್ಲೇಷಿಸಿ ತಿಳಿಯಪಡಿಸುವಷ್ಟು ಜ್ಞಾನವಿರುವವರು, ಸಂಗತವಿರದ ಸಂಪ್ರದಾಯಗಳನ್ನು ವರ್ಜಿಸುವಂತೆ ಮಾಡುವ ಶಕ್ತಿ ಇರುವ, ವರ್ತಮಾನ ಜಗತ್ತಿನಲ್ಲಿ ಸಮರ್ಪಕ ವಿಧಾನಗಳಿಂದ ನಾವು ಜೀವಿಸಲನುಕೂಲವಾಗುವ ರೀತಿ ನಮ್ಮ ಅಮೂಲ್ಯ ಧಾರ್ಮಿಕ ತತ್ತ್ವಗಳನ್ನು ಪ್ರಕಾಶಗೊಳಿಸುವ ಸಾಮರ್ಥ್ಯವಿರುವ ವ್ಯಕ್ತಿಗಳ ಬಹು ಆವಶ್ಯಕತೆಯಿದೆ. ನಮ್ಮ ಪೂರ್ವಜರು ಜೀವನದ ಒಂದು ಸಮಗ್ರ ಚಿತ್ರಣವನ್ನು ನಮಗೆ ಕೊಟ್ಟಿರುತ್ತಾರೆ. ಚತುರ್ವಿಧ ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳು ಕರ್ತವ್ಯಗಳೆಂದು ಅವರು ಆ ದರ್ಶನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಧರ್ಮವೆಂದರೆ ದೇವಸ್ಥಾನಗಳಿಗೆ ಹೋಗಿ ದೇವರ ಭೇಟಿ ಮಾಡುವುದು, ಗುರುಗಳ ಪಾದಪೂಜೆ ಮಾಡುವುದು ಇಷ್ಟೆ ಆಗಿಲ್ಲ. ಇಂತಹ ನಮ್ಮ ಕಾರ್ಯಗಳು ಬಹುತೇಕ ಪ್ರಾಯಶ್ಚಿತ ರೂಪದವುಗಳಿವೆ. ಮತ್ತು ಇವುಗಳಿಗೆ "ಅನ್ಯಕ್ಷೇತ್ರೇ ಕೃತಂ ಪಾಪಂ ಪುಣ್ಯಕ್ಷೇತ್ರೇ ವಿನಶ್ಯತಿ," ಎಂಬ ಉಕ್ತಿಯು ಬಹುಮಟ್ಟಿಗೆ ಪ್ರೇರಕವಾಗಿರುತ್ತದೆ. ವಿನಾ ಅದು ಶುದ್ಧ ಬುದ್ಧಿ ಪ್ರೇರಿತವಿರುವುದಿಲ್ಲ.

ಧರ್ಮದ ಮೇಲೆ ನಮ್ಮ ಶ್ರದ್ಧೆಯು ದೃಢವಿದ್ದುದು ನಿಜವಾಗಿದ್ದರೆ ನಾವು ವರದಕ್ಷಿಣೆಯ ದ್ವಾರಾ ದುಡ್ಡು ಸಂಪಾದಿಸುವ ಅಡ್ಡದಾರಿ ಹಿಡಿಯುತ್ತಿರಲಿಲ್ಲ. ಇದೊಂದು ಉದಾಹರಣೆಯಷ್ಟೇ ಎನ್ನುತ್ತೇನೆ.

ಚಿತ್ಪಾವನ ಅಥವಾ ಶ್ರೀವೈಷ್ಣವ (ಅಯ್ಯಂಗಾರ್) ಸಮಾಜಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅವುಗಳಲ್ಲಿ ಜನ್ಮತಳೆದ ಮಹಾಪುರುಷರನ್ನು ತುಲನೆ ಮಾಡಿ ಹೇಳುವಾಗ ನಮ್ಮ ಸಮಾಜವು ಶ್ರೇಷ್ಠವಾದುದೇ ಆದರೂ ಆ ಸಮಾಜಗಳನ್ನು ಸರಿಗಟ್ಟುವಂತದಲ್ಲ. ನಾವು ಮಾಡಿದಂತೆ ಅವು ಸಂಸ್ಕೃತಕ್ಕೆ ತಿಲಾಂಜಲಿಯಿತ್ತಿಲ್ಲ. ಶತಶತಮಾನಗಳ ಕಾಲ ನಮ್ಮ ಪೂರ್ವಜರು ಮಾಡಿದ ಸಂಸ್ಕೃತಾಧ್ಯಯನದ ಫಲವಾಗಿ ನಮ್ಮ ಸಮಾಜವು ಮೇಧಾವಿಗಳನ್ನು ಹೊಂದಿದೆ. ನಮ್ಮ ತರುಣ ಜನಾಂಗವು ಸಂಸ್ಕೃತ ಶಿಕ್ಷಣವನ್ನು ಸ್ವೀಕರಿಸುವಂತೆ ಮಾಡಲು ನಾವೇನಾದರೂ ಉಪಾಯವನ್ನು ಮಾಡುವುದು ಅತ್ಯಂತ ಆವಶ್ಯಕವಿದೆ. ಅದೇನುಪಾಯವೆಂದು ಕಂಡು ಹಿಡಿಯುವುದನ್ನು ನಾನಿಲ್ಲಿ ನೆರೆದ ಹಿರಿಯರಿಗೆ ವಹಿಸುತ್ತೇನೆ. "ಉದರ ನಿಮಿತ್ತಂ" ಎಂದು ಕೆಲವು ಪುರೋಹಿತರು ಹಾಗೂ ಭಟ್‌ಜೀಗಳು ಅಷ್ಟಿಷ್ಟು ಸಂಸ್ಕೃತವನ್ನು ಕಲಿಯುತ್ತಾರೆ. ಮತ್ತು ಅವರ ವಿಷಯವಾಗಿಯೂ ನಮ್ಮಲ್ಲಿರುವ ಗೌರವಾದರಗಳು ಹಾರ್ದಿಕವಾದವುಗಳಲ್ಲ. ಜ್ಞಾನದ ಸಲುವಾಗಿ ಜ್ಞಾನವನ್ನು ಹೊಂದಬೇಕು. ಕೇವಲ ಉದರಂಭರಣಕ್ಕಾಗಿ ಅಲ್ಲ ಎಂಬುದನ್ನು ನಾವು ಸಾರಸ್ವತರು ಅರಿತುಕೊಂಡು ಸರಸ್ವತಿಯ ನೈಜ ಆರಾಧಕರು ನಾವಾಗಬೇಕು. ಇಂತಹ ಒಂದು ಜ್ಞಾನವಂತ ಸಮಾಜವು ಮಾತ್ರ ಚಿಂತಕರಿಗೆ ರಚನಾತ್ಮಕ ಗುಣವಿರುವ ಮಹಾಪುರುಷರನ್ನು ನಿರ್ಮಿಸಿ ಸಮಾಜಕ್ಕೆ ಉತ್ತಮ ಮಾರ್ಗದರ್ಶನವಿತ್ತು ಸಮಾಜವನ್ನು ಇನ್ನಷ್ಟು ಪರಾಕಾಷ್ಠೆಗೆ ತಲುಪಿಸೀತು.

ಶ್ರೀಮದ್ವಿದ್ಯಾಧಿರಾಜ ತೀರ್ಥ ಸ್ವಾಮಿ ಒಡೆಯರ್‌ರವರು ಸನ್ಯಾಸಾಶ್ರಮ ಸ್ವೀಕರಿಸಿ 25 ವರುಷಗಳು ಪೂರ್ಣವಾದ ಈ ಸಂದರ್ಭದಲ್ಲಿ (1992) ಇದನ್ನು ಬರೆಯಲು ನನಗೆ ತಿಳಿಸಲಾಗಿದೆ. ಶತಮಾನಗಳ ಹಿಂದೆ ಸಮಾಜವು ಚದುರಿಹೋಗುವ ಸಮಯದಲ್ಲಿ ಅದನ್ನು ಏಕೀಕರಿಸಿಟ್ಟುಕೊಳ್ಳಲು

ಈ ಮಠವು ಬಹಳ ಶ್ರಮವಹಿಸಿದೆ. ಮಠದ ಯತಿಗಳು ತಪಸ್ಯಾಯುಕ್ತ ವಿದ್ವತ್‌ಪೂರ್ಣ ಜೀವನವನ್ನು ಕೈಗೊಂಡದ್ದು ಮಾತ್ರವಲ್ಲದೆ ತಿರಸ್ಕೃತರು, ಹತೋತ್ಸಾಹಿಗಳು, ಅತ್ಯಂತ ನಿರಾಶ ಜನರಿಗೂ ಜೀವನೋತ್ಸಾಹ ಕೊಟ್ಟು ಅವರ ಉನ್ನತಿಯನ್ನೂ ಸಾಧಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ. ವರ್ತಮಾನ ಪೀಠಾಧಿಪತಿಗಳು ತರುಣ ವಯಸ್ಸಿನವರಿದ್ದು ಅಸಮರ್ಪಕ ಆರೋಗ್ಯ ಹೊಂದಿದ್ದರೂ ಅನೇಕ ಸಾಧನೆಗಳನ್ನು ಪ್ರಾಪ್ತ ಮಾಡಿಕೊಂಡವರಿದ್ದಾರೆ. 1977ರಲ್ಲಿ ಮಠ ಸ್ಥಾಪನೆಯ ಪಂಚ ಶತಾಬ್ದವು ವೈಭವದಿಂದ ಆಚರಿಸಲ್ಪಟ್ಟಿದೆ. ಸಂಸ್ಥಾನದ ಭಟ್ಕಳ ವಾರಾಣಸಿ (ಕಾಶಿ), ರೇವಣ್, ಬಸ್ರೂರು, ಅಂಕೋಲಾ ಮತ್ತು ವೆಂಕಟಾಪುರದಲ್ಲಿರುವ ಶಾಖಾ ಮಠಗಳನ್ನು ಜೀರ್ಣೋದ್ಧಾರ ಗೈಸಿದ ಶ್ರೇಯವು ಅವರದು. ಮಂಕಿ ಮತ್ತು ಯಲ್ಲಾಪುರಗಳಲ್ಲಿ ಎರಡು ಹೊಸ ಮಠಗಳನ್ನು ಕಟ್ಟಿಸಿದ ಕೀರ್ತಿಯು ಅವರದು. ಪರ್ತಗಾಳಿ ಮತ್ತು ಬೆಂಗಳೂರು ಮಠಗಳನ್ನು ವಿಸ್ತೃತವಾಗಿ ಪುನರ್ನಿರ್ಮಾಣಗೈಸಲು, ಅನೇಕ ದೇವಾಲಯಗಳ ಜೀರ್ಣೋದ್ಧಾರ ಮಾಡಿಸಿ ಚೈತನ್ಯಶಾಲಿಗಳನ್ನಾಗಿ ಮಾಡಲು ಕಾರಣಕರ್ತರಾಗಿದ್ದಾರೆ. ಪರ್ತಗಾಳಿಯಲ್ಲಿ ಒಂದು ಸಂಸ್ಕೃತ ಪಾಠಶಾಲೆ ಮತ್ತು ಉತ್ತಮ ಗ್ರಂಥಾಲಯ ಸ್ಥಾಪನೆಯು ಅತ್ಯಂತ ಪ್ರಶಂಸನೀಯವಾಗಿವೆ. ಸಮಾಜದ ವಿಶಿಷ್ಟ ಸಾಧಕ ವ್ಯಕ್ತಿಯೋರ್ವರನ್ನು ಪ್ರತಿ ವರ್ಷ ಆರಿಸಿ ಅವರನ್ನು ವಿದ್ಯಾಧಿರಾಜ ಪುರಸ್ಕಾರದಿಂದ ಸಮ್ಮಾನಿಸುವ ಪ್ರಥೆಯನ್ನು ಪ್ರಾರಂಭಿಸಲಾಗಿದೆ ಮತ್ತು ಈ ಪ್ರಕ್ರಮವು ಸಮಾಜದ ಸದಸ್ಯರಿಗೆ ಬಹು ಪ್ರೋತ್ಸಾಹದಾಯಕವಾಗಿದೆ. ದೇವರೊಡನೆ ನನ್ನ ಪ್ರಾರ್ಥನೆಯಿದೆ. ಏನೆಂದರೆ ಶ್ರೀ ಸ್ವಾಮೀಜಿಯವರು ಸಮಾಜಕ್ಕೆ ಇದೇ ರೀತಿ ಸುದೀರ್ಘಕಾಲ ಸ್ಫೂರ್ತಿಯೀಯುತ್ತ, ಸಮಾಜದ, ದೇಶದ ಹಾಗೂ ಜಗತ್ತಿನ ಸೇವೆಗೆ ಅವಕಾಶವು ದೊರೆಯಲಿ.

ನಮ್ಮ ಸಮಾಜದ ಇತಿಹಾಸದ ಬಗೆಗಿನ ನನ್ನ ಚಿಂತನೆಗಳನ್ನು ನಿಮ್ಮ ಮುಂದೆ ಯೋಗ್ಯ ರೀತಿಯಲ್ಲಿ ಮಂಡಿಸುವ ಸದವಕಾಶವೊಂದು ಸಿಕ್ಕಿದುದು ನನಗೆ ತುಂಬಾ ಗೌರವದ ವಿಷಯವಾಗಿದೆ. ಈ ಕಾರ್ಯವಿಡೀ ಅವಸರವಸರವಾಗಿ ಮತ್ತು ಮಾನಸಿಕ ಒತ್ತಡದಡಿಯಲ್ಲೇ ನಡೆದಿದೆ. ಸ್ವಾಮೀಜಿಯವರ ಆಶೀರ್ವಾದದ ಬಲದಿಂದಲೇ ಇದು ಸಾಧ್ಯವಾಗಿದೆ. ಇದನ್ನು ಇನ್ನೂ ಉತ್ತಮವಾಗಿ ಮಾಡಲು ಸಾಧ್ಯವಾಗುತ್ತಿತ್ತು. ಉತ್ತಮ ರೀತಿಯಿಂದ ಮಾಡಲು ಶಕ್ತರಾದ ವಿದ್ವಾಂಸರೂ ಇದ್ದರು. ಇದರಲ್ಲಿನ ಊನಗಳು ಹಾಗೂ ನನ್ನ ಶಕ್ತಿಯಲ್ಲಿನ ನ್ಯೂನತೆಗಳ ಬಗೆಗೂ ನನಗೆ ಚೆನ್ನಾಗಿ ಅರಿವಿದೆ. ಆದರೆ ನಾನು ಅನಾವಶ್ಯಕ ಉತ್ತೇಜಕ ವಿಚಾರಗಳನ್ನು ಮಂಡಿಸುವ ಪ್ರಯತ್ನ ಮಾಡಿಲ್ಲ ಮತ್ತು ಪ್ರಾಮಾಣಿಕ ಚಿತ್ರಣವೊಂದನ್ನು ನೀಡಿದ್ದೇನೆ.

ಆಯ್ದ ಆಧಾರ ಗ್ರಂಥಗಳು

Agarval D.P. "What happened to the river Saraswati" Science Age Feb. 1984.

Conlon, Frank F.A. Caste in a changing world. The Chitrapur Saraswat Bhahmans, 1700-1735 University of California Press 1977.

Gune V.T. (Ed.) Gazetteer of the Union Territory of Goa, Daman and Diu, Panaji, 1979.

Hattiangadi, Gopal Ş(Ed.) Fifty years of bliss. Bombay 1965 (R.N. Saletores article in this)

Janardhan, P.B.A. Higher Konkani Grammer. Published by the Author at 3, II Canal Cross Road, G. Nagar, Chennai. 600 020, 1991 pp 1-37.

Joshi Pandit Mahadev Shastry (Ed) Bharatiya Samskrita KOBH (Marath) Vol. ix Pune. 1976.

Kamath K. Vishwanath (Ed) Sri Sadguru Pooja, Basrur, 1986.

Kamath Suryanath U. A. Concise History of Karnataka, Bangalore, 1980.

Kamath Suryanath U. "Social Change in Dakshina Kannada : Certain Trends" Quarterly Journal of the Mythic Society, Vol LXXXI Nos 1-2, Bangalore 1990.

Kamath Suryanath U. (Ed.) Uttara Kannada District Gazettee, Bangalore, 1985

Khare, G.H. "The Archives of the Vaishnava Matha of Saraswath Brahmans at Partagali" Indian Historical Records Commission Proceedings, Vol XXVIII New Delhi 1952.

Kudva V.N. History of the Dakshinatya Saraswats 2nd Edition, Madras 1978.

Mallya Purushotam P. "Kerala Saraswats" (article).

Menon A. Sreedhara (Ed) Kerala District Gazetteer, Ernakulam 1965.

Mann, R.S. "Two lost Rivers of the Indo Gangetic Devide" Haryana Review.

Moraes G.M. The Kadamba Kula, Bombay 1931.

Prabhu M. Mukunda "Sarasvats – A Historical Survey" 6th Saraswathi Conference Souvenir.

Chaturmasa Committee, Sri Venkatramana Temple, Kallianpur, 1989.

The Samyukta Saraswat Vol II NO 2 (1974) Article by S.V. Pikale on Kavale Matha and by Dr. V.A. Shenai on Kashi Matha.

Sethu Madhava Rao P. (Ed) Ratnagiri District Gazetteer, Bombay, 1962.

Shenai V.A. Gowd Saraswath Brahmin Community (Some Facts) Bombay, 1962.

Suvarna Degula (Souvenir) Sri Venkatramana Temple, Kalyanpur, 1989.

Sturrock J. South Canara Mannal, Madras 1894.

Shastri B.S. Keladi Arasaru Hagu Portugisaru (Kan) Dharwad, 1972.

Swaminathan K.D. Nayakas of IKKERI, Madras, 1957.

Epigraphical Series like epigraphia Carnatica, South Indan Inscriptions, Annual Report of Progress of Kannada Research etc., have been consulted -

(Notes and information supplied by Sri Sadashiva Shaunbhag, Retd. Teacher, Kundapur and the late Sri P.S. Kamath, Advocate, Karwar, have been copiously used.)

ಸರಸ್ವತೀ ನದಿಯ ಬಗ್ಗೆ ಇತ್ತೀಚೆಗಿನ ಬರಹ :

"Remote sensing helps to trace the course of the Saraswati" Space India (ISRO, Bangalore), Jan – March, 2002.

ಲೇಖಕರು : A.K. Gupta, Dr. G. Sreenivasan and Dr. J.R. Sharma, Regional Remote sensing Service Circle, Jodhpur.-

ಗೌಡ ಸಾರಸ್ವತರ ಮೂಲ ಮತ್ತು ಪ್ರಸರಣ

1992ರ ಫೆಬ್ರುವರಿಯಲ್ಲಿ ಪರ್ತಗಾಳಿಯಲ್ಲಿ ಶ್ರೀ ಸಂಸ್ಥಾನ ಗೋಕರ್ಣ ಮಠಾಧೀಶ ಶ್ರೀ ಮದ್ವಿದ್ಯಾಧಿರಾಜ ಶ್ರೀಪಾದ ವಡೇರ್ ಸ್ವಾಮೀಜಿಯವರ ಸನ್ಯಾಸಗ್ರಹಣದ ರಜತ ಮಹೋತ್ಸವ ಸಂದರ್ಭದಲ್ಲಿ, ಈ ಗ್ರಂಥಕರ್ತನು ಮಾಡಿದ ಭಾಷಣದ ಮೂಲಪಾಠವು ಈ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ. ಇದು ಗೌಡ ಸಾರಸ್ವತ ಬ್ರಾಹ್ಮಣರ ಮಠಗಳ, ಅವರ ಮೂಲ ಮತ್ತು ಪ್ರಸರಣ ಹಾಗೂ ಸಂಸ್ಕೃತಿಗಳ ಸಂಕ್ಷಿಪ್ತ ಮತ್ತು ವಸ್ತುನಿಷ್ಠ ಇತಿಹಾಸವನ್ನು ಪ್ರಸ್ತುತಗೊಳಿಸುವ ಪ್ರಥಮ ಪ್ರಯತ್ನವಾಗಿದೆ. ಇತ್ತೀಚಿನ ಸಾಹಿತ್ಯಿಕ ಹಾಗೂ ಪುರಾತತ್ತ್ವ ಶೋಧನೆಗಳ ಪ್ರಮಾಣಗಳನ್ನು ಹೊಂದಿ ಯಥೇಷ್ಟ ಅಧಿಕೃತವಾಗಿದ್ದು ಪ್ರತಿಯೋರ್ವ ಗೌಡ ಸಾರಸ್ವತ ಮಾತಾಪಿತರು ತಾವು ಓದುವುದು ಮಾತ್ರವಲ್ಲದೆ ಮುಂದಿನ ಪೀಳಿಗೆಯ ಮಕ್ಕಳು, ಯುವ ಜನಾಂಗಕ್ಕೂ ಈ ಜ್ಞಾನವನ್ನು ಪಸರಿಸಬೇಕೆಂಬ ಕಳಕಳಿಯದ್ದಾಗಿದೆ.



ಡಾ| ಸೂರ್ಯನಾಥ ಉಪೇಂದ್ರ ಕಾಮತ್ (ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ 1937ರಲ್ಲಿ ಜನನ) ಓರ್ವ ಶ್ರೇಷ್ಠ ಇತಿಹಾಸಕಾರರಾಗಿದ್ದಾರೆ. ಅವರು ತಮ್ಮ ಇತಿಹಾಸದ ಪಿ.ಎಚ್.ಡಿ. ಪದವಿಯನ್ನು ಮುಂಬೈ ವಿಶ್ವವಿದ್ಯಾಲಯದಿಂದ ಸಂಪಾದಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಹದಿಮೂರು ವರ್ಷಗಳ ಕಾಲ ಅಧ್ಯಾಪನ ವೃತ್ತಿಯ ಬಳಿಕ ಕರ್ನಾಟಕ ಗೆಝೆಟಿಯರ್‌ನ ಪ್ರಧಾನ ಸಂಪಾದಕರಾಗಿಯೂ ಕರ್ನಾಟಕ ರಾಜ್ಯ ಪುರಾತತ್ತ್ವಾಗಾರ (Archives) ಇದರ ನಿರ್ದೇಶಕರಾಗಿಯೂ ದುಡಿದು 1995ರಲ್ಲಿ ನಿವೃತ್ತರಾದರು. ಕರ್ನಾಟಕದ ಇತಿಹಾಸವನ್ನು ಕುರಿತ ಅವರ ಗ್ರಂಥವು ಅವರಿಗೆ ಸಾಹಿತ್ಯ ಮತ್ತು ಇತಿಹಾಸಕ್ಕಾಗಿರುವ 1971ನೇ ವರ್ಷದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಗಳಿಸಿಕೊಟ್ಟಿತು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಕಾದಂಬರಿಗಳು ಹಾಗೂ ಸಣ್ಣ ಕತೆಗಳನ್ನೊಳಗೊಂಡಂತೆ ಅರುವತ್ತಕ್ಕೂ ಮಿಕ್ಕಿದ ಸಂಖ್ಯೆಯ ಪುಸ್ತಕಗಳನ್ನು ಬರೆದ ಶ್ರೇಯ ಅವರದು. ಸದ್ಯ ಅವರು ಬೆಂಗಳೂರಿನಲ್ಲಿರುವ ಮಿಥಿಕ್ ಸೊಸೈಟಿ ಹಾಗೂ ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷರಾಗಿರುತ್ತಾರೆ.